₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 21.11.2025 ಸಂಪುಟ: 68 ಸಂಚಿಕೆ: 199 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ನ.25ಕ್ಕೆ ಬೆಂಗಳೂರಿನಲ್ಲಿ ಶುಭಾಂಶು ಶುಕ್ಲಾ

ಬಾಹ್ಯಾಕಾಶ ಯಾನ ಮಾಡಿ ದಾಖಲೆ ನಿರ್ಮಿಸಿರುವ ಪ್ರಖ್ಯಾತ ಗಗನಯಾನಿ ಶುಭಾಂಶು ಶುಕ್ಲಾ ನ.25ರಂದು ಬೆಂಗಳೂರಿನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗ ವಹಿಸಲಿದ್ದಾರೆ. ಜವಾಹರಲಾಲ್ ನೆಹರೂ ಪ್ಲಾನೆಟೋರಿಯಂನ ಯು.ಆರ್. ರಾವ್ ಭವನದಲ್ಲಿ ಸಂವಾದ ಆಯೋಜಿಸಲಾ ಗಿದೆ. ಪ್ರೌಢ ಶಾಲಾ ವಿದ್ಯಾರ್ಥಿಗಳು ನೇರವಾಗಿ ಅಂತರಿಕ್ಷಯಾತ್ರಿಕರೊಂದಿಗೆ ಸಂವಾದಿಸಲು ನೀಡಲಾಗಿದೆ.

ಸೊಂಪಾದ ಪುಟಗಳು

ನಾವೇಕೆ ಎಲ್ಲದಕ್ಕೂ ಹೆಸರಿಡುತ್ತೇವೆ?
ಶಿಶಿರಕಾಲ
ಶಿಶಿರ್ ಹೆಗಡೆ 6

ಈ ಕೀಟಗಳು ಕಡಿದರೆ ಅಪಾಯ ತಪ್ಪಿದ್ದಲ್ಲ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನಿಮ್ಮ ಬಗ್ಗೆ ನಿಜವಾಗಿಯೂ ಸಾಕಷ್ಟು ಕಾಳಜಿ ತೆಗೆದುಕೊಳ್ಳಬೇಕಾದವರು ಮತ್ಯಾರೂ ಅಲ್ಲ, ನೀವೇ. ನೀವು ನಿಮ್ಮ ಬಗ್ಗೆ ಕಾಳಜಿ ತೆಗೆದುಕೊಳ್ಳದಿದ್ದರೆ, ನೀವು ಬೇರೆ ಯಾವುದರ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುವುದಿಲ್ಲ.

ವಕ್ರತುಂಡೋಕ್ತಿ

ಗೂಗಲ್ ನೀವು ಕೇಳಿದ ಯಾವ ವಿಷಯವನ್ನಾದರೂ ಹುಡುಕಿ ಕೊಡುತ್ತದೆ. ಆದರೆ ನಿಮ್ಮ ಕಳೆದುಹೋದ ಸಾಕ್ಸ್‌ಗಳನ್ನಲ್ಲ.

ಪೋಕ್ಸೋ: ನ.26ಕ್ಕೆ ಮುರುಘಾಶ್ರೀ ತೀರ್ಪು



ಚಿತ್ರದುರ್ಗ: ಮುರುಘಾ ಶ್ರೀ ವಿರುದ್ಧ ದಾಖಲಾಗಿರುವ ಮೊದಲ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ) ಪ್ರಕರಣದ ವಿಚಾರಣೆ ಪೂರ್ಣಗೊಂಡಿದೆ. ಚಿತ್ರದುರ್ಗದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ಕೋರ್ಟ್ ನ.26ಕ್ಕೆ ಆದೇಶ ಕಾಯ್ದಿರಿಸಿದೆ. ಅಪ್ರಾಪ್ತ ವಯಸ್ಕ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಸ್ವಾಮೀಜಿ ಪ್ರಕರಣದ ವಾದ-ಪ್ರತಿವಾದವು ಪೂರ್ಣಗೊಂಡಿದೆ. ಶರಣರ ವಿರುದ್ಧದ ಎರಡು ಪೋಕ್ಸೊ ಪ್ರಕರಣಗಳ ಪೈಕಿ ಮೊದಲ ಪ್ರಕರಣದ ಸಂಬಂಧ ಸುದೀರ್ಘ ವಿಚಾರಣೆ ನಡೆದಿದೆ.

ನೇಪಾಳದಲ್ಲಿ ಮತ್ತೆ ಜೆನ್‌ಝೀ ಸಂಘರ್ಷ

ಕಠ್ಮಂಡು: ನೇಪಾಳದಲ್ಲಿ ಮತ್ತೆ ಗಲಭೆ ಶುರುವಾಗಿದೆ. ನೇಪಾಳಿ ಯುವಜನರ (ಜೆನ್ ಝೀ) ಗುಂಪು, ಈ ಹಿಂದೆ ಆಡಳಿತದಲ್ಲಿದ್ದ ಸಿಪಿಎನ್-ಯುಎಂಎಲ್ ಪಕ್ಷದ ಬೆಂಬಲಿಗರ ಜತೆ ಸಂಘರ್ಷಕ್ಕಿಳಿದಿದೆ. ಪರಿಣಾಮ ಬಾರಾ ಜಿಲ್ಲೆಯ ಕೆಲವೆಡೆ ಕರ್ಫ್ಯೂ ಜಾರಿಗೊಳಿಸಲಾಗಿದೆ. ವಿಮಾನ ನಿಲ್ದಾಣ ಸಮೀಪದ ಪಟ್ಟಣ 'ಸಿಮಾರಾ'ದಲ್ಲಿ ಬುಧವಾರ ಜೆನ್ ಝೀ ಸಂಘರ್ಷ ಆರಂಭವಾಗಿತ್ತು. ಈ ವೇಳೆ ಎರಡೂ ಗುಂಪುಗಳ ಕಾದಾಟ ನಡೆಸಿದ್ದವು.

ಫನ್‌ತರಂಗ

- ರಘುಪತಿ ಶೃಂಗೇರಿ -

ಮುಂದಿನ 5 ವರ್ಷಗಳಲ್ಲಿ ತಾಮ್ರಕ್ಕೆ ಚಿನ್ನದ ಬೆಲೆ – ಹಣಕಾಸು ತಜ್ಞರು

ಸುದ್ದಿ

ಮಸೂದೆಗಳಿಗೆ ಸಹಿ ಹಾಕಲು ಕಾಲಮಿತಿ ನಿಗದಿ ಅನೂರ್ಜಿತ

ತಮಿಳುನಾಡು VS ರಾಜ್ಯಪಾಲ: ಸುಪ್ರೀಂ ಮಹತ್ವದ ಆದೇಶ

ರಾಷ್ಟ್ರಪತಿ, ರಾಜ್ಯಪಾಲರಿಗೆ ಗಡುವು ನಿಗದಿ ಮಾಡಲಾಗದು: ಸುಪ್ರೀಂ

ದೆಹಲಿ: ರಾಜ್ಯ ಸರಕಾರ ವಿಧಾನಸಭೆಯಲ್ಲಿ ಅಂಗೀಕರಿಸಿದ್ದ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಲು ಕಾಲಮಿತಿಯನ್ನು ನಿಗದಿಪಡಿಸಲು ಸಾಧ್ಯವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ಪಂಚ ಸದಸ್ಯರ ಪೀಠ ಹೇಳಿದೆ. ಆದರೆ ಮಸೂದೆಗೆ ಅಂಕಿತ ಹಾಕದೇ ದೀರ್ಘ ಕಾಲ ಸುಮ್ಮನೆ ಇಟ್ಟುಕೊಂಡಿದ್ದರೆ, ನ್ಯಾಯಾಲಯ ತನ್ನ ಅಧಿಕಾರ ವ್ಯಾಪ್ತಿಯಲ್ಲಿ, ಸೂಕ್ತ ಕಾಲ ಮಿತಿಯಲ್ಲಿ ತೀರ್ಮಾನ ಕೈಗೊಳ್ಳುವಂತೆ ರಾಜ್ಯಪಾಲರಿಗೆ ಸೂಚಿಸಬಹುದು ಎಂದು ಮಹತ್ವದ ತೀರ್ಪು ನೀಡಿದೆ. ಇದೇ ವೇಳೆ ಮಸೂದೆ ಅಂಕಿತ ಹಾಕದೇ ವಿಳಂಬ ಮಾಡಿದಲ್ಲಿ, ಅದನ್ನು ಅಂಕಿತ ಹಾಕಿದಂತೆಯೇ ಎಂದು ಪರಿಗಣಿಸಬೇಕು ಎಂದು ಹಿಂದಿನ ದ್ವಿಸದಸ್ಯ ಪೀಠ ತೀರ್ಪನ್ನು ತಳ್ಳಿ ಹಾಕಿದೆ.

ತಮಿಳುನಾಡು, ಕೇರಳ, ಪಂಜಾಬ್, ಪ.ಬಂಗಾಳ ಸರಕಾರಗಳು ರಾಜ್ಯಪಾಲರು ಮಸೂದೆಗಳಿಗೆ ಸಹಿ ಹಾಕದೇ ಅನಗತ್ಯ ವಿಳಂಬ ಮಾಡು ತ್ತಿದ್ದಾರೆಂದು ಸರ್ವೋಚ್ಚ ಪೀಠದ ಮೊರೆ ಹೋಗಿದ್ದವು. ಹಿಂದೆ ತೀರ್ಪು ನೀಡಿದ್ದ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯದ ಪೀಠ ಇಂತಹ ವಿಳಂಬ ಅಸಾಂವಿಧಾನಿಕ ಎಂದು ಹೇಳಿ, ಸಹಿ ಹಾಕಲು ಕಾಲಮಿತಿಯನ್ನು ನಿಗದಿ ಪಡಿಸಿತ್ತು. ಮುಖ್ಯವಾಗಿ ವಿಳಂಬವಾಗಿರುವ ತಮಿಳುನಾಡಿನ 10 ಮಸೂದೆಗಳು ಅಂಗೀಕೃತ ಎಂದೇ ಪರಿಗಣಿಸಬೇಕು ಎಂದು ಹೇಳಿತ್ತು. ಇದನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೇ ಸರ್ವೋಚ್ಚ ಪೀಠದಲ್ಲಿ ಪ್ರಶ್ನಿಸಿದ್ದರು. ಈ ಸಂಬಂಧ ಶುಕ್ರವಾರ ತೀರ್ಪು ಹೊರಬಿದ್ದಿದೆ.

ನ್ಯಾಯಪೀಠ ಹೇಳಿದ್ದೇನು?: ಸಂವಿಧಾನದ 200ನೇ ವಿಧಿಯಡಿ ರಾಜ್ಯಪಾಲರಿಗೆ ಮೂರು ಆಯ್ಕೆಗಳಿವೆ. ಮಸೂದೆಗೆ ಒಪ್ಪಿಗೆ ನೀಡುವುದು, ಮಸೂದೆಯನ್ನು ರಾಷ್ಟ್ರಪತಿಗಳ ಒಪ್ಪಿಗೆಗೆ ಕಳಿಸುವುದು ಅಥವಾ ಮಸೂದೆಯನ್ನು ವಿಧಾನಸಭೆಗೆ ವಾಪಸ್ ಕಳಿಸುವುದು. ಆದರೆ, ರಾಜ್ಯಪಾಲರು ಮಸೂದೆಯ ಬಗ್ಗೆ ತೀರ್ಮಾನ ಕೈಗೊಳ್ಳದೇ ಅನಿರ್ದಿಷ್ಟಾವಧಿ ಕಾಲ ಕುಳಿತುಕೊಳ್ಳುವಂತಿಲ್ಲ. ಇಡೀ ಪ್ರಕ್ರಿಯೆಯನ್ನು ಹಾಳಾಗುವಂತೆ ಮಾಡಬಾರದು. ರಾಜ್ಯಪಾಲರು ಸುದೀರ್ಘ ಕಾಲದವರೆಗೂ ವಿವರಣೆ ನೀಡದೇ, ತೀರ್ಮಾನ ಕೈಗೊಳ್ಳದೇ ಇದ್ದಾಗ, ಕೋರ್ಟ್‌ಗಳು ಮಧ್ಯಪ್ರವೇಶ ಮಾಡಬಹುದು ಎಂದು ಇಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳಿಗೆ ಕಠಿಣವಾದ ಕಾಲಮಿತಿಯನ್ನು ಕೋರ್ಟ್‌ಗಳು ಹೇರಲು ಸಾಧ್ಯವಿಲ್ಲ. →10

- ರಾಜ್ಯಪಾಲರು, ರಾಷ್ಟ್ರಪತಿಗಳಿಗೆ ಸಹಿ ಹಾಕಲು, ಹಾಕದೇ ಇರಲು ಕಾಲಮಿತಿ ನಿಗದಿ ಸಾಧ್ಯವಿಲ್ಲ
- ಆದರೆ ರಾಜ್ಯಪಾಲರು ಅನಗತ್ಯ ವಿಳಂಬ ಮಾಡಿದಲ್ಲಿ ನ್ಯಾಯಪೀಠ ಕಾಲಮಿತಿ ಹೇರಬಹುದು
- ಸಂವಿಧಾನದ 200ನೇ ವಿಧಿಯಡಿ ರಾಜ್ಯಪಾಲ ಅಂಕಿತ ಹಾಕಬಹುದು/ ಹಿಂತಿರುಗಿಸಬಹುದು
- ನ್ಯಾಯಪೀಠ ತನ್ನ ಮಿತಿಯಡಿ ಅನಗತ್ಯ ವಿಳಂಬವನ್ನು ಪರಿಶೀಲಿಸಿ, ಕ್ರಮಕ್ಕೆ ಸೂಚಿಸಬಹುದು
- ಹಿಂದಿನ ದ್ವಿಸದಸ್ಯ ಪೀಠ 'ಅಂಕಿತಕ್ಕೆ' ಕಾಲಮಿತಿ ಹಾಕಿದ್ದನ್ನು ತಿರಸ್ಕರಿಸಿದ ಪಂಚಸದಸ್ಯರ ಪೀಠ

ತೀರ್ಪಿನ ಹಿನ್ನೆಲೆಯೇನು?

ರಾಜ್ಯಪಾಲರು ಮಸೂದೆಗಳಿಗೆ ಒಪ್ಪಿಗೆ ನೀಡದೇ, ಸೂಕ್ತ ವಿವರಣೆಯನ್ನೂ ಸುಮ್ಮನೆ ತಮ್ಮ ಬಳಿ ದೀರ್ಘ ಕಾಲ ಇಟ್ಟುಕೊಳ್ಳುವುದನ್ನು ವಿರೋಧಿಸಿ ತಮಿಳುನಾಡು, ಪ.ಬಂಗಾಳ, ಪಂಜಾಬ್, ಕೇರಳ ಸರಕಾರಗಳು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದವು. ಅದರಲ್ಲೂ ತಮಿಳುನಾಡು ಸರಕಾರ ರಾಜ್ಯಪಾಲ ಆರ್.ಎನ್.ರವಿ 2020 ನವೆಂಬರ್‌ನಿಂದ 2023 ಏಪ್ರಿಲ್ ನಡುವೆ 10 ಮಸೂದೆಗಳಿಗೆ ಒಂದೋ ಸಹಿ ಹಾಕದೇ ತಡೆಹಿಡಿದಿದ್ದಾರೆ, ಇಲ್ಲವೇ ನಿರ್ಲಕ್ಷಿಸಿದ್ದಾರೆ ಅಥವಾ ಸರಿಯಾದ ಮಾಹಿತಿ ನೀಡದೇ ವಾಪಸ್ ಕಳಿಸಿದ್ದಾರೆ, ಇದು ಕಾರ್ಯನಿರ್ವಹಣೆಗೆ ಅಡ್ಡಿ ಮಾಡಿದೆ ಎಂದು ಹೇಳಿತ್ತು. ಈ ಬಗ್ಗೆ ಈ ವರ್ಷ ಏ.8ರಂದು ತೀರ್ಪು ನೀಡಿದ್ದ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ, ಇದು ಬೇಕಾಬಿಟ್ಟಿ ವರ್ತನೆ, ಅಸಾಂವಿಧಾನಿಕ ವಾದದ್ದು ಎಂದು ಹೇಳಿತ್ತು. →10

ದಶಾವತಾರಕ್ಕೆ ನಿತೀಶ್ ರೆಡಿ

ದಾಖಲೆ 10ನೇ ಬಾರಿ ಬಿಹಾರ ಸಿಎಂ ಆಗಿ ಪ್ರಮಾಣ

ಇಬ್ಬರು ಡಿಸಿಎಂಗಳು, ಮೋದಿ ಸೇರಿ ಗಣ್ಯರು ಭಾಗಿ

ಪಾಟ್ನಾ: ದಾಖಲೆಯ ಹತ್ತನೇ ಬಾರಿಗೆ ಬಿಹಾರ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಗುರುವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಿಜೆಪಿ-ಜೆಡಿಯು ನೇತೃತ್ವದ ಎನ್‌ಡಿಎ ಇತ್ತೀಚೆಗೆ ಬಿಹಾರ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿ ಅಧಿಕಾರಕ್ಕೇರಿತ್ತು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಬಿಜೆಪಿಯ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಮತ್ತೊಮ್ಮೆ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

> ಬಿಹಾರ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿರುವ ನಿತೀಶ್ ಕುಮಾರ್‌ಗೆ ಶುಭಾಶಯಗಳು. ಅವರೊಬ್ಬ ಅನುಭವಿ ಹಾಗೂ ಸಾಮರ್ಥ್ಯವನ್ನು ಸಾಬೀತುಮಾಡಿರುವ ಕುಶಲ ನಾಯಕ. ಅವರಿಗೆ ಮುಂದಿನ ದಿನಗಳಲ್ಲಿ ಶುಭವಾಗಲಿ ಎಂದು ಬಯಸುತ್ತೇನೆ.
>
> **-ನರೇಂದ್ರ ಮೋದಿ,** ಪ್ರಧಾನಮಂತ್ರಿ

24 ಇತರೆ ಸಚಿವರೂ ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಾಕಿ 9 ಸ್ಥಾನಗಳನ್ನು ಮುಂದೆ ತುಂಬಲಾಗುತ್ತದೆ. ಪ್ರಸ್ತುತ ಜೆಡಿಯುನಿಂದ 8, ಬಿಜೆಪಿಯಿಂದ 14, ಎಲ್‌ಜೆಪಿ-ಆರ್‌ನಿಂದ ಇಬ್ಬರು, ಎಚ್‌ಎಎಂ, ಆರ್‌ಎಲ್‌ಎಂನಿಂದ ತಲಾ ಒಬ್ಬರು ಸಚಿವರಾದರು. ನಿತೀಶ್ ಹಿಂದಿನ ಸರಕಾರದಲ್ಲಿ ಮಂತ್ರಿಗಳಾಗಿದ್ದ 6 ಹಿರಿಯರು ಮತ್ತೊಮ್ಮೆ ಸಚಿವರಾದರು. →10

ಸಂಪುಟಕ್ಕೆ ಯಾರು?

- ಬಿಜೆಪಿಯ ಸಾಮ್ರಾಟ್ ಚೌಧರಿ, ವಿಜಯ್ ಸಿನ್ಹಾ ಡಿಸಿಎಂಗಳು
- ಬಿಜೆಪಿಯಿಂದ 14, ಜೆಡಿಯುನಿಂದ 8 ಸೇರಿ 26 ಮಂದಿ ಸಚಿವರು
- ಮುಸ್ಲಿಮ್ ಜನಾಂಗದ ಪ್ರತಿನಿಧಿಯಾಗಿ ಜಮಾ ಖಾನ್‌ಗೆ ಮತ್ತೆ ಪಟ್ಟ
- ಮೊದಲ ಬಾರಿ ಶಾಸಕಿ ರಮಾ ನಿಶಾದ್ ಸೇರಿ 3 ಮಹಿಳಾ ಸಚಿವರು

25 ಕನ್ನಡಿಗರು ಸೇರಿ 125 ಮಂದಿ ರಕ್ಷಣೆ

ದೆಹಲಿ: ವಿದೇಶದಲ್ಲಿ ಉದ್ಯೋಗ ಅರಸಿಕೊಂಡು ಹೋಗಿ ವಂಚಕರ ಜಾಲಕ್ಕೆ ಸಿಲುಕಿದ್ದ 25 ಕನ್ನಡಿಗರು ಸೇರಿ 125 ಭಾರತೀಯರನ್ನು ರಕ್ಷಣೆ ಮಾಡಿ ತವರಿಗೆ ಕರೆತರಲಾಗಿದೆ. ಸೇನಾ ವಿಮಾನದ ಮೂಲಕ ಥಾಯ್ಲೆಂಡ್‌ನಿಂದ ಯುವಕರು ಭಾರತಕ್ಕೆ ವಾಪಸ್ ಆಗಿದ್ದಾರೆ. ಇದರೊಂದಿಗೆ, ಈ ವರ್ಷದ ಮಾರ್ಚ್‌ನಿಂದ ಮ್ಯಾನ್ಮಾರ್ ಕಳ್ಳಸಾಗಣೆ ಕೇಂದ್ರಗಳಿಂದ ಒಟ್ಟು 1,500 ಭಾರತೀಯರನ್ನು ಥಾಯ್ಲೆಂಡ್ ಮೂಲಕ ದೇಶಕ್ಕೆ ಮರಳಿ ಕರೆತರಲಾಗಿದೆ ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಕಂಬಳಕ್ಕಿಲ್ಲ ನಿರ್ಬಂಧ: ಹೈಕೋರ್ಟ್ ಆದೇಶ

ಬೆಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಬೇರೆ ಯಾವುದೇ ಸ್ಥಳಗಳಲ್ಲಿ ಕಂಬಳ ಆಯೋಜಿಸದಂತೆ ರಾಜ್ಯ ಸರಕಾರವನ್ನು ನಿರ್ಬಂಧಿಸಲು ಹೈಕೋರ್ಟ್ ನಿರಾಕರಿಸಿದೆ. ಇದರಿಂದ ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಕಂಬಳ ಆಯೋಜಿಸಲು ಇದ್ದ ಅಡ್ಡಿ ನಿವಾರಣೆಯಾದಂತಾಗಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ, ಉಡುಪಿಯನ್ನು ಹೊರತುಪಡಿಸಿ ರಾಜ್ಯದ ಬೇರೆ ಜಿಲ್ಲೆ ಅಥವಾ ಭಾಗಗಳಲ್ಲಿ ಕಂಬಳ ನಿರ್ಬಂಧಿಸಲು ಪೆಟಾ ಪಿಐಎಲ್ ಸಲ್ಲಿಸಿತ್ತು.

ಅನಿಲ್ ಅಂಬಾನಿ ಆಸ್ತಿ ಮತ್ತೆ ಮುಟ್ಟುಗೋಲು



ದೆಹಲಿ: ರಿಲಯನ್ಸ್ ಗ್ರೂಪ್ ಮುಖ್ಯಸ್ಥ ಅನಿಲ್ ಅಂಬಾನಿ ಅವರಿಗೆ ಸೇರಿದ ಮತ್ತಷ್ಟು ಆಸ್ತಿಗಳನ್ನು ಇಡಿ ಮುಟ್ಟುಗೋಲು ಹಾಕಿಕೊಂಡಿದೆ. ಅಂಬಾನಿ ಮತ್ತು ಅವರ ಕಂಪನಿಗಳಿಗೆ ಸಂಬಂಧಿಸಿದ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಇಡಿ ಕೋಟ್ಯಂತರ ರೂಪಾಯಿ ಮೌಲ್ಯದ ಹೊಸ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಈ ಹಿಂದೆ 7500 ಕೋಟಿ ರು. ಮೌಲ್ಯದ ಆಸ್ತಿ ವಶಪಡಿಸಿಕೊಂಡಿದ್ದ ಇಡಿ, ಈಗ ಹೊಸತಾಗಿ 1400 ಕೋಟಿ ರು.ಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಮೂಲಗಳು ಹೇಳಿವೆ.

ಜಿ20: ಇಂದು ಪ್ರಧಾನಿ ಮೋದಿ ದ.ಆಫ್ರಿಕಾಕ್ಕೆ



ದೆಹಲಿ: ಪ್ರಧಾನಿ ನರೇಂದ್ರ ಮೋದಿ ನ.21ರಿಂದ 23ರವರೆಗೆ ದ.ಆಫ್ರಿಕಾದ ಜೊಹಾನ್ಸ್‌ಬರ್ಗ್‌ಗೆ ಭೇಟಿ ನೀಡಲಿದ್ದಾರೆ. 20ನೇ ಜಿ20 ಸಮಾವೇಶದ ಹಿನ್ನೆಲೆಯಲ್ಲಿ ಅವರ ಈ ಪ್ರವಾಸ ಏರ್ಪಾಡಾಗಿದೆ. ಈ ಶೃಂಗದಲ್ಲಿ ಜಿ20 ಬಗ್ಗೆ ಭಾರತದ ನಿಲುವುಗಳನ್ನು ಮೋದಿ ತೆರೆದಿಡಲಿದ್ದಾರೆ. ಈ ಶೃಂಗದಲ್ಲಿ ನಡೆಯಲಿರುವ ಎಲ್ಲ ಮೂರು ಅವಧಿಗಳಲ್ಲೂ ಮೋದಿ ಮಾತನಾಡುವ ನಿರೀಕ್ಷೆಯಿದೆ. ಈ ವೇಳೆ ಮೋದಿ ಬ್ರೆಜಿಲ, ದ.ಆಫ್ರಿಕಾ ನಾಯಕರ ಜೊತೆಗೆ ಪ್ರತ್ಯೇಕ ಸಭೆಗಳನ್ನೂ ನಡೆಸಲಿದ್ದಾರೆ.

ಫಲಾಹ್ ಮುಖ್ಯಸ್ಥನ ಆಸ್ತಿ ಧ್ವಂಸಕ್ಕೆ ನೋಟಿಸ್

ಮ್ಹೌ (ಮ.ಪ್ರ.): ಮಧ್ಯಪ್ರದೇಶದ ಇಂದೋರ್ ಜಿಲ್ಲೆಯಲ್ಲಿರುವ ಮ್ಹೌ ಪಟ್ಟಣದಲ್ಲಿರುವ ಜಾವೇದ್ ಅಹ್ಮದ್ ಸಿದ್ದಿಖಿಯ ಪೂರ್ವಿಕರ ಮನೆ ಧ್ವಂಸಕ್ಕೆ ಎಂಸಿಬಿ (ಮ್ಹೌ ಮಂಡಳಿ) ನೋಟಿಸ್ ನೀಡಿದೆ. ಜಾವೇದ್ ದೆಹಲಿ ಸ್ಫೋಟದ ರೂವಾರಿಗಳು ಕೆಲಸ ಮಾಡುತ್ತಿದ್ದ ಅಲ್ ಫಲಾಹ್ ವಿವಿ ಸ್ಥಾಪಕ. ಪ್ರಕರಣದಲ್ಲಿ ಈತನ ಬಂಧನವೂ ಆಗಿದೆ. ಇದೀಗ ಪೂರ್ವಿಕರ ಮನೆ ಅಕ್ರಮ ನಿರ್ಮಾಣವಾಗಿದೆ ಎಂಬ ಕಾರಣ ಧ್ವಂಸಕ್ಕೆ ನೋಟಿಸ್ ನೀಡಲಾಗಿದೆ.

ತಿರುಪತಿಯಲ್ಲಿ ಕಾರು ಪತ್ತೆ, ಶೋಧಕ್ಕೆ 16 ತಂಡ

ಬ್ಯಾಂಕ್ ದರೋಡೆ: ಇಬ್ಬರ ಸೆರೆ

ಬೆಂಗಳೂರು: ಬೆಂಗಳೂರಿನ ಡೇರಿ ವೃತ್ತದ ಬಳಿ ಎಂಟಿಎಂ ವಾಹನದಲ್ಲಿದ್ದ ಬರೋಬ್ಬರಿ 7.11 ಕೋಟಿ ರು. ದರೋಡೆ ಪ್ರಕರಣ ಸಂಬಂಧ ಕಾರು ಪತ್ತೆಯಾಗಿದೆ. ದರೋಡೆಗೆ ಬಳಸಲಾಗಿದ್ದ ಇನ್ನೋವಾ ಕಾರನ್ನು ತಿರುಪತಿಯಲ್ಲಿ ಬೆಂಗಳೂರು ಪೊಲೀಸರು ಜಪ್ತಿ ಮಾಡಿದ್ದಾರೆ. ಇದರ ಬೆನ್ನಲ್ಲೇ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆಗೊಳಪಡಿಸಿದ್ದಾರೆ.

ತಿರುಪತಿಯಲ್ಲಿ ಪತ್ತೆಯಾದ ಇನ್ನೋವಾ ಕಾರಿನಲ್ಲಿ ಹಣ ಇರಲಿಲ್ಲ ಎನ್ನುವ ಮಾಹಿತಿ ಲಭ್ಯವಾಗಿದೆ. ಈ ಕಾರಿನಲ್ಲೇ ಹಣವನ್ನು ತೆಗೆದುಕೊಂಡು ಹೋಗಿ ಮಾರ್ಗ ಮಧ್ಯೆ ಬೇರೆ ಕಡೆ ಗಮನ ಸೆಳೆದು ಆರೋಪಿಗಳು ಪರಾರಿಯಾಗಿದ್ದಾರೆ. ಹೀಗಾಗಿ ಆರೋಪಿಗಳಿಗಾಗಿ ಪೊಲೀಸರು ತೀವ್ರ ಹುಡುಕಾಟ ನಡೆಸುತ್ತಿದ್ದಾರೆ. ತಿರುಪತಿ ಪೊಲೀಸರ ಜೊತೆ ದಕ್ಷಿಣ ವಿಭಾಗ ಪೊಲೀಸರಿಂದ ಶೋಧ ನಡೆಯುತ್ತಿದೆ. ಹೋಟೆಲ್, ಲಾಡ್ಜ್, ದೇವಸ್ಥಾನಗಳ ಬಳಿ ಶೋಧ ನಡೆಸಲಾಗುತ್ತಿದೆ.

ಸಿಬ್ಬಂದಿ ಮೇಲೆ ಅನುಮಾನ: ವಶಕ್ಕೆ ಪಡೆದುಕೊಂಡಿರುವ ಚಾಲಕ, ಇಬ್ಬರು ಗನ್ ಮ್ಯಾನ್ ಸೇರಿದಂತೆ ನಾಲ್ವರ ವಿಚಾರಣೆ ಚುರುಕುಗೊಳಿಸಿದ್ದರೆ, ಮತ್ತೊಂದೆಡೆ ಅವರ ಪೂರ್ವಾಪರ ಹಾಗೂ ಇತ್ತೀಚಿನ ದಿನಗಳಲ್ಲಿ ಅವರ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ. →10

ಬುರುಡೆ ಪ್ರಕರಣ: ಕೋರ್ಟ್‌ಗೆ ಎಸ್‌ಐಟಿ ವರದಿ

6 ಮಂದಿಗೆ ಸುಳ್ಳುಸಾಕ್ಷಿ ಕಂಟಕ

ಬೆಳ್ತಂಗಡಿ: ಬುರುಡೆ ಷಡ್ಯಂತ್ರ ಪ್ರಕರಣ ಸಂಬಂಧ ಬೆಳ್ತಂಗಡಿ ನ್ಯಾಯಾಲಯಕ್ಕೆ ಆರು ಮಂದಿ ಆರೋಪಿಗಳ ವಿರುದ್ಧ ಎಸ್‌ಐಟಿ ಅಧಿಕಾರಿಗಳು ನ.20ರಂದು ಸುಳ್ಳು ಸಾಕ್ಷಿ ಹೇಳಿದ ಕುರಿತು ವರದಿ ಸಲ್ಲಿಸಿದ್ದಾರೆ. ಬುರುಡೆ ಷಡ್ಯಂತ್ರ ಪ್ರಕರಣದಲ್ಲಿ ಜೈಲಿನಲ್ಲಿರುವ ಚಿನ್ನಯ್ಯ ಸೇರಿ ದಂತೆ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ಜಯಂತ್ ಟಿ., ಸೌಜನ್ಯ ಮಾವ ವಿಠಲ್ ಗೌಡ, ಸುಜಾತಾ ಭಟ್ ಸೇರಿ ಒಟ್ಟು ಆರು ಮಂದಿ ಭಾಗಿಯಾದವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಈ ಸಂಬಂಧ ಸುಳ್ಳು ಸಾಕ್ಷಿ ವರದಿಯನ್ನು ಸೆಕ್ಷನ್ 215ರ ಅಡಿಯಲ್ಲಿ ಬೆಳ್ತಂಗಡಿ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಹೆಚ್.ಟಿ.ವಿಜಯೇಂದ್ರ ಮುಂದೆ ನ.20ರಂದು ಸಂಜೆ 3:15ಕ್ಕೆ ಗಂಟೆಗೆ ಎಸ್‌ಐಟಿ ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಮತ್ತು ತಂಡದವರು ಸಲ್ಲಿಸಿದ್ದಾರೆ.

ಎಸ್‌ಐಟಿ ವರದಿಯಲ್ಲಿ ಸುಮಾರು 3,923 ಪುಟಗಳನ್ನು ನಮೂದಿಸಿ ದ್ದಾರೆ. ಐದು ಮಂದಿ ಆರೋಪಿಗಳು ತನಿಖೆಗೆ ಸಹಕರಿಸುತ್ತಿಲ್ಲ ಎಂಬುವುದಾಗಿ ವರದಿಯ ಆಧಾರದಲ್ಲಿ ಮುಂದಿನ ತನಿಖೆ ಬಗ್ಗೆ ನ್ಯಾಯಾಲಯ ಸೂಚನೆ ನೀಡುವಂತೆ ವರದಿಯಲ್ಲಿ ತಿಳಿಸಲಾಗಿದೆ.

ಒಟ್ಟು ಪ್ರಕರಣದ ತನಿಖೆ ಮುಗಿಸಿದ ಬಳಿಕ ಮುಂದಿನ ದಿನಗಳಲ್ಲಿ ಚಾರ್ಜ್ ಶೀಟ್ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಲಾಗುತ್ತದೆ.

ಸೈಬರ್ ವಂಚನೆ ತಡೆಗೆ ಪ್ರತ್ಯೇಕ ಸಂಖ್ಯೆ ನಿಗದಿ

ದುಡ್ಡಿನ ಕರೆಗೆ ನಂಬರ್ 1600

ದೆಹಲಿ: ಸೈಬರ್ ಕ್ರೈಮ್ ವಂಚನೆ ಪ್ರಕರಣ ಜಾಸ್ತಿ ಆಗುತ್ತಿದ್ದಂತೆ, ಅವುಗಳನ್ನು ತಡೆಗಟ್ಟಲು ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಹಣಕಾಸು ಸಂಸ್ಥೆಗಳಿಗೆ ಒಂದೇ ಸರಣಿಯ ನಂಬರ್‌ಗಳಿಂದ ಕರೆಯನ್ನು ಕಳುಹಿಸ ಬೇಕೆಂದು ಕಡ್ಡಾಯ ಆದೇಶ ಹೊರಡಿಸಿದೆ. ಬ್ಯಾಂಕುಗಳು, ಮ್ಯೂಚುವಲ್ ಫಂಡ್‌ಗಳು ಮತ್ತು ಪಿಂಚಣಿ ನಿಧಿ ಕಂಪನಿಗಳು 1600 ಸರಣಿ ಸಂಖ್ಯೆಯಿಂದಲೇ ಕರೆ ಕಳುಹಿಸಲು ಟ್ರಾಯ್ ಸೂಚಿಸಿದೆ.

ಕಂಪನಿಗಳೇ ಕಳುಹಿಸಿದ ಕರೆ ಯಾವುದು? ಮತ್ತು ಮೋಸ ಮಾಡುವ ಸ್ಪ್ಯಾಮ್ ಕರೆ ಯಾವುದು ಎಂದು ಪತ್ತೆಹಚ್ಚಲು ಟ್ರಾಯ್ ಈ ಮಹತ್ವದ ನಿರ್ಧಾರ ಕೈಗೊಂಡಿದ್ದು, ಮಾರ್ಚ್ 2026ರೊಳಗೆ ಹಂತಹಂತವಾಗಿ ಜಾರಿಯಾಗಲಿದೆ. ದೂರಸಂಪರ್ಕ ಇಲಾಖೆ 1600 ಸಂಖ್ಯಾ ಬ್ಲಾಕ್ ಅನ್ನು ನಿರ್ದಿಷ್ಟವಾಗಿ ನಿಯಂತ್ರಿತ ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಿತ್ತು.

1600 ಸಂಖ್ಯೆ ಯಾಕೆ?

ಇಲ್ಲಿಯವರೆಗಿನ ವ್ಯವಸ್ಥೆಯಲ್ಲಿ ಬ್ಯಾಂಕ್‌ನಿಂದ ಬರುತ್ತಿರುವ ಕರೆ ಯಾವುದು ಬೇರೆಯವರು ಕಳುಹಿಸಿದ ಕರೆ ಯಾವುದು ಎಂದು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಲೋಪದ ಲಾಭ ಪಡೆಯುತ್ತಿರುವ ಕಳ್ಳರು ಈಗ ಬೇರೆ ನಂಬರ್‌ಗಳಿಂದ ಕರೆ ಮಾಡಿ ಗ್ರಾಹಕರ ಹಣ ದೋಚುತ್ತಿದ್ದಾರೆ. ಅದಕ್ಕಾಗಿ ಒಂದು ಒಂದು ನಿಗದಿತ ಸರಣಿ ಸಂಖ್ಯೆ ನೀಡಲಾಗಿದೆ.

ನಾಳೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಪರಿಷತ್ ಸಭೆ

ರಾಜ್ಯಾದ್ಯಂತ ಮುಂದಿನ 3 ತಿಂಗಳು ರಜತೋತ್ಸವ

ಜೆಡಿಎಸ್‌ಗೆ ಬೆಳ್ಳಿಹಬ್ಬ

ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಉದಯಿಸಿದ ಜಾತ್ಯತೀತ ಜನತಾ ದಳ(ಜೆಡಿಎಸ್) ಬೆಳ್ಳಿಹಬ್ಬದ ಸಂಭ್ರಮದಲ್ಲಿದ್ದು, ಶನಿವಾರದಿಂದ 3 ತಿಂಗಳ ಕಾಲ ರಾಜ್ಯಾದ್ಯಂತ ರಜತ ಮಹೋತ್ಸವದ ಸಂಭ್ರಮಾಚರಣೆಗೆ ಸಿದ್ಧತೆ ನಡೆಸಿಕೊಳ್ಳಲಾಗಿದೆ. ಶನಿವಾರ ರಜತ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದ್ದು, ಅಂದು ಪಕ್ಷದ ರಾಷ್ಟ್ರೀಯ ಪರಿಷತ್ ಮತ್ತು ರಾಷ್ಟ್ರೀಯ ಸಮಾವೇಶ ನಡೆಯಲಿದೆ. →10

ತಮಕೂರಿನಲ್ಲಿ ಬೃಹತ್ ಸಮಾವೇಶ?

ಈ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಈ ಸಮಾವೇಶದ ಬಳಿಕ ತುಮಕೂರು ಅಥವಾ ಮಧ್ಯ ಕರ್ನಾಟಕ ಭಾಗದಲ್ಲಿ ಡಿಸೆಂಬರ್ ಕೊನೆ ಅಥವಾ ಜನವರಿ ಮೊದಲ ವಾರದಲ್ಲಿ ಬೃಹತ್ ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನ ಮಾಡಲು ಜೆಡಿಎಸ್ ನಾಯಕರು ಚಿಂತನೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಕಾಂಗ್ರೆಸ್ ಹೈಕಮಾಂಡ್ ಸಂಪುಟ ಪುನಾರಚನೆ ಮುಂದೂಡಿದ್ದರೂ, ಸ್ಥಾನಕ್ಕೆ ಶಾಸಕರ ಕಸರತ್ತು

ಪುನಾರಚನೆಗೆ ಬ್ರೇಕ್, ನಿಲ್ಲದ ದೆಹಲಿ ಪೆರೇಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸಚಿವ ಸಂಪುಟ ಸದ್ಯಕ್ಕೆ ಪುನಾರಚನೆಯಿಲ್ಲ ಎನ್ನುವ ಸ್ಪಷ್ಟ ಸಂದೇಶದ ಹೊರತಾಗಿಯೂ, ಸಚಿವಾಕಾಂಕ್ಷಿಗಳು ದೆಹಲಿ ಪೆರೇಡ್ ನಡೆಸಿದ್ದಾರೆ. ಇನ್ನು ಕೆಲವರು ಪುನಾರಚನೆಯ ಸಮಯದಲ್ಲಿ ನಮಗೂ ಅವಕಾಶ ಸಿಗಲಿದೆ ಎನ್ನುವ ಮೂಲಕ ಸಂಪುಟ ಪುನಾರಚನೆಯ ಚರ್ಚೆ 'ಜೀವಂತ'ವಾಗಿಡುವ ಪ್ರಯತ್ನ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸದ ವೇಳೆ ಸಂಪುಟ ಪುನಾರಚನೆ ಬಗ್ಗೆ ಚಿಂತೆ ಬಿಡಿ ಎನ್ನುವ ಸಂದೇಶವನ್ನು ಹೈಕಮಾಂಡ್ ನೀಡಿದ್ದು, ಬೆಳಗಾವಿ ಅಧಿವೇಶನ ಮುಗಿಯುವ ತನಕ ಈ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳದಿದ್ದರೂ ಕೆಲ ಆಕಾಂಕ್ಷಿಗಳು ಮತ್ತೆ ದೆಹಲಿಗೆ ತೆರಳಿದ್ದಾರೆ. ಇನ್ನೊಂದೆಡೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಜಯ್ ಧರ್ಮಸಿಂಗ್ ಮುಂದಿನ ಸಂಪುಟ ಪುನಾರಚನೆಯಲ್ಲಿ ನನಗೆ ಅವಕಾಶ ಸಿಗಲಿದೆ ಎನ್ನುವ ವಿಶ್ವಾಸದ ಮಾತುಗಳನ್ನು ಆಡಿದ್ದಾರೆ.

ಸಿಎಂ ಬದಲಾವಣೆ ಅಪ್ರಸ್ತುತ: ಪರಂ: ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿದೆ. →10

ಡಿಕೆ ಕೆಪಿಸಿಸಿ ಅಧ್ಯಕ್ಷರಾಗಿರಬಹುದು

ಇನ್ನು ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನ ತ್ಯಾಗಕ್ಕೆ ಸಂಬಂಧಿಸಿದಂತೆ ಮಾರ್ಮಿಕ ಮಾತಿಗೆ ಪ್ರತಿಕ್ರಿಯಿಸಿರುವ ಸಚಿವ ಸತೀಶ್ ಜಾರಕಿಹೊಳಿ, ನಾಯಕತ್ವ ವಿಷಯದಲ್ಲಿ ಮಾತಾಡಲು ಏನಿಲ್ಲ. ಸರಕಾರಕ್ಕೆ ಎರಡೂವರೆ ವರ್ಷ ತುಂಬಿದೆ, ಒಳ್ಳೆಯ ಕೆಲಸ ಮಾಡಿದ್ದೇವೆ. ಮುಂದೆ ಕೂಡ ಒಳ್ಳೆಯ ಕೆಲಸ ಮಾಡುತ್ತೇವೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದ ತ್ಯಾಗದ ಬಗ್ಗೆ ಡಿ.ಕೆ.ಶಿವಕುಮಾರ್ ಅವರೇ ಹೇಳಬೇಕು. ಈ ಹಿಂದೆ ಪರಮೇಶ್ವರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷ ಇದರು. ಈಗ ಇವರು ಮುಂದುವರಿಯಬಹುದು, ಹೇಳಲು ಬರೋದಿಲ್ಲ. ಎಂಟು ವರ್ಷ ಒಂದು ದಿನದವರೆಗೆ ಕೆಪಿಸಿಸಿ ಅಧ್ಯಕ್ಷರಾಗಿರಬಹುದು. ಅರಸು ದಾಖಲೆ ರೀತಿ ಇವರೂ ದಾಖಲೆ ಮುರಿಯಬಹುದು ಎಂದು ಹೇಳಿದರು. ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಈ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ನಾನು ಹೇಳಲು ಬರೋದಿಲ್ಲ. ನವೆಂಬರ್ ಕ್ರಾಂತಿ ಬಗ್ಗೆ ನೀವು (ಮಾಧ್ಯಮ) ಹೇಳಬೇಕು. ನಮ್ಮ ಪಕ್ಷದವರೇ ನವೆಂಬರ್ ಕ್ರಾಂತಿ ಎಂದರು. ಆದರೆ 21 ತಾರೀಖು ಕಳೆದರೂ ಯಾವ ಕ್ರಾಂತಿಯೂ ನಡೆದಿಲ್ಲ ಎಂದು ಮಾರ್ಮಿಕವಾಗಿ ಹೇಳಿದರು.

> ಸಿದ್ದರಾಮಯ್ಯ ಸಿಎಂ ಆಗಿ ಮುಂದುವರಿಯುವ ಬಗ್ಗೆ ನಡೆಯುತ್ತಿರುವ ಚರ್ಚೆ ಅನವಶ್ಯಕ. ಎರಡೂವರೆ ವರ್ಷದ ನಂತರ ಸಂಪುಟ ಪುನಾರಚನೆ ಮಾಡಬಹುದು ಎಂದು ತಿಳಿಸಿದ ನಂತರವಷ್ಟೇ, ಸಿಎಂ ಬದಲಾವಣೆ ವಿಷಯ ಮುನ್ನೆಲೆಗೆ ಬಂದಿದೆ. ಜನರು ಎಲ್ಲಿವರೆಗೆ ಅಪೇಕ್ಷಿಸುವರೋ, ಅಲ್ಲಿಯವರೆಗೆ ನಾನೇ ಬಜೆಟ್ ಮಂಡಿಸುತ್ತೇನೆ.
>
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ತಿಮ್ಮಕ್ಕ ನೆನಪಿಗೆ ಸಸಿ ನೆಟ್ಟ ನ್ಯಾಯಾಧೀಶರು

ಹುಬ್ಬಳ್ಳಿ: ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಮತ್ತು ಅರಣ್ಯ ಇಲಾಖೆ ಆಶ್ರಯದಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನೆನಪಿಗಾಗಿ ಸಸಿಗಳನ್ನು ನೆಡಲಾಯಿತು. ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ಯಮನಪ್ಪ ಕೆ., ಪ್ರಧಾನ ದಿವಾಣಿ ನ್ಯಾಯಾಧೀಶ ವಿಶ್ವನಾಥ ಯಮಕನಮರಡಿ, ವಲಯ ಅರಣ್ಯ ಅಧಿಕಾರಿ ಆರ್.ಎಸ್. ಉಪ್ಪಾರ ಸಾಲು ಮರದ ತಿಮ್ಮಕ್ಕನವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ವಕೀಲರು, ನ್ಯಾಯಾಲಯದ ಸಿಬ್ಬಂದಿ, ಅರಣ್ಯ ಇಲಾಖೆಯ ಸಿಬ್ಬಂದಿ ಇನ್ನಿತರರು ಉಪಸ್ಥಿತರಿದ್ದರು.

ಮಾಜಿ ಸಚಿವ ಮನೋಹರ ಪುತ್ಥಳಿ ಅನಾವರಣ

ಹಾನಗಲ್ಲ: ಮಾಜಿ ಸಚಿವ ದಿ.ಮನೋಹರ ತಹಸೀಲ್ದಾರ ಅವರ ಕಂಚಿನ ಪುತ್ಥಳಿಯ ಅನಾವರಣ ನವೆಂಬರ್21 ರಂದು ತಾಲೂಕಿನ ಅಕ್ಕಿವಳ್ಳಿಯಲ್ಲಿ ನಡೆಯಲಿದೆ ಎಂದು



ಮನೋಹರ ತಹಸೀಲ್ದಾರ ಅವರ ಪುತ್ರ ರಾಘವೇಂದ್ರ ತಹಶೀಲ್ದಾರ ತಿಳಿಸಿದರು. ಬುಧವಾರ ಹಾನಗಲ್ಲಿನಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರ ನೀಡಿದ ಅವರು, ನ.21 ರಂದು ಬೆಳಿಗ್ಗೆ ತಾಲೂಕಿನ ಅಕ್ಕಿವಳ್ಳಿಯ ಮನೋಹರ ತಹಶೀಲ್ದಾರ ಫಾರ್ಮ ಹೌಸ್ನಲ್ಲಿ ಅವರ ಕಂಚಿನ ಪುತ್ಥಳಿ ಅನಾವರಣ ಹಾಗೂ ಪ್ರಥಮ ಪುಣ್ಯ ಸ್ಮರಣೋತ್ಸವ ನಡೆಯಲಿದೆ. ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿ ಗಳು, ಕನಕ ಗುರುಪೀಠದ ಜಗದ್ಗುರು ನಿರಂಜನಾ ನಂದಪುರಿ ಮಹಾಸ್ವಾಮಿಗಳು, ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಮಾಜಿ ಸಚಿವ ಬಿ.ಸಿ.ಪಾಟೀಲ, ಮಾಜಿ ಶಾಸಕ ವಿರುಪಾಕ್ಷಪ್ಪ ಬಳ್ಳಾರಿ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ, ಶಿವರಾಜ ಸಜ್ಜನ, ಅರುಣಕುಮಾರ ಪೂಜಾರ, ಗಿವಿಸಿದ್ದಪ್ಪ ಹೊಸಮನಿ, ಭರತ ಬೊಮ್ಮಾಯಿ, ಅಜ್ಜಯ್ಯಸ್ವಾಮಿ ಆರಾಧ್ಯಮಠ, ಮಹೇಶಕುಮಾರ ಕಮಡೊಳ್ಳಿ, ಆರ್.ಬಿ.ಪಾಟೀಲ, ಕೆ.ಎಲ್. ದೇಶಪಾಂಡೆ, ನಾಗರಾಜ ಉದಾಸಿ ಮೊದಲಾದವರು ಪಾಲಗೊಳ್ಳುವರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವೆಂಕಟೇಶ ತಹಶೀಲ್ದಾರ, ಅಣ್ಣಪ್ಪ ಚಾಕಾಪುರ ಇದ್ದರು.

ಇಂದು ಎಐ ಕುರಿತು ಜಾಗೃತಿ ಅಭಿಯಾನ

ಧಾರವಾಡ: ಪಂ. ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕೆ.ಇ ಬೋರ್ಡ್ ಪ್ರೌಢಶಾಲೆ ಆಶ್ರಯದಲ್ಲಿ 2ನೇ ಯುವ ಚಿಂತನಾ ಸಮಾವೇಶದ ಅಂಗವಾಗಿ ಧಾರವಾಡ ಉತ್ತರ ಕನ್ನಡ ಹಾಗೂ ಹಾವೇರಿ ಜಿಲ್ಲೆಯ ಕಾಲೇಜುಗಳಲ್ಲಿ ಹಾಗೂ ವಿವಿಧ ಸಂಘ-ಸಂಸ್ಥೆಗಳಲ್ಲಿ ನಡೆಯುವ ಸಂಸ್ಕೃತಿಕ, ಜಾಗೃತ ಕಾರ್ಯಕ್ರಮಗಳ ಪ್ರಯುಕ್ತ ಎ. ಐ. ತಂತ್ರಜ್ಞಾನದ ಜಾಗೃತಿ ಅಭಿಯಾನದಲ್ಲಿ ಉಪನ್ಯಾಸ ಕಾರ್ಯಕ್ರಮ ದಿ. 21ರಂದು ಮಧ್ಯಾಹ್ನ 3 ಗಂಟೆಗೆ ಮಾಳಮಡ್ಡಿಯ ಕೆ. ಇ. ಬೋರ್ಡ್ ಪ್ರೌಢಶಾಲೆಯ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಜ್ಞಾನಿ ಪ್ರೊ. ಶ್ರೀಧರ ಉದಗಟ್ಟಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎನ್. ಎಸ್ ಗೋವಿಂದರೆಡ್ಡಿ ವಹಿಸುವರು. ಡಾ. ಶ್ರೀಧರ್ಐ ಜೋಶಿ ಉಪನ್ಯಾಸ ನೀಡಲಿದ್ದಾರೆ. ಎಂ.ಎನ್ ಪಾಟೀಲ, ಎಂ.ಎಸ್ ಫರಾಸ, ಅರುಣಕುಮಾರ ಶೀಲವಂತ, ವಿಷ್ಣು ಹುಕ್ಕೇರಿ ಅತಿಥಿಗಳಾಗಿ ಆಗಮಿಸುವರು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಮಾರ್ತಾಂಡಪ್ಪ ಕತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆ ಕೀಲಿ ಮುರಿದು ಕಳ್ಳತನ

ಧಾರವಾಡ: ಮನೆಯವರು ಊರಿಗೆ ತೆರಳಿ ಸಂದರ್ಭದಲ್ಲಿ ಕಳ್ಳತನ ಮಾಡಿದ ಘಟನೆ ಇಲ್ಲಿನ ವಿದ್ಯಾಗಿರಿ ಠಾಣಾ ವ್ಯಾಪ್ತಿಯ ಗಾಂಧಿ ನಗರದಲ್ಲಿ ನಡೆದಿದೆ. ಚಂದ್ರಶೇಖರ ಬಸಪ್ಪ ಯಳ್ಳೂರ ಎಂಬುವರ ಮನೆಯಲ್ಲಿ ಕಳ್ಳತನವಾಗಿದೆ. ಚಂದ್ರಶೇಖರ ಕುಟುಂಬದ ದವರು ಊರಿಗೆ ಹೋದ ಸಂದರ್ಭದಲ್ಲಿ ಮನೆಯ ಕೀಲಿಮುರಿದು ಕಳ್ಳತನ ಮಾಡಲಾಗಿದೆ. ಮನೆಯಲ್ಲಿನ ಚಿನ್ನ, ಯಳ್ಳೂರ ಕುಟುಂಬದವರು ಬಂದ ನಂತರ ಕಳ್ಳತನದ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ. ಸ್ಥಳಕ್ಕೆ ಸಿಪಿಐ ಎಂ.ಎಂ. ತಹಶಿಲ್ದಾರ ಭೇಟಿ ನೀಡಿದ್ದರು.

ಯಂತ್ರಕ್ಕೆ ಸಿಲುಕಿ ಮಹಿಳೆ ಸಾವು

ಬೆಳಗಾವಿ: ಕಬ್ಬು ಕತ್ತರಿಸುವ ಬೃಹತ್ ಯಂತ್ರಕ್ಕೆ ಸಿಲುಕಿ ರೈತ ಮಹಿಳೆ ಮೃತಪಟ್ಟ ಘಟನೆ ಅಥಣಿ ತಾಲೂಕಿನ ಸಪ್ತಸಾಗರ ಗ್ರಾಮದಲ್ಲಿ ನಡೆದಿದೆ. ಶೋಭಾ ಶ್ರೀಕಾಂತ ಸಂಕ್ರಟ್ಟಿ (54) ಮೃತಪಟ್ಟ ಮಹಿಳೆ. ಸ್ವಂತ ಜಮೀನಿನಲ್ಲಿ ಕಬ್ಬು ಕಟಾವು ಮಾಡುವ ವೇಳೆ ಯಂತ್ರದ ಬುಡಕ್ಕೆ ಸಿಲುಕಿ ಮಹಿಳೆ ಮೃತಪಟ್ಟಿದ್ದಾಳೆ. ಅಥಣಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಎರಡೂವರೆ ವರ್ಷದ ನಂತರ ಸಂಪುಟ ಪುನಾರಚನೆ ಮಾಡಬಹುದು ಎಂದು ತಿಳಿಸಿದ ನಂತರವಷ್ಟೇ , ಮುಖ್ಯಮಂತ್ರಿ ಬದಲಾವಣೆಯ ವಿಷಯ ಮುನ್ನಲೆಗೆ ಬಂದಿದೆ. ಸಂಪುಟ ಪುನಾರಚನೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ತೆಗೆದುಕೊಳ್ಳಬೇಕಿದೆ. ಒಟ್ಟು 34 ಸಚಿವ ಸ್ಥಾನಗಳಿದ್ದು, ಅದರಲ್ಲಿ ಎರಡು ಸ್ಥಾನ ಖಾಲಿಯಿದೆ. ಪುನಾರಚನೆ ವೇಳೆ ಈ ಖಾಲಿ ಸ್ಥಾನಗಳನ್ನು ಕೂಡ ಭರ್ತಿ ಮಾಡಲಾಗುವುದು.



ಪೊಲೀಸ್ ಇಲಾಖೆಯಿಂದ ಜಿಲ್ಲಾ ವಾರ್ಷಿಕ ಕ್ರೀಡಾಕೂಟದಲ್ಲಿ ಡಾ.ವಿಜಯಮಹಾಂತೇಶ್ ದಾನಮ್ಮನವರ ಹೇಳಿಕೆ

ಪೊಲೀಸರ ಕರ್ತವ್ಯ ಬದ್ಧತೆ,ಸಮಾಜಕ್ಕೆ ನಿರಾಂತಕ

ಹಾವೇರಿ: ಪೊಲೀಸರು ತಮ್ಮ ಜೀವನವನ್ನು ಪಣಕ್ಕಿಟ್ಟು ಜನರ ಶಾಂತಿ ಮತ್ತು ನೆಮ್ಮದಿಗೆ ಹಾಗೂ ಸಮಾಜದಲ್ಲಿನ ಅಪರಾಧ ಕೃತ್ಯಗಳನ್ನು ತಡೆಯುವುದರ ಮೂಲಕ ಸಾರ್ವಜನಿಕರ ಆಸ್ತಿ ಪಾಸ್ತಿಗಳನ್ನು ರಕ್ಷಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಹೇಳಿದರು.

ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿಪೊಲೀಸ್ ಇಲಾಖೆಯಿಂದ 3 ದಿನಗಳ ಕಾಲ ಆಯೋಜಿಸಿರುವ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಚೀನ ಕಾಲದಿಂದಲೂ ಯಾವುದೇ ಒಂದು, ಆಡಳಿತ ವ್ಯವಸ್ಥೆಯಲ್ಲಿ ಎರಡು ಪ್ರಮುಖ ಜವಾಬ್ದಾರಿಗಳಿವೆ ಅದರಲ್ಲಿ ಮೊದಲನೇಯದು ರಾಜ್ಯಸ್ವಿ ಸಂಗ್ರಹಣೆ ಮತ್ತು ಒಡಾಳಿತ ನಿರ್ವಹಣೆ, ಎರಡನೆಯದು ಪ್ರಾಂತ್ಯಗಳ ರಕ್ಷಣೆ ಮೊದಲನೇ ಕೆಲಸವನ್ನು ಕಂದಾಯ ಇಲಾಖೆ ಮಾಡಿದರೆ ಎರಡನೆಯ ಕೆಲಸವನ್ನು ಪೊಲೀಸ್ ಇಲಾಖೆ ಮಾಡಿಕೊಂಡು ಬಂದಿದೆ ಎಂದರು.

ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಒತ್ತಡದಲ್ಲಿ ಕೆಲಸ ಮಾಡುತ್ತಾರೆ. ಅವರು ದಿನದ 24 ಗಂಟೆ ಕರ್ತವ್ಯದಲ್ಲಿರುತ್ತಾರೆ. ಇವರಿಗೆ ಬೇರೆ ಇಲಾಖೆಗಳಂತೆ ನಿರ್ದಿಷ್ಟ ಕಾಲ ಮಿತಿಯಿಲ್ಲ, ಸಮಾಜದಲ್ಲಿ ನಡೆಯುವ ಕೊಲೆ, ಸುಲಿಗೆ, ಕಳ್ಳತನ ಇದರ ನಡುವೆ ಹಬ್ಬ ಹರಿದಿನಗಳು, ದಿನಾಚರಣೆಗಳು ಹಾಗೂ ಇನ್ನಿತರೇ ಕೆಲಸದ ಒತ್ತಡ, ಹೀಗೆ ಬೇರೆ ಬೇರೆ ಸವಾಲುಗಳೊಂದಿಗೆ ಒತ್ತಡವನ್ನು ಅನುಭವಿಸುತ್ತಾರೆ. ಇದರಿಂದ ಹಲವಾರು ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಾರೆ, ಅನಿರೀಕ್ಷಿತವಾಗಿ ಉಂಟಾದ ಒತ್ತಡವನ್ನು ಶಮನಗೊಳಿಸಲು ಕ್ರೀಡಾಕೂಟಗಳು

ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಡಿಸಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಅವರು ಮಾತನಾಡಿದರು.

ಉಪಯುಕ್ತವಾಗಲಿವೆ ಮತ್ತು ಕ್ರೀಡಾ ಚಟುವಟಿಕೆಗಳಿಂದ ನವ ಚೈತನ್ಯ ಉತ್ಸಾಹ ಹೆಚ್ಚಾಗುತ್ತದೆ. ಇದು ಕೇವಲ ಕ್ರೀಡಾಕೂಟದಂತಹ ಕಾರ್ಯಕ್ರಮಕ್ಕೆ ಸೀಮಿತವಾಗದೆ. ಪ್ರತಿದಿನ ಯಾವುದಾದರೊಂದು ಕ್ರೀಡೆಯಲ್ಲಿ ನಮ್ಮನ್ನು ನಾವುಗಳು ತೊಡಗಿಸಿಕೊಳ್ಳಬೇಕು ಇದರಿಂದ ದೈಹಿಕವಾಗಿ ಸಮತೋಲನ ಕಾಯ್ದುಕೊಳ್ಳುವುದರ ಜೊತೆಗೆ ಕೆಲಸದ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮನುಷ್ಯನ ಆಶೋತ್ತರಗಳು ಕಾಲ ಕಾಲಕ್ಕೆ ಬದಲಾಗುತ್ತ ಹೋಗುತ್ತವೆ. ಮನುಷ್ಯನಿಗೆ ಆಸೆಗಳು ಜಾಸ್ತಿಯಿರುವುದರಿಂದ ಅಶೋತ್ತರಗಳು ಹೆಚ್ಚಾಗುತ್ತವೆ ಮೊದಲು ವಿದ್ಯುತ್, ನೀರು ಮತ್ತು ರಸ್ತೆ ಇವುಗಳಿಗೆ ಹೆಚ್ಚು ಪ್ರಶಸ್ತ್ಯ ನೀಡುತ್ತಿದ್ದರು. ಈಗ ಕಾಲ ಬದಲಾದಂತೆ ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯದಕಡೆಗೆ ಒಲವು ತೋರಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ಇಂದು ಮನುಷ್ಯ ಯಾವುದೇ ಹಿಂಸೆ ಇಲ್ಲದ ಸಮಾಜ ಬಯಸುತ್ತಾರೆ, ಯಾವುದೇ ರೋಗವಿಲ್ಲದ ದೇಹ ಬಯಸುತ್ತಾರೆ, ಯಾವುದೇ ದುಃಖ ವಿಲ್ಲದ ಆತ್ಮ ಇರಬೇಕು, ಯಾವುದೇ ಗೊಂದಲವಿಲ್ಲದ ಮನಸ್ಸು ಇರಬೇಕು, ಯಾವುದೇ ಪ್ರತಿಭಂದ ಇಲ್ಲದ ಬುದ್ಧಿಶಕ್ತಿ ಇರಬೇಕು, ಯಾವುದೇ ಆಘಾತ ವಿಲ್ಲದ ನೆನಪಿನ ಶಕ್ತಿ ಇರಬೇಕು ಎಂದು ಬಯಸುತ್ತಾರೆ ಇವೆಲ್ಲವೂ ಮನಷ್ಯನ ಮೂಲಭೂತ ಹಕ್ಕುಗಳಾಗಿವೆ ಎಂದರು.

ಸಂಪತ್ತಿನ ಮೂಲ ಉದ್ದೇಶ ನಾವುಗಳು ಆಸ್ತಿ ಗಳಿಸಬೇಕು ಮತ್ತು ಸಂತೋಷದಿಂದ ಇರಬೇಕು ಎಂದುಕೊಳ್ಳುತ್ತೇವೆ. ಆದರೆ ಅದು ಸಾಧ್ಯವಾಗುತ್ತಿಲ್ಲ, ಗ್ರೋಸ್ ನ್ಯಾಷನಲ್ ಹ್ಯಾಪಿನೆಸ್ ರಿಪೋರ್ಟ್ ಪ್ರಕಾರ ಯಾವೆಲ್ಲ ದೇಶದ ಜನರು ಹೇಗೆ ಖುಷಿಯಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ ಎಷ್ಟು ಖುಷಿಯಲ್ಲಿದ್ದಾರೆ ಎಂಬುವುದನ್ನು ನೋಡುವುದಾಗಿದೆ. ಇದರಲ್ಲಿ ಭಾರತ ದೇಶವು 143 ದೇಶಗಳ ಪೈಕಿ 126 ನೇ ಸ್ಥಾನದಲ್ಲಿದೆ. ಇಂದು ನಾವು 4 ಪ್ರಕಾರದಲ್ಲಿ ಸಂಪತ್ತಿನ ಕುರಿತು ಮಾತನಾಡುತ್ತೇವೆ ದುಡ್ಡು ಮತ್ತು ಆಸ್ತಿ ಸಂಪತ್ತು,ಸಾಮಾಜಿಕ ಸಂಪತ್ತು, ಸಮಯ ಸಂಪತ್ತು ಹಾಗೂ ಆರೋಗ್ಯ ಸಂಪತ್ತು ಮೇಲಿನ ಮೂರು ಸಂಪತ್ತುಗಳಿಗಿಂತ ಅರೋಗ್ಯ ಸಂಪತ್ತು ತುಂಬಾನೇ ಮಹತ್ವದಾಯಕವಾಗಿದೆ. ಆರೋಗ್ಯ ಸರಿಯಾಗಿ ಕಾಯ್ದುಕೋಳ್ಳದಿದ್ದಲ್ಲಿ ನಾವುಗಳು ಏನು ಸಂಪಾದಿಸಿದರೂ ಕೂಡ ಅದು ಲೆಕ್ಕಕ್ಕೆ ಇರುವುದಿಲ್ಲ, ಹೀಗಾಗಿ ಆರೋಗ್ಯದ ಕಡೆಗೆ ನಾವುಗಳು ಹೆಚ್ಚು ಕಾಳಜಿ ವಹಿಸಬೇಕು ಅದರಲ್ಲೂ ವಿಶೇಷವಾಗಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಈ ನಿಟ್ಟಿನಲ್ಲಿ ಗಮನಹರಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧ ವಂಟಗೋಡಿ ಇವರು ಸ್ವಾಗತಿಸಿದರು.

ಬಳಿಕ ಪರೇಡ್ ಕಮಾಂಡರ್ ಆರ್‌ಪಿ ಐ ಶಂಕರ ಗೌಡ ಪಾಟೀಲ್ ಇವರ ನೇತೃತ್ವದಲ್ಲಿ 6 ಪ್ಲಟುನಗಳಾದ ಹಾವೇರಿ ಉಪ ವಿಭಾಗ, ಶಿಗ್ಗಾಂವ ಉಪ ವಿಭಾಗ, ಮಹಿಳಾ ಪೊಲೀಸ್ ಹಾವೇರಿ, ರಾಣೇಬೆನ್ನೂರ್‌ಉಪ ವಿಭಾಗ, ಜಿಲ್ಲಾ ಸಶಸ್ತ್ರವಿಸಲು ಪಡೆ ಹಾವೇರಿ, ವಿಶೇಷ ಘಟಕ ಹಾವೇರಿ ಇವರಿಂದ ಪಥಸಂಚಲನ ನಡೆಯಿತು ಮತ್ತು ಕ್ರೀಡಾಪಟುಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಇದೆ ಸಂದರ್ಭದಲ್ಲಿ ಪೊಲೀಸ್ ಪೇದೆ ಸಂತೋಷ್ ನಾಯ್ಕ್ ಕ್ರೀಡಾ ಜ್ಯೋತಿ ಹಿಡಿದು ಸಾಗಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರುಚಿ ಬಿಂದಲ್, ಅಪರ ಜಿಲ್ಲಾಧಿಕಾರಿ ಡಾ ಎಲ್ ನಾಗರಾಜ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಾ ಪುನೀತ್, ಹೆಚ್ಚುವರಿ ಪೊಲೀಸ್ ಅಧಿಕ್ಷಕರಾದ ಲಕ್ಷ್ಮಣ ಶಿರಕೋಳ, ಜಿಲ್ಲೆಯ ಎಲ್ಲ ವಿಭಾಗದ ಪೊಲೀಸ್ ಡಿ ವೈ ಎಸ್ ಪಿ, ಸಿ ಪಿ ಐ, ಪಿ ಎಸ್ ಐ, ಪೊಲೀಸ್ ಸಿಬ್ಬಂದಿಗಳು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಆರ್‌ಪಿಐ ಶಂಕರಗೌಡ ನೇತೃತ್ವದಲ್ಲಿ ಪಥಸಂಚಲನ

ಪರೇಡ್ ಕಮಾಂಡರ್ ಆರ್‌ಪಿ ಐ ಶಂಕರ ಗೌಡ ಪಾಟೀಲ್ ಇವರ ನೇತೃತ್ವದಲ್ಲಿ 6 ಪ್ಲಟುನಗಳಾದ ಹಾವೇರಿ ಉಪ ವಿಭಾಗ, ಶಿಗ್ಗಾಂವ ಉಪ ವಿಭಾಗ, ಮಹಿಳಾ ಪೊಲೀಸ್ ಹಾವೇರಿ, ರಾಣೇಬೆನ್ನೂರ್ ಉಪ ವಿಭಾಗ, ಜಿಲ್ಲಾ ಸಶಸ್ತ್ರವಿಸಲು ಪಡೆ ಹಾವೇರಿ, ವಿಶೇಷ ಘಟಕ ಹಾವೇರಿ ಇವರಿಂದ ಪಥಸಂಚಲನ ನಡೆಯಿತು.

ಕ್ರೀಡಾ ಚಟುವಟಿಕೆಗಳಿಂದ ನವ ಚೈತನ್ಯ ಉತ್ಸಾಹ ಹೆಚ್ಚಾಗುತ್ತದೆ. ಇದು ಕೇವಲ ಕ್ರೀಡಾಕೂಟದಂತಹ ಕಾರ್ಯಕ್ರಮಕ್ಕೆ ಸೀಮಿತವಾಗದೆ. ಪ್ರತಿದಿನ ಯಾವುದಾದರೊಂದು ಕ್ರೀಡೆಯಲ್ಲಿ ನಮ್ಮನ್ನು ನಾವುಗಳು ತೊಡಗಿಸಿಕೊಳ್ಳಬೇಕು ಇದರಿಂದ ದೈಹಿಕವಾಗಿ ಸಮತೋಲನ ಕಾಯ್ದುಕೊಳ್ಳುವುದರ ಜೊತೆಗೆ ಕೆಲಸದ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

-ಡಾ.ವಿಜಯಮಹಾಂತೇಶ್ ದಾನಮ್ಮನವರ, ಜಿಲ್ಲಾಧಿಕಾರಿ

ಇಂದು ಧರ್ಮ ಧ್ವಜ ಅಭಿಯಾನ ಸಮಾರೋಪ ಸಮಾರಂಭ

ಹಾನಗಲ್ಲ: ಎರಡು ತಿಂಗಳಿನಿಂದ ಹಾನಗಲ್ಲ ತಾಲೂಕಿನಲ್ಲಿ ನಡೆದ ಧರ್ಮ ಧ್ವಜ ಅಭಿಯಾನ ನವೆಂಬರ್21 ರಂದು ಹಾನಗಲ್ಲಿನಲ್ಲಿ ಸಮಾರೋಪ ಸಮಾರೋಪಗೊಳ್ಳಲಿದ್ದು, ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ದಿಕ್ಸೂಚಿ ಭಾಷಣ ಮಾಡುವರು, ಮಾಜಿ ಮುಖ್ಯಮಂತ್ರಿ ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಮಠಾಧೀಶರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಅಗಡಿ ಅಕ್ಕಿಮಠದ ಗುರುಲಿಂಗ ಮಹಾಸ್ವಾಮಿಗಳು ಹಾಗೂ ಮಾತೋಶ್ರೀ ಲಿಂ.ರುದ್ರಮ್ಮ ಗುರುಪಾದಪ್ಪ ಕಮಡೊಳ್ಳಿ ಸ್ಮಾರಕ ಟ್ರಸ್ಟ ಅಧ್ಯಕ್ಷ ಕಮಡೊಳ್ಳಿ ಸಿದ್ದಲಿಂಗಣ್ಣ ತಿಳಿಸಿದರು.

ಬುಧವಾರ ಇಲ್ಲಿನ ಶ್ರೀ ಕುಮಾರೇಶ್ವರ ವಿರಕ್ತಮಠದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶುಕ್ರವಾರ ಮದ್ಯಾಹ್ನ 4 ಗಂಟೆಗೆ ಪಟ್ಟಣದ ಶ್ರೀ ಕುಮಾರೇಶ್ವರ ವಿರಕ್ತಮಠದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಹಿಂದೂ ಧರ್ಮ ಧ್ವಜ ಅಭಿಯಾನ ಹಾನಗಲ್ಲ ತಾಲೂಕಿನಲ್ಲಿ ಕಳೆದ ಎರಡು ವರ್ಷಗಳಿಂದ ವರ್ಷಕ್ಕೆ ಎರಡು ಬಾರಿ ನಡೆಯುತ್ತಿದೆ. ಹಿಂದುಗಳೆಲ್ಲ ಒಂದಾಗಲು ಇದೊಂದು ಜಾಗೃತಿ ಅಭಿಯಾನವಾಗಿದೆ. ಇದು ಪ್ರತಿ ವರ್ಷ ಎರಡು ಬಾರಿ ಹಾನಗಲ್ಲ ತಾಲೂಕಿನ ಎಲ್ಲ ಗ್ರಾಮ ಪಟ್ಟಣಗಳ ಹಿಂದೂ ಮಂದಿರಗಳಿಗೆ ಧರ್ಮ ಧ್ವಜ ನೀಡುವುದು ನಿರಂತರವಾಗಿ ಮುಂದುವರೆಯುತ್ತದೆ ಎಂದರು.

ಕೂಡಲ ಸಂಗಮ ಪಂಚಮಸಾಲಿ ಪೀಠದ ಜಯಮೃತ್ಯುಂಜಯ ಮಹಾಸ್ವಾಮಿಗಳು, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಜಿ, ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು, ಸಿದ್ದರಾಮೇಶ್ವರ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಜಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮಿಜಿ, ಬೊಮ್ಮನಹಳ್ಳಿಯ ಶಿವಯೋಗೀಶ್ವರ ಮಹಾಸ್ವಾಮಿಗಳು, ಅಗಡಿ ಅಕ್ಕಿಮಠದ ಗುರುಲಿಂಗ ಮಹಾಸ್ವಾಮಿಗಳು, ಕೂಡಲದ ಗುರುಮಹೇಶ್ವರ ಶಿವಾಚಾರ್ಯರು, ಅಕ್ಕಿಆಲೂರಿನ ಶಿವಬಸವಮಹಾಸ್ವಾಮಿಗಳು, ಚಂದ್ರಶೇಖರ ಶಿವಾಚಾರ್ಯರು, ಮೂಡಿ ಸದಾಶಿವ ಮಹಾಸ್ವಾಮಿಗಳು, ಹೋತನಹಳ್ಳಿ ಶಂಕರಾನಂದ ಮಹಾಸ್ವಾಮಿಗಳು, ಹೇರೂರು ಗುಬ್ಬಿ ನಂಜುಂಡೇಶ್ವರ ಪಂಡಿತಾರಾಧ್ಯ ಶಿವಾಚಾರ್ಯರು, ತಿಳವಳ್ಳಿ ನಿರಂಜನ ಮಹಾಸ್ವಾಮಿಗಳು, ಕೂಸನೂರು ಜ್ಯೋತಿರ್ಲಿಂಗ ಮಹಾಸ್ವಾಮಿಗಳು, ಹುಬ್ಬಳ್ಳಿ-ಗುಂಡೂರು ವಿಶ್ವೇಶ್ವರ ಮಹಾಸ್ವಾಮಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ರಾಮು ಯಳ್ಳೂರ, ಬಸವರಾಜ ಹಾದಿಮನಿ, ಪರಶುರಾಮ ಬಾರ್ಕಿ,ರಮೇಶ ಕಳಸೂರ, ಎಸ್.ವಿ.ಪಾಟೀಲ, ಅಮಿತ ನೆಲೋಗಲ್ಲ, ಶಿವಯೋಗಿ ಹಿರೇಮಠ, ಮಂಜುನಾಥ ನಿಂಬಣ್ಣನವರ, ಶಾಂತವೀರಣ್ಣ ನೆಲೋಗಲ್ಲ ಇದ್ದರು.

ಸುದ್ದಿಗೋಷ್ಠಿಯಲ್ಲಿ ಅಗಡಿ ಅಕ್ಕಿಮಠದ ಗುರುಲಿಂಗ ಮಹಾಸ್ವಾಮಿಗಳು ಮಾತನಾಡಿದರು.

ಜಿಲ್ಲಾ ಆಸ್ಪತ್ರೆಗೆ ಡಿಸಿ ಭೇಟಿ, ಪರಿಶೀಲನೆ

ಹಾವೇರಿ: ಹಾವೇರಿ ಜಿಲ್ಲಾ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಗುರುವಾರ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ್ ದಾನಮ್ಮನವರ ಅವರು ಭೇಟಿ ನೀಡಿ ಪರಿಶೀಲಿಸಿದರು.

ಆಸ್ಪತ್ರೆಯಲ್ಲಿನ ವೈದ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ರೋಗಿಗಳೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕು. ಅವರ ಸಮಸ್ಯೆಯನ್ನು ತಾಳ್ಮೆಯಿಂದ ಆಲಿಸಿ, ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದ ಅವರು, ಆಸ್ಪತ್ರೆಯಲ್ಲಿ ಸ್ವಚ್ಚತೆಗೆ ಮೊದಲ ಆದ್ಯತೆ ನೀಡಬೇಕು ಎಂದು ಸೂಚನೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹೆರಿಗೆ ವಾರ್ಡ್‌ಗೆ ಭೇಟಿ ನೀಡಿದ ಅವರು, ಬಾಣಂತಿ ಹಾಗೂ ಶಿಶುಗಳ ಆರೋಗ್ಯ ವಿಚಾರಿಸಿದರು. ವೈದ್ಯರು ಹಾಗೂ ಸಿಬ್ಬಂದಿಗಳು ಸರಿಯಾದ ಸಮಯಕ್ಕೆ ಹಾಜರಾಗಿ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದ ಅವರು, ಒ ಪಿ ಡಿ ಯಲ್ಲಿ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಲು ಹಾಗೂ ರೋಗಿಗಳಿಗೆ ಔಷದಿಗಳನ್ನು ಹೊರಗಡೆ ಬರೆದು ಕೊಡದಂತೆ ವೈದ್ಯರಿಗೆ ಸೂಚಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸ ಡಾ.ಪಿ.ಆರ್. ಹಾವನೂರ, ವಿವಿಧ ವೈದ್ಯರು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹಾವೇರಿ ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ್ ದಾನಮ್ಮನವರ ಅವರು ಭೇಟಿ ನೀಡಿ ಪರಿಶೀಲಿಸಿದರು.

ಧರ್ಮಸ್ಥಳ ವಿರುದ್ಧ ಅಪಪ್ರಚಾರ: ಕ್ರಮಕ್ಕೆ ಆಗ್ರಹ

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ನಡೆಸುತ್ತಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಅಭಿಮಾನಿ ವೇದಿಕೆಯಿಂದ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಧಾರವಾಡ: ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹೆಸರಿಗೆ ಕಳಂಕ ತರಲು ಸುಳ್ಳು ಪ್ರಚಾರ ಮಾಡಿದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಶ್ರೀಕ್ಷೇತ್ರ ಧರ್ಮಸ್ಥಳದ ಅಭಿಮಾನಿ ವೇದಿಕೆಯಿಂದ ಸೋಮವಾರ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಪುಣ್ಯ ಕ್ಷೇತ್ರ ಧರ್ಮಸ್ಥಳದ ಹೆಸರಿಗೆ ಕಳಂಕ ತರುವ ನಿಟ್ಟಿನಲ್ಲಿ ಧರ್ಮಸ್ಥಳ ಗ್ರಾಮದ ಹಲವು ಕಡೆಗಳಲ್ಲಿ ನೂರಾರು ಶವಗಳನ್ನು ಹೂತಿದ್ದಾರೆ ಎಂದು ಆರೋಪ ಮಾಡಿದ ಜಯಂತ ಟಿ, ಗಿರೀಶ ಮಟ್ಟಣ್ಣನವರ್,ಮಹೇಶ್ ಶೆಟ್ಟಿ ತಿಮರೋಡಿ, ವಿಠ್ಠಲ ಗೌಡ ಅವರ ಮೇಲೆ ನಿರ್ದಾಕ್ಷಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು.

ಆರಾಧ್ಯ ಕ್ಷೇತ್ರವಾದ ಧರ್ಮಸ್ಥಳದ ಪಾವಿತ್ರತೆಗೆ ಕಳಂಕ ತರಲು ಹಾಗೂ ಇಲ್ಲಿನ ಧರ್ಮಾಧಿಕಾರಿಗಳ ಘನತೆ ಗೌರವಕ್ಕೆ ಕುಂದು ತರುವ ಸಲುವಾಗಿ ಷಡ್ಯಂತ್ರವನ್ನು ರೂಪಿಸಿದ ಬುರುಡೆ ಗ್ಯಾಂಗಿನ ಸದಸ್ಯರನ್ನು ಇದುವರೆಗೂ ಯಾವುದೇ ವಿಚಾರಣೆಗೂ ಒಳಪಡಿಸದೆ, ಬಂಧನವನ್ನೂ ಮಾಡದೆ ನಿರ್ಭೀತಿಯಿಂದ ಓಡಾಡಲು ಅವಕಾಶವನ್ನು ಮಾಡಿಕೊಟ್ಟಿರುವ ವಿಚಾರವು ತುಂಬಾ ಬೇಸರದ ಸಂಗತಿಯಾಗಿದೆ. ಇದು ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಅತೀವ ನಂಬಿಕೆಯುಳ್ಳ ನಮಗೆಲ್ಲಾ ಅತೀವ ನೋವುಂಟು ಮಾಡುತ್ತಿದೆ.

ಡಾ. ಡಿ ವೀರೇಂದ್ರ ಹೆಗ್ಗಡೆಯವರ ವಿರುದ್ಧ ಷಡ್ಯಂತ್ರಗಳನ್ನು ಮಾಡಿ, ಅಪಪ್ರಚಾರ ಮಾಡಿದ ಬುರುಡೆ ಗ್ಯಾಂಗಿನ ಆರೋಪಿಗಳಾದ ಜಯಂತ ಟಿ, ಸಂತೋಷ್ ಶೆಟ್ಟಿ, ಮಹೇಶ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟಣ್ಣನವರ್,ಅಜಯ್ ಅಂಚನ್ ಮತ್ತು ಅವರ ಗುಂಪಿನವರನ್ನು ಎಸ್‌ಐಟಿ ವಿಶೇಷ ತನಿಖಾ ತಂಡವು ಕೂಡಲೇ ಬಂಧಿಸಿ ಅವರನ್ನು ತೀವ್ರ ವಿಚಾರಣೆಗೊಳಪಡಿಸಿ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ವಸಂತ ಅರ್ಕಾಚಾರ, ಕರಿಯಪ್ಪ ಅಮ್ಮಿನಭಾವಿ, ಮೃತ್ಯುಂಜಯ ಸಾಲಿಮಠ, ಮಾರುತಿ ಶೇಟ್, ಮಂಜುನಾಥ ಚೋಳಪ್ಪನವರ, ಪುಂಡಲೀಕ ಹಡಪದ, ಉಳವಪ್ಪ ಬಳಿಗೇರ, ಎಂ.ಟಿ.ಹೊನ್ನಿಹಳ್ಳಿ, ಮಂಜುನಾಥ ಚೋಳಪ್ಪನವರ ಇತರರಿದ್ದರು.

ವಕೀಲರ ಸಂಘ:ಅಂತಿಮ ಕಣದಲ್ಲಿ 25 ಮಂದಿ

ಹಾವೇರಿ: ಜಿಲ್ಲಾ ವಕೀಲರ ಸಂಘದ 2025 - 2027 ಸಾಲಿನ ಚುನಾವಣೆ ಪ್ರಕ್ರಿಯೆ ಆರಂಭಗೊಂಡಿದ್ದು ನಾಮಪತ್ರ ವಾಪಸ್ ಪಡೆಯಲು ನ.19

ಕೊನೆಯ ದಿನಕ್ಕೆ ಅಂತಿವಾಗಿ ಕಣದಲ್ಲಿ ಅಧ್ಯಕ್ಷ ಸ್ಥಾನಕ್ಕೆ- 3 ಉಪಾಧ್ಯಕ್ಷ ಸ್ಥಾನಕ್ಕೆ- 3, ಕಾರ್ಯದರ್ಶಿ ಸ್ಥಾನಕ್ಕೆ- 4, ಸಹ ಕಾರ್ಯದರ್ಶಿಗೆ - 3 ಖಜಾಂಚಿ- 3 ಸೇರಿದಂತೆ ಆಡಳಿತ ಮಂಡಳಿ ಸ್ಥಾನದಲ್ಲಿ 9 ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಸ್ಪರ್ಧೆಸಿದ್ದಾರೆ.

ಡಿಸೆಂಬರ್ 5 ರಂದು ಚುನಾವಣಾ ಮತದಾನ ನಡೆಯಲಿದ್ದು, ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ.ಜಿಲ್ಲಾ ಕೋರ್ಟ್ ಆವರಣದಲ್ಲಿರುವ ಜಿಲ್ಲಾ ವಕೀಲರ ಸಂಘದ ಕಾರ್ಯಾಲಯದಲ್ಲಿ ಮತದಾನ ಕೇಂದ್ರ ಸ್ಥಾಪಿಸಲಾಗಿದೆ. ಅಂದು ಸಂಜೆ 4.30 ರಿಂದ ಮತ ಏಣಿಕೆ ಕಾರ್ಯಾರಂಭವಾಗಲಿದೆ. ಅಧ್ಯಕ್ಷ- 1 ಉಪಾಧ್ಯಕ್ಷ-1 ಕಾರ್ಯದರ್ಶಿ- 1 ಖಜಾಂಚಿ- 1 ಸಹ ಕಾರ್ಯದರ್ಶಿ- 1 ಆಡಳಿತ ಮಂಡಳಿ ಸ್ಥಾನ-6 **ಅಧ್ಯಕ್ಷ ಸ್ಥಾನಕ್ಕೆ:** ಶಂಬಣ್ಣ ಹೇಮಣ್ಣ ಜತ್ತಿ, ಪ್ರಕಾಶ ರಾಮಣ್ಣ ಮುಂಜೋಜಿ,ಹೇಮನಗೌಡ ಚನವೀರಗೌಡ ಶಿದ್ದನಗೌಡರ ಕಣದಲ್ಲಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ: ಬಸವರಾಜ ರಾಮಪ್ಪ ಹಾದಿಮನಿ, ಶಿವಕುಮಾರ್ ಗೌಡ ಚನ್ನವೀರಗೌಡ ಪಾಟೀಲ್, ಮಾರುತಿ ಹನುಮಂತಪ್ಪ ವಾಲಿಕಾರ ಕಣದಲ್ಲಿ ಸ್ಪರ್ಧಿಸಿದ್ದಾರೆ. **ಕಾರ್ಯದರ್ಶಿ ಸ್ಥಾನ:** ಪುಟ್ಟಪ್ಪ ಶಂಬಣ್ಣ ಹೆಬ್ಬಾಳ, ಚಂದ್ರಶೇಖರಯ್ಯ ಚನ್ನಯ್ಯ ಗಬ್ಬೂರಮಠ, ಮಾಹಂತೇಶ ಮಹದೇವಪ್ಪ ಬ್ಯಾಳಿ, ಭರಮನಗೌಡ ರಾಮನಗೌಡ ಪಾಟೀಲ್, ಕಣದಲ್ಲಿದ್ದಾರೆ. **ಸಹ ಕಾರ್ಯದರ್ಶಿ ಸ್ಥಾನ:** ಚನ್ನವೀರಸ್ವಾಮಿ ಸಿದ್ರಾ, ಮಯ್ಯ ಹಿರೇಮಠ, ಮಹಮ್ಮದ ಉಮರ ಮಹಮ್ಮದ ಸಾಧಿಕ್ ರಜಾಕ ನವರ,ಬೀಮನಗೌಡ ಮೃತ್ಯುಂಜಯಪ್ಪ ಮಾಳಗಿ, ಅಂತಿಮವಾಗಿ ಕಣದಲ್ಲಿದ್ದಾರೆ. **ಖಜಾಂಚಿ ಸ್ಥಾನ:** ಶ್ರೀಮತಿ ಅಶ್ವಿನಿ ವಾಮನ ಕೇಳಕರ,ರೆಹಾನಾ ಇಸ್ಮಾಲ್ ಸಾಬ್ ಚನ್ನಪಟ್ಟಣ, ಚನ್ನಮ್ಮ ಮುಖಪ್ಪ ನೆಗಳೂರ ಕಣದಲ್ಲಿದ್ದಾರೆ. **ಆಡಳಿತ ಮಂಡಳಿ ಸ್ಥಾನಗಳು:** ಚಿದಾನಂದ ವೀರಪ್ಪ ಬಡಿಗೇರ, ಸತೀಶ ಬಸವರಾಜ ಹಳೇಮನಿ,ತಿಮ್ಮಣ್ಣ ವೆಂಕಪ್ಪ ರಟ್ಟಿಹಳ್ಳಿ,ಗುಲಾಬ ಸಾಹೇಬ ಖಾನಸಾಹೇಬ್ ನಾಗನೂರ, ಶಿವಾನಂದ ಶಿವಪ್ಪ ಸಣ್ಣತಮ್ಮಣ್ಣನವರ, ಕರಿಬಸಪ್ಪ ಲಕ್ಷ್ಮಪ್ಪ ಅಂಗರಗಟ್ಟಿ, ಶಿವಯೋಗಿ ಚಂದ್ರಶೇಖರ ಕುರವತ್ತಿಗೌಡ, ಶಾಂತಪ್ಪ ಚನ್ನಪ್ಪ ಪೂಜಾರ, ಗುಡ್ಡನಗೌಡ ಬಸನಗೌಡ ಅಂದಾನಿಗೌಡ್ರ ಕಣದಲ್ಲಿ ಸ್ಪರ್ಧಿಸಿದ್ದಾರೆ. ಅಂತಮವಾಗಿ ಕಣದಲ್ಲಿರುವ ಎಲ್ಲ ಅಭ್ಯರ್ಥಿಗಳು ಗೆಲುವಿಗಾಗಿ ನಾನಾ ಕಸರತ್ತು ನಡೆಸಿದ್ದಾರೆ.

ಧಾರವಾಡದ ಹಿರಿಯ ಭಾಷಾ ವಿಜ್ಞಾನಿ ವಿದ್ವಾಂಸ ಡಾ. ಸಂಗಮೇಶ ಸವದತ್ತಿಮಠ ಅವರಿಗೆ 2025ನೆಯ ಸಾಲಿನ ವಿದ್ಯಾಶಂಕರ ಪ್ರಶಸ್ತಿ ಮತ್ತು ಕುಪ್ಪಂ ದ್ರಾವಿಡ ವಿ.ವಿ. ಪ್ರಾಧ್ಯಾಪಕಿ ಡಾ.ಜಯಲಲಿತ ಅವರಿಗೆ ವಿದ್ಯಾಶಂಕರ ಪುರಸ್ಕಾರವನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಪ್ರದಾನ ಮಾಡಲಾಯಿತು. ಶ್ರೀವೀರಭದ್ರ ಚನ್ನಮಲ್ಲ ಶಿವಾಚರ್ಯ ಸ್ವಾಮೀಜಿ, ಹಂಪಿ ಕನ್ನಡ ವಿ.ವಿ. ಕುಲಪತಿ ಡಾ.ಡಿ.ವ್ಹಿ.ಪರಮಶಿವಮರ್ತಿ,ಕ.ಸಾ.ಪ. ಮಾಜಿ ಅಧ್ಯಕ್ಷ ಡಾ. ನಲ್ಲೂರುಪ್ರಸಾದ ಸೇರಿ ಇತರರು ಇದ್ದರು.

ಕಿಶೋರ ಕಾರ್ಮಿಕರನ್ನು ಮುಖ್ಯ ವಾಹಿನಿಗೆ ತನ್ನಿ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಅವರು ಕೂಲಿಗಲ್ಲ ಶಾಲೆಗೆ ಅಭಿಯಾನದ ಕುರಿತು ವಿವಿಧ ಭಾಗೀದಾರರ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ಕಾರ್ಮಿಕ ಇಲಾಖೆಯ ಸಭಾಂಗಣದಲ್ಲಿ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಭಾರತ ಸಂವಿಧಾನದ ಪರಿಚ್ಛೇದ 21(ಎ) ರನ್ವಯ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ತಿಳಿಸಿದೆ. ಪರಿಚ್ಛೇಧ 24 ರನ್ವಯ 14 ವರ್ಷದೊಳಗಿನ ಮಕ್ಕಳು ಅಪಾಯಕಾರಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವುದನ್ನು ಕಡ್ಡಾಯವಾಗಿ ನಿಷೇಧಿಸುತ್ತದೆ. ಕಿಶೋರ ಕಾರ್ಮಿಕರಾಗಿ ಗುರುತಿಸಿದ ಮಕ್ಕಳಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ನೀಡಿ ಸಮಾಜದ ಮುಖ್ಯ ವಾಹಿನಿಗೆ ತರಬೇಕು ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು. ಸಂವಿಧಾನವು ನೀಡಿರುವ ಹಕ್ಕುಗಳಿಂದ ಜಿಲ್ಲೆಯ ಮಕ್ಕಳು ವಂಚಿತರಾಗುತ್ತಿದ್ದಾರೆ. ಶಿಕ್ಷಣ ಹಕ್ಕನ್ನು ಪ್ರತಿ ಮಗುವಿಗೂ ಖಾತ್ರಿಪಡಿಸುವುದಕ್ಕಾಗಿ ಆಯೋಗವು ಜಿಲ್ಲಾಡಳಿತೊಂದಿಗೆ ವಿನೂತನವಾಗಿ ಕೂಲಿಗಲ್ಲ ಶಾಲೆಗೆ ಅಭಿಯಾನ ಎಂದು ಶಿರ್ಷಿಕೆಯಡಿ ಕಾರ್ಯಕ್ರಮವನ್ನು ಆರಂಭಿಸುತ್ತಿದೆ ಎಂದರು.

2025-26 ನೇ ಸಾಲಿನಲ್ಲಿ 358 ತಪಾಸಣೆಗಳನ್ನು ಕೈಗೊಳ್ಳಲಾಗಿದ್ದು, 19 ಮಕ್ಕಳನ್ನು ಗುರುತಿಸಲಾಗಿರುತ್ತದೆ. ಅದರಲ್ಲಿ 03 ಮಕ್ಕಳು ಬಾಲ ಕಾರ್ಮಿಕರಾಗಿದ್ದು, 16 ಮಕ್ಕಳು ಕಿಶೋರ ಕಾರ್ಮಿಕರಾಗಿರುತ್ತಾರೆ. 02 ಪ್ರಕರಣಗಳು ಇತ್ಯರ್ಥಗೊಂಡಿದ್ದು, 17 ಪ್ರಕರಣಗಳು ಚಾಲ್ತಿಯಲ್ಲಿವೆ ಮತ್ತು ತಪಾಸಣೆಯಲ್ಲಿ ಕಂಡು ಬಂದಂತಹ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಲಾಗುತ್ತಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಸಭೆಗೆ ತಿಳಿಸಿದರು.

ಸಚಿನ್ ಹಳೆಮನಿ, ದೀಪಾ ಜಾವೂರ, ಅಕ್ಬರ್‌ಮುಲ್ಲಾ, ಮಾರಿಕಾಂಭ ಹುಲಕೋಟಿ, ಬಸವರಾಜ ಹಿರೇಮಠ, ವಿವಿಧ ವಲಯಗಳ ಕಾರ್ಮಿಕ ನಿರೀಕ್ಷಕರು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಶೇಖರಗೌಡ ರಾಮತ್ನಾಳ ಅವರು ಪೂರ್ವಭಾವಿ ಸಭೆ ಕಾರ್ಮಿಕ ಇಲಾಖೆಯ ಸಭಾಂಗಣದಲ್ಲಿ ನಡೆಸಿದರು.

ಚುಟುಕು ಸಾಹಿತ್ಯಕ್ಕೆ ಪತ್ರಿಕೆಗಳ ಕೊಡುಗೆ ಅಪಾರ

ಕುಂದಗೋಳ: ಚುಟುಕು ಸಾಹಿತ್ಯವು ಇಂದಿನ ವರ್ತಮಾನ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಮುದ್ರಣ ಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಸಮ್ಮೇಳನದ ಸರ್ವಾಧ್ಯಕ್ಷ ಎಫ್.ಕೆ. ಬಾಳಿಹಳ್ಳಿಮಠ ಹೇಳಿದರು.

ಪಟ್ಟಣದ ಕಲ್ಯಾಣಪೂರ ಬಸವಣ್ಣಜ್ಜನವರ ಸಭಾಭವನದಲ್ಲಿ 6ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿ, ಚುಟುಕು ಸಾಹಿತ್ಯ ರಚನೆ ಮಾಡುವುದು ಅಷ್ಟು ಸುಲಭವಲ್ಲ. ಇಂದಿನ ಯುವಕರು ಓದುವ ಹವ್ಯಾಸ ಹೆಚ್ಚು ರೂಡಿಸಿಕೊಂಡಾಗ ಮಾತ್ರ ಚುಟುಕು ಸಾಹಿತ್ಯ ಬರೆಯಲು ಸಾಧ್ಯವಾಗುತ್ತದೆ ಎಂದರು.

ಮೆರವಣಿಗೆ ಚಾಲನೆ ನೀಡಿದ ಮಾಜಿ ಶಾಸಕ, ರಾಜ್ಯ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂಎಸ್ ಅಕ್ಕಿ ಮಾತನಾಡಿ ಚುಟುಕು ಸಾಹಿತ್ಯಕ್ಕೆ ಶ್ರೀ ಮಠಗಳು ಆಶ್ರಯ ನೀಡುತ್ತಾ ಬಂದಿದ್ದು, ಮೂರ್ನಾಲ್ಕು ಸಾಲುಗಳಲ್ಲಿ ಸಾಹಿತ್ಯದ ಅರ್ಥಗರ್ಭಿತವಾದ ಸಮಾಜಕ್ಕೆ ಸಂದೇಶ ನೀಡುತ್ತಾ ಬಂದಿದ್ದು, ಇಂದಿನ ಯುವಕರಲ್ಲಿ ಓದುವ ಹವ್ಯಾಸ ಕ್ಷೀಣಿಸುತ್ತಿದ್ದು ಯುವಕರಲ್ಲಿ ಓದುವ ಹಾಗೂ ಚುಟುಕು ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕೆಂದು ಹೇಳಿದರು.

ಹಿರಿಯ ಪತ್ರಕರ್ತ ಬಂಡು ಕುಲಕರ್ಣಿ ಮಾತನಾಡಿ, ಶತಮಾನಗಳಿಂದ ಚುಟುಕು ಸಾಹಿತ್ಯಕ್ಕೆ ಪತ್ರಿಕೆಗಳ ಕೊಡಿಗೆ ಅಪಾರವಾಗಿದೆ. ಚುಟುಕು ಸಾಹಿತ್ಯಕ್ಕೆ ಹಿರಿಯ ಸಾಹಿತಿಗಳ ಕೊಡುಗೆ ಅಪಾರವಾಗಿದ್ದು. ಯುವ ಸಾಹಿತಿಗಳಿಗಳು ಹಿರಿಯರ ಮಾರ್ಗದರ್ಶನ ಸಾಗಬೇಕೆಂದು ಹೇಳಿದರು.

6ನೇ ಚುಟುಕು ಸಾಹಿತ್ಯ ಸಮ್ಮೇಳನವನ್ನು ಸಮ್ಮೇಳನದ ಸರ್ವಾಧ್ಯಕ್ಷ ಎಫ್.ಕೆ. ಬಾಳಿಹಳ್ಳಿಮಠ ಅವರು ಉದ್ಘಾಟಿಸಿದರು.

ಸಮಾಚಾರ ಸಣ್ಣದಲ್ಲ

ಕುಮಟಾ: ವಿದ್ಯುತ್ ವ್ಯತ್ಯಯ ನಾಳೆ

ಕಾರವಾರ: ಹೆಸ್ಕಾಂ, ಕುಮಟಾ ಉಪವಿಭಾಗದ ಗ್ರಾಮೀಣ ಶಾಖೆಯ ವ್ಯಾಪ್ತಿಯ 11ಕೆ.ವಿ ಮಿರ್ಜಾನ್ ಫೀಡರಿನ ಮಾರ್ಗದಲ್ಲಿ ಹೊಸ 11ಕೆ.ವಿ ಮಾರ್ಗವನ್ನು ನಿರ್ಮಿಸುವ ಕಾರ್ಯ ವಿರುವುದರಿಂದ ಮಿರ್ಜಾನ್, ದುಂಡಕುಳಿ, ಯಲವಳ್ಳಿ, ಕೋಡ್ಕಣಿ, ಖಂಡಗಾರ, ಬರಗದ್ದೆ, ನಾಗೂರ ದುಂಡಕುಳಿ ಭಾಗಗಳಲ್ಲಿ ನ.22 ರಂದು ಬೆಳಗ್ಗ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ಚಿಕ್ಕು ತಿಮ್ಮ ಕೊಠಾರಿ

ಶಿರಸಿ: ತಾಲೂಕಿನ ಜಡ್ಡಿಗದ್ದೆ ಗ್ರಾಮದ ಹೊನ್ನೇಹಕ್ಕಲಿನ ನಿವಾಸಿಯಾಗಿದ್ದ ಚಿಕ್ಕು ತಿಮ್ಮ ಕೊಠಾರಿ ಇತ್ತೀಚೆಗೆ ವಯೋಸಹಜ ಖಾಯಿಲೆಯಿಂದಾಗಿ ದೈವಾಧೀನರಾದರು. ಶತಾಯುಷಿಯಾಗಿದ್ದ ಅವರು 5 ಜನ ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನ ಆಗಲಿದ್ದಾರೆ. ಅವರಿಗೆ ಚಿರಶಾಂತಿ ದೊರೆಯಲಿ ಎಂದು ಕುಟುಂಬದವರು ಪ್ರಾರ್ಥಿಸಿದ್ದಾರೆ.

ಅತಿ ದೊಡ್ಡ ಮೀನು ಉತ್ಪಾದಕ ರಾಷ್ಟ್ರ ಭಾರತ

ಇಂದು ವಿಶ್ವ ಮೀನುಗಾರಿಕೆ ದಿನಾಚರಣೆ | ಸಮುದ್ರ ಸಂಪತ್ತಿನ ಸಂರಕ್ಷಣೆ | ಲಕ್ಷಾಂತರ ಜನರ ಜೀವನೋಪಾಯದ ಕಸಬು

ವಿನುತಾ ಹೆಗಡೆ, ಶಿರಸಿ

ಪ್ರತಿ ವರ್ಷ ನ.21 ರಂದು ಪ್ರಪಂಚದಾದ್ಯಂತ ವಿಶ್ವ ಮೀನುಗಾರಿಕೆ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಕೇವಲ ಮೀನುಗಾರರನ್ನು ಗೌರವಿಸುವುದಕ್ಕಷ್ಟೇ ಸೀಮಿತವಾಗಿಲ್ಲ; ಬದಲಾಗಿ, ಸಮುದ್ರ ಮತ್ತು ಸಿಹಿನೀರಿನ ಸಂಪತ್ತಿನ ಸುಸ್ಥಿರತೆ, ಪರಿಸರ ವ್ಯವಸ್ಥೆಯ ಆರೋಗ್ಯ ಮತ್ತು ಜಾಗತಿಕ ಆಹಾರ ಭದ್ರತೆಯಲ್ಲಿ ಮೀನುಗಾರಿಕಾ ಕ್ಷೇತ್ರದ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ಕ್ಷೇತ್ರದ ಮಹತ್ವ ಮತ್ತು ಸವಾಲುಗಳು: ಜಗತ್ತಿನಾದ್ಯಂತ ಕೋಟ್ಯಂತರ ಜನರ ಜೀವನೋಪಾಯಕ್ಕೆ ಮೀನುಗಾರಿಕೆ ಮೂಲಾಧಾರವಾಗಿದೆ. ಕರಾವಳಿ ಪ್ರದೇಶಗಳ ಜನರ ಸಾಂಸ್ಕೃತಿಕ ಪರಂಪರೆಯೊಂದಿಗೆ ಹಾಸುಹೊಕ್ಕಾಗಿರುವ ಈ ವೃತ್ತಿಯು, ಪ್ರೋಟೀನ್ ಮತ್ತು ಪೌಷ್ಟಿಕಾಂಶಗಳ ಪ್ರಮುಖ ಮೂಲವಾಗಿ ಜಾಗತಿಕ ಆಹಾರ ಪೂರೈಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಆದರೆ, ಇಂದು ಮೀನುಗಾರಿಕೆ ಕ್ಷೇತ್ರವು ಅನೇಕ ದೊಡ್ಡ ಸವಾಲುಗಳನ್ನು ಎದುರಿಸುತ್ತಿದೆ:

ಅತಿಯಾದ ಮೀನುಗಾರಿಕೆ: ತಾಂತ್ರಿಕ ಪ್ರಗತಿಯಿಂದಾಗಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮೀನುಗಳನ್ನು ಹಿಡಿಯುತ್ತಿರುವುದು, ಮೀನಿನ ಸಂತತಿ ಗಳನ್ನು ಕ್ಷೀಣಿಸುತ್ತಿದೆ.

ಹವಾಮಾನ ಬದಲಾವಣೆ: ಸಮುದ್ರದ ತಾಪಮಾನ ಹೆಚ್ಚಳ ಮತ್ತು ಆಮ್ಲೀಯತೆಯ ಏರಿಕೆಯಿಂದಾಗಿ ಕಡಲ ಜೀವಿಗಳ ಆವಾಸಸ್ಥಾನಗಳು ಮತ್ತು ಸಂತಾನೋತ್ಪತ್ತಿಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ.

ಕಡಲ ಮಾಲಿನ್ಯ : ಪ್ಲಾಸ್ಟಿಕ್ ತ್ಯಾಜ್ಯ ಮತ್ತು ರಾಸಾಯನಿಕ ಮಾಲಿನ್ಯವು ಮೀನುಗಳು ಮತ್ತು ಮಾನವನ ಆರೋಗ್ಯಕ್ಕೆ ಅಪಾಯವನ್ನು ತಂದೊಡ್ಡಿದೆ.

ಸುಸ್ಥಿರ ಮೀನುಗಾರಿಕೆಯ ಅಗತ್ಯ: ಈ ಸವಾಲುಗಳ ಹಿನ್ನೆಲೆಯಲ್ಲಿ, ವಿಶ್ವ ಮೀನುಗಾರಿಕೆ ದಿನವು ಸುಸ್ಥಿರ ಮೀನುಗಾರಿಕೆಯ ಮಹತ್ವವನ್ನು ಸಾರುತ್ತದೆ.

ಇದರರ್ಥ,ನಾವು ಇಂದಿನ ಅಗತ್ಯಗಳನ್ನು ಪೂರೈಸುವಾಗ, ಭವಿಷ್ಯದ ಪೀಳಿಗೆಗೆ ಮೀನಿನ ಸಂಪತ್ತು ಉಳಿಯುವಂತೆ ನೋಡಿಕೊಳ್ಳುವುದು.

ನಿಯಮಗಳ ಕಟ್ಟುನಿಟ್ಟಿನ ಪಾಲನೆ: ಸರಕಾರಗಳು ಮೀನುಗಾರಿಕೆ ನಿಯಮಗಳು, ನಿರ್ದಿಷ್ಟ ಜಾತಿಗಳ ಮೀನು ಹಿಡಿಯುವ ನಿರ್ಬಂಧಿತ ಅವಧಿಗಳು ಮತ್ತು ಮೀನುಗಾರಿಕೆ ವಲಯಗಳ ಕಟ್ಟುನಿಟ್ಟಾದ ಅನುಷ್ಠಾನ ಮಾಡಬೇಕು.

ಪರಿಸರ ಸ್ನೇಹಿ ತಂತ್ರಜ್ಞಾನ: ಹಾನಿಕಾರಕವಲ್ಲದ ಬಲೆಗಳ ಬಳಕೆ, ಮರಿ ಮೀನುಗಳನ್ನು ಸಂರಕ್ಷಿಸುವುದು ಮತ್ತು ಕಡಲ ಸಂರಕ್ಷಿತ ಪ್ರದೇಶಗಳನ್ನು (ಸ್ಥಾಪಿಸುವುದು ಅಗತ್ಯ.

ಮೀನುಗಾರರ ಸಹಭಾಗಿತ್ವ: ಸಮುದಾಯ ಮಟ್ಟದಲ್ಲಿ ಮೀನುಗಾರರಿಗೆ ಶಿಕ್ಷಣ ನೀಡುವುದು ಮತ್ತು ಅವರನ್ನು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಸುಸ್ಥಿರತೆಗೆ ನಿರ್ಣಾಯಕವಾಗಿದೆ.

ಕಡಲ ಸಂಪತ್ತು ರಾಷ್ಟ್ರೀಯ ಸಂಪತ್ತು. ಈ ಸಂಪತ್ತನ್ನು ರಕ್ಷಿಸುವುದು ಮತ್ತು ಮೀನುಗಾರರ ಜೀವನವನ್ನು ಸುಧಾರಿಸುವುದು ನಮ್ಮೆಲ್ಲರ ಕರ್ತವ್ಯ. ವಿಶ್ವ ಮೀನುಗಾರಿಕೆ ದಿನದಂದು, ನಾವು ಸಮುದ್ರಕ್ಕೆ ಧನ್ಯವಾದ ಹೇಳೋಣ ಮತ್ತು ನಮ್ಮ ಮುಂದಿನ ಪೀಳಿಗೆಗಾಗಿ ಸುಸ್ಥಿರ ಸಮುದ್ರ ಪರಿಸರವನ್ನು ಉಳಿಸಲು ಪ್ರತಿಜ್ಞೆ ಮಾಡೋಣ.

ಸಮುದ್ರ ಮೀನುಗಾರಿಕೆ: ಪ್ರಮುಖ ಬಂದರುಗಳು: ಕಾರವಾರದ ಬೈತ್ಕೋಲ್ ಬಂದರು, ಮಾಜಾಳಿ, ಅಂಕೋಲಾ, ಹೊನ್ನಾವರ, ಭಟ್ಕಳ ಮುಂತಾದ ಕರಾವಳಿ ಪ್ರದೇಶಗಳು ಮೀನುಗಾರಿಕೆ ಚಟುವಟಿಕೆಗಳ ಮುಖ್ಯ ಕೇಂದ್ರಗಳಾಗಿವೆ.

ಮೀನುಗಾರಿಕೆ ವಿಧ: ಯಾಂತ್ರಿಕೃತ ದೋಣಿಗಳು ಮತ್ತು ಸಾಂಪ್ರದಾಯಿಕ ದೋಣಿಗಳ ಮೂಲಕ ಆಳ ಸಮುದ್ರ ಮತ್ತು ಕರಾವಳಿ ಮೀನುಗಾರಿಕೆಯನ್ನು ನಡೆಸಲಾಗುತ್ತದೆ.

ಪ್ರಮುಖ ಮೀನುಗಳು: ಬಂಗಡೆ, ಅಂಜಲ್ , ಬೂತಾಯಿ, ಪಾಮ್ಫ್ರೆಟ್, ಸಿಗಡಿ, ಇತ್ಯಾದಿ ಮೀನುಗಳು ವಾಣಿಜ್ಯವಾಗಿ ಹೆಚ್ಚು ಮಹತ್ವ ಪಡೆದಿವೆ.

ಉಪ್ಪಿನಕಾಯಿ ಮತ್ತು ಒಣ ಮೀನು: ಕಡಲ ತೀರಗಳಲ್ಲಿ ಒಣ ಮೀನು ತಯಾರಿಕೆಯು ಒಂದು ಪ್ರಮುಖ ಉಪೋತ್ಪನ್ನ ಚಟುವಟಿಕೆಯಾಗಿದೆ.

ಒಳನಾಡು ಮೀನುಗಾರಿಕೆ: ಕಾಳಿ, ಶರಾವತಿ, ಗಂಗಾವಳಿ ಮುಂತಾದ ನದಿಗಳು ಮತ್ತು ಜಿಲ್ಲೆಯಲ್ಲಿರುವ ಕೆರೆಗಳು ಹಾಗೂ ಜಲಾಶಯಗಳಲ್ಲಿ ಸಿಹಿನೀರಿನ ಮೀನುಗಾರಿಕೆ ಮತ್ತು ಮೀನು ಕೃಷಿಯನ್ನು ನಡೆಸಲಾಗುತ್ತದೆ.

ಮೀನು ಕೃಷಿ: ಜಲಾಶಯಗಳಲ್ಲಿ ಪಂಜರ ಮೀನು ಕೃಷಿ (Cage Culture) ಸಹ ಅಭಿವೃದ್ಧಿಗೊಳ್ಳುತ್ತಿದೆ.

ಸರಕಾರದ ಯೋಜನೆಗಳು ಮತ್ತು ಪ್ರಯತ್ನಗಳು: ಕೇಂದ್ರ ಮತ್ತು ರಾಜ್ಯ ಸರಕಾರಗಳು ಮೀನುಗಾರರನ್ನು ಬೆಂಬಲಿಸಲು ಮತ್ತು ಸುಸ್ಥಿರ ಮೀನುಗಾರಿಕೆಯನ್ನು ಉತ್ತೇಜಿಸಲು ಯೋಜನೆಗಳನ್ನು ಜಾರಿಗೊಳಿಸಿವೆ.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ: ಮೀನುಗಾರರಿಗೆ ಆರ್ಥಿಕ ನೆರವು, ಕೃಷಿ ಮತ್ತು ಅಭಿವೃದ್ಧಿಗೆ ಸಹಾಯ.

ಕರಾವಳಿ ಸ್ಥಿತಿಸ್ಥಾಪಕ ಗ್ರಾಮ ಯೋಜನೆ: ಹವಾಮಾನ ಬದಲಾವಣೆಯ ಪರಿಣಾಮಗಳಿಂದ ಮೀನುಗಾರರನ್ನು ರಕ್ಷಿಸಲು ಮತ್ತು ಅವರ ಆರ್ಥಿಕತೆಯನ್ನು ಸುಧಾರಿಸಲು ಕೆಲವು ಗ್ರಾಮಗಳನ್ನು ಆಯ್ಕೆ ಮಾಡಿ (ಉದಾ: ಭಟ್ಕಳದ ಬೈಲೂರು ಮತ್ತು ಮಠದಹಿತ್ಲು) ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಉತ್ತರ ಕನ್ನಡದ ಮೀನುಗಾರಿಕೆ ಜಿಲ್ಲೆಯ ಕಡಲ ಸಂಸ್ಕೃತಿ ಮತ್ತು ಆರ್ಥಿಕತೆಗೆ ಬೆನ್ನೆಲುಬಾಗಿದೆ. ಈ ಸಂಪನ್ಮೂಲವನ್ನು ರಕ್ಷಿಸಲು ಸುಸ್ಥಿರ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಸಮಸ್ಯೆಗಳಿಗೆ ಪರಿಹಾರ: ಮೀನುಗಾರಿಕಾ ಸಮುದಾಯದ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಆಲಿಸಿ, ಅವುಗಳಿಗೆ ವಿಧಾನಸಭೆ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಧ್ವನಿ ಯಾಗಿ ಪರಿಹಾರಗಳನ್ನು ಕಂಡುಕೊಳ್ಳುವುದು.ಒಟ್ಟಾರೆಯಾಗಿ, ಮಂಕಾಳ ವೈದ್ಯರವರ ಪಾತ್ರವು ಮೀನುಗಾರಿಕೆಯನ್ನು ಪರಿಸರ ಸ್ನೇಹಿಯಾಗಿ, ಆರ್ಥಿಕ ವಾಗಿ ಲಾಭದಾಯಕವಾಗಿ ಮತ್ತು ಸಾಮಾಜಿಕವಾಗಿ ನ್ಯಾಯಯುತವಾಗಿ ಮುನ್ನಡೆಸಿ ಕೊಂಡು ಹೋಗುವಲ್ಲಿ ಕೇಂದ್ರೀ ಕೃತವಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ

ಉತ್ತರ ಕನ್ನಡ ಜಿಲ್ಲೆಯು ಕರ್ನಾಟಕದ ಅತ್ಯಂತ ದೊಡ್ಡ ಜಿಲ್ಲೆಗಳಲ್ಲಿ ಒಂದಾಗಿದ್ದು, ದೀರ್ಘವಾದ ಕರಾವಳಿ ತೀರವನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಮೀನುಗಾರಿಕೆಯು ಲಕ್ಷಾಂತರ ಜನರ ಜೀವನೋಪಾಯದ ಪ್ರಮುಖ ಮೂಲವಾಗಿದೆ ಮತ್ತು ಸ್ಥಳೀಯ ಆರ್ಥಿಕತೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಪ್ರಮುಖ ಕೇಂದ್ರಗಳು ಮತ್ತು ಚಟುವಟಿಕೆಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಯು ಸಮುದ್ರ ಮತ್ತು ಒಳನಾಡು ಸಂಪನ್ಮೂಲಗಳೆರಡನ್ನೂ ಅವಲಂಬಿಸಿದೆ.

ಮಂಕಾಳ ವೈದ್ಯರ ಪಾತ್ರ ಮತ್ತು ಜವಾಬ್ದಾರಿಗಳು

ಮಂಕಾಳ ವೈದ್ಯರವರು ಪ್ರಸ್ತುತ ಕರ್ನಾಟಕ ಸರ್ಕಾರದ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸ್ಥಾನದಲ್ಲಿ ಅವರ ಪಾತ್ರವು ಕೇವಲ ಮೀನುಗಾರಿಕೆ ಕ್ಷೇತ್ರಕ್ಕೆ ಸೀಮಿತವಾಗಿಲ್ಲ, ಆದರೆ ರಾಜ್ಯದ ಕರಾವಳಿ ಅಭಿವೃದ್ಧಿ ಮತ್ತು ಜಲಸಾರಿಗೆಯ ಮೇಲ್ವಿಚಾರಣೆಯನ್ನೂ ಒಳಗೊಂಡಿದೆ.

ಭಾರತದಲ್ಲಿ ಮೀನುಗಾರಿಕೆ

ಭಾರತವು ವಿಶ್ವದ ಅತಿದೊಡ್ಡ ಮೀನು ಉತ್ಪಾದಕ ರಾಷ್ಟ್ರಗಳಲ್ಲಿ ಒಂದಾಗಿದೆ ಮತ್ತು ಕರಾವಳಿ ರಾಜ್ಯಗಳಲ್ಲಿ ಲಕ್ಷಾಂತರ ಕುಟುಂಬಗಳಿಗೆ ಇದು ಜೀವಾಧಾರವಾಗಿದೆ. ಭಾರತ ಸರಕಾರವು ಈ ಕ್ಷೇತ್ರವನ್ನು ಬಲಪಡಿಸಲು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಯಂತಹ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳು ಉತ್ಪಾದನೆಯ ಹೆಚ್ಚಳದ ಜತೆಗೆ ಮೀನುಗಾರರ ಆದಾಯವನ್ನು ಹೆಚ್ಚಿಸಲು ಮತ್ತು ನೀಲಿ ಕ್ರಾಂತಿಯನ್ನು ಸಾಧಿಸಲು ಒತ್ತು ನೀಡಿವೆ.

ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ ಯಶಸ್ವಿ

ಕಾರವಾರ: ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರಕಾರ ಇವರ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮ ಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ, ಜಿಲ್ಲಾ ಕೈಗಾರಿಕಾ ಕೇಂದ್ರ, ಸಿಡಾಕ್, ಕಾರವಾರ, ಲೊಯೋನಿ ವಿಕಾಸ ಕೇಂದ್ರ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಹಾಗೂ ಸಿಸಿಎಫ್ ಲೊಯೋಲ ಜನಸ್ಫೂರ್ತಿ ಸ್ವ- ಸಹಾಯ ಸಂಘಗಳ ಟ್ರಸ್ಟ್, ಮುಂಡಗೋಡ ಇವರ ಸಂಯುಕ್ತ ಆಶ್ರಯದಲ್ಲಿ ನ.10 ರಿಂದ 10 ದಿನಗಳ ಕಾಲ ಬುಡಕಟ್ಟು ಉಪ ಯೋಜನೆಯಡಿ ಪರಿಶಿಷ್ಟ ಪಂಗಡದ ಪುರುಷರು /ಮಹಿಳೆಯರಿಗಾಗಿ ನಡೆದ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ಮುಂಡಗೋಡ ಲೊಯೋಲಾ ವಿಕಾಸ ಕೇಂದ್ರದಲ್ಲಿ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿಡಾಕ್ ಉಪ ನಿರ್ದೇಶಕ ಶಿವಾನಂದ ಎಲಿಗಾರ ಮಾತನಾಡಿ, 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮದ ವರದಿಯನ್ನು ನೀಡುವುದರ ಜತೆಗೆ ಮುಂದಿನ ದಿನಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಅನುಸರಣಾ ಸಭೆಯನ್ನು ಏರ್ಪಡಿಸುವುದಾಗಿ ತಿಳಿಸಿದರು.

ಲೊಯೋಲಾ ವಿಕಾಸ ಕೇಂದ್ರದ ನಿರ್ದೇಶಕ ಫಾದರ್ಅನಿಲ್ ಡಿಸೋಜ ಶಿಬಿರಾರ್ಥಿಗಳು ಈ 10 ದಿನಗಳ ಕಾಲ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ, ಈ ತರಬೇತಿಯನ್ನು ಪಡೆದ ಪ್ರತಿಯೊಬ್ಬರು ಸ್ವಂತ ಉದ್ಯಮವನ್ನು ಪ್ರಾರಂಭಿಸಿ ಎಂದು ಹಾರೈಸಿದರು.

ಕಾರ್ಯಕ್ರಮದ ಕುರಿತು ನಿಂಗಪ್ಪ ಮೇದಾರ, ಕವಿತಾ ವಡಗೇರಿ ಮತ್ತು ಪ್ರಿಯಾ ಅಣ್ಣಿಗೇರಿ ಇವರು ಅನಿಸಿಕೆಯನ್ನುವ್ಯಕ್ತ ಪಡಿಸಿದರು. ಕಾರ್ಯಕ್ರಮದಲ್ಲಿ ವಿನಾಯಕ ಸುಣಗಾರ, ಎನ್.ಆರ್.ಎಲ್.ಎಮ್ ಸಿಬ್ಬಂದಿ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಮಲ್ಲಮ್ಮ ನೀರಲಗಿ ನಿರೂಪಿಸಿದರು. ಕವಿತಾ ವಡಗೇರಿ ಸ್ವಾಗತಿಸಿದರು ಸಿಡಾಕ್ ತರಬೇತುದಾರ ಶಿವರಾಜಕುಮಾರ ಹೆಳವಿ ವಂದಿಸಿದರು.

ವೈಜ್ಞಾನಿಕ ಅರಿವು ಮೂಡಿಸಲು ಸ್ಪರ್ಧಾತ್ಮಕ ಚಟುವಟಿಕೆ ಅವಶ್ಯ

ಬನವಾಸಿ: ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು, ವೈಜ್ಞಾನಿಕ ಅರಿವು ಮೂಡಿಸಲು ಮತ್ತು ಸ್ಪರ್ಧಾ ಮನೋಭಾವ ಬೆಳೆಸಲು ಇಂತಹ ಸ್ಪರ್ಧಾತ್ಮಕ ಚಟುವಟಿಕೆಗಳು ಅತ್ಯವಶ್ಯಕ ಎಂದು ಬನವಾಸಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಗೌಡ ಹೇಳಿದರು.

ಇಲ್ಲಿಯ ಜಯಂತಿ ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಯೋಜಿಸಿದ್ದ ವಿಜ್ಞಾನ, ಸಮಾಜ ಮತ್ತು ಭಾಷಾ ವಿಷಯಗಳ ವಸ್ತು ಪ್ರದರ್ಶನವನ್ನು ವೀಕ್ಷಣೆಯ ಬಳಿಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿದ್ಯಾರ್ಥಿಗಳು ವೈಜ್ಞಾನಿಕ ಚಿಂತನೆ ಮೈಗೂಡಿಸಿಕೊಂಡು ಹೊಸದನ್ನು ಹುಡುಕಲು ಪ್ರಯತ್ನಿಸಬೇಕು. ಸೃಜನಶೀಲತೆಯ ಜತೆಯಲ್ಲಿ ವೈಜ್ಞಾನಿಕ ಚಿಂತನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಗಣೇಶ ಸಣ್ಣಲಿಂಗಣ್ಣನವರ, ಸದಸ್ಯೆ ಸೀಮಾವತಿ ಕೆರೊಡಿ, ಮುಖ್ಯೋಪಾಧ್ಯಾಯ ಪುಟ್ಟರಾಜು ಮಾಜಿ ಎಪಿಎಮ್ ಸಿ ಅಧ್ಯಕ್ಷ ಶಿವಕುಮಾರ ದೇಸಾಯಿ ಗೌಡ, ಪತ್ರಕರ್ತ ಸುಧೀರ ನಾಯರ್ ವಿದ್ಯಾರ್ಥಿಗಳ ವಸ್ತು ಪ್ರದರ್ಶನವನ್ನು ವೀಕ್ಷಿಸಿ ಪ್ರೋತ್ಸಾಹಿಸಿದರು.

ವಿಜ್ಞಾನ, ಸಮಾಜ ಮತ್ತು ಭಾಷಾ ವಿಷಯಗಳ ವಸ್ತು ಪ್ರದರ್ಶನವನ್ನು ಬನವಾಸಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಗಜಾನನ ಗೌಡ ವೀಕ್ಷಿಸಿದರು.

ಜೆಡಿಎಸ್‌ನಲ್ಲೇ ಇದ್ದಿದ್ದರೆ ಸಿಎಂ ಆಗ್ತಿರ್ಲಿಲ್ಲ: ಸಿದ್ದು

ಚಾ.ನಗರದಲ್ಲಿ ನಡೆದ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ ಹೇಳಿಕೆ

ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೊಸರು ಕಡೆಯುವ ಮೂಲಕ ವಿಶೇಷವಾಗಿ ಉದ್ಘಾಟಿಸಿದರು.

ಸಹಕಾರಿ ಚಳವಳಿಯಲ್ಲಿದ್ದ ಜಿ.ಟಿ. ದೇವೇಗೌಡರು ಈಗಲೂ ಜೆಡಿಎಸ್ ನಲ್ಲಿ ಇದ್ದಾರೆ. ಆದರೆ ನನ್ನ ಪರವಾಗಿಯೇ ಇದ್ದಾರೆ. ಜಿ.ಟಿ. ದೇವೇಗೌಡರು 2006ರವರೆಗೂ ನನ್ನ ಜತೆಗೇ ಇದ್ದರು. ಜೆಡಿಎಸ್‌ನಿಂದ ನನ್ನನ್ನು ಉಚ್ಚಾಟಿಸಿದ ಮೇಲೆ ಜಿ.ಟಿ.ದೇವೇಗೌಡರು ಅಲ್ಲೇ ಉಳಿದು ಬಿಟ್ಟರು. ಈಗ ಮತ್ತೆ ಒಂದು ರೀತಿಯಲ್ಲಿ ನಮ್ಮ ಜತೆಗೇ ಇದ್ದಾರೆ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಚಾಮರಾಜನಗರ: ನಾನು ಜೆಡಿಎಸ್‌ನಲ್ಲೇ ಇದ್ದಿದ್ದರೆ ಮುಖ್ಯಮಂತ್ರಿ ಆಗುತ್ತಿರಲಿಲ್ಲ. ದೇವೇಗೌಡರು ಮತ್ತು ಅವರ ಮಕ್ಕಳು ನನ್ನನ್ನು ಮುಖ್ಯಮಂತ್ರಿ ಮಾಡಲು ಬಿಡುತ್ತಿರಲಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಗ್ರಾಮೀಣ ಭಾರತದ ಆರ್ಥಿಕ ಅಭಿವೃದ್ಧಿಗೆ ಪ್ರತೀ ಗ್ರಾಮದಲ್ಲಿ ಒಂದು ಶಾಲೆ, ಒಂದು ಗ್ರಾಮ ಪಂಚಾಯ್ತಿ, ಒಂದು ಸಹಕಾರ ಸಂಘ ಅತ್ಯಗತ್ಯ ಎನ್ನುವುದು ನೆಹರೂ ಅವರ ದೃಷ್ಟಿಯಾಗಿತ್ತು. ಇವರ ಈ ದೂರದೃಷ್ಟಿಯ ಕಾರಣಕ್ಕೆ ದೇಶದಲ್ಲಿ ಸಹಕಾರ ಚಳವಳಿ ಗಟ್ಟಿಯಾಯಿತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಚಾಮರಾಜನಗರದಲ್ಲಿ ಆಯೋಜಿಸಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೆಹರೂ ಅವರ ಈ ದೂರದೃಷ್ಟಿ ಕಾರಣಕ್ಕೆ ಅವರ ಜನ್ಮ ದಿನದಂದೇ ಪ್ರತೀ ವರ್ಷ ಸಹಕಾರ ಸಪ್ತಾಹ ಉದ್ಘಾಟನೆಯಾಗುತ್ತದೆ ಎಂದರು. ಇಂದು ರಾಜ್ಯದಲ್ಲಿ ಕೃಷಿ, ಹೈನುಗಾರಿಕೆ, ಕೈಗಾರಿಕೆ, ಬ್ಯಾಂಕಿಂಗ್ ಸೇರಿ ಹಲವಾರು ಕ್ಷೇತ್ರಗಳಲ್ಲಿ ಸಹಕಾರಿ ಚಳವಳಿ, ಸಹಕಾರಿ ಸಂಘಗಳು ಬೆಳೆಯುತ್ತಲೇ ಇವೆ. ಇದು ಆರೋಗ್ಯಕಾರಿ ಬೆಳವಣಿಗೆ ಎಂದರು.

ನಾನು ಪಶು ಸಂಗೋಪನಾ ಸಚಿವನಾಗಿದ್ದಾಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು ಸ್ವಾವಲಂಬನೆಗೆ ಪೂರ್ಣ ಸಹಕಾರ ನೀಡಿದ್ದೆ. ಈಗ ಒಂದು ದಿನಕ್ಕೆ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ನಾನು ಹಾಲು ಉತ್ಪಾದಕರ ಅನುಕೂಲಕ್ಕಾಗಿ ಲೀಟರ್‌ಗೆ 5 ರು.ನಂತೆ ಒಂದು ದಿನಕ್ಕೆ 5 ಕೋಟಿ ರು. ಸಹಾಯಧನ ರೈತರಿಗೆ ನಮ್ಮ ಸರಕಾರದಿಂದ ನೀಡಲಾಗುತ್ತಿದೆ. ನಾವು ಎರಡು ಬಾರಿ ಹಾಲಿನ ದರವನ್ನು ಹೆಚ್ಚಿಸಿದರೂ ಆ ಹೆಚ್ಚುವರಿ ಹಣ ಹಾಲು ಉತ್ಪಾದಕರಿಗೇ ಹೋಗಬೇಕು ಎಂದು ಸ್ಪಷ್ಟ ಸೂಚನೆ ನೀಡಿದ್ದೇನೆ. ನಾನು ಮುಖ್ಯಮಂತ್ರಿ ಆದಾಗಿನಿಂದ ಎಲ್ಲಾ ಜಾತಿ, ಎಲ್ಲಾ ಧರ್ಮದ ಜನರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುತ್ತಿದ್ದೇವೆ. ಚಾಮರಾಜನಗರ ಜಿಲ್ಲೆಯ ಎಲ್ಲಾ ಜಾತಿಯ, ಎಲ್ಲಾ ಧರ್ಮದವರೂ ನನಗೆ ಸಹಕಾರ ಕೊಟ್ಟಿದ್ದಾರೆ. ಹೀಗಾಗಿ ಚಾಮರಾಜನಗರ ಜಿಲ್ಲೆಯನ್ನು ನಾನು ಯಾವತ್ತೂ ಮರೆಯುವುದಿಲ್ಲ ಎಂದರು.

ಅಧಿಕಾರ ಕಳೆದುಕೊಳ್ತಾರೆ ಎನ್ನುವುದು ಮೂಢನಂಬಿಕೆ: ಚಾಮರಾಜನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೂಢನಂಬಿಕೆ ಎಂದು ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಪುನರುಚ್ಚರಿಸಿದರು.

ಸಂಪುಟ ಪುನರ್ ರಚನೆ ಸುಳಿವಿತ್ತ ಸಿಎಂ

ಐದು ವರ್ಷವೂ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಕೆ ಬಗ್ಗೆ ಚರ್ಚೆ ನಡೆಯುತ್ತಿರುವ ಪ್ರಶ್ನೆಗೆ ಪತ್ರಕರ್ತರಿಗೆ ಉತ್ತರಿಸಿದ ಸಿದ್ದರಾಮಯ್ಯ ಅವರು, ಇದು ಅನಾವಶ್ಯಕ ಚರ್ಚೆ. ಎರಡೂವರೆ ವರ್ಷದ ನಂತರ ಸಂಪುಟ ಪುನರ್ ರಚನೆ ಮಾಡಬಹುದು ಎಂದು ತಿಳಿಸಿದ ನಂತರವಷ್ಟೇ, ಸಿಎಂ ಬದಲಾವಣೆಯ ವಿಷಯ ಮುನ್ನಲೆಗೆ ಬಂದಿರುವುದು. ಸಂಪುಟ ಪುನರ್ ರಚನೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ತೆಗೆದು ಕೊಳ್ಳಬೇಕಿದೆ. ಒಟ್ಟು 34 ಸಚಿವರ ಸ್ಥಾನವಿದ್ದು, ಅದರಲ್ಲಿ ಎರಡು ಸ್ಥಾನಗಳು ಖಾಲಿಯಿದೆ. ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ಈ ಖಾಲಿ ಸಚಿವ ಸ್ಥಾನಗಳನ್ನು ಭರ್ತಿ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿ ದರು. ಈ ಮೂಲಕ ಅವರು ಸಂಪುಟ ಪುನರ್ ರಚನೆಯ ಸುಳಿವು ನೀಡಿದರು.

ಚಾಮರಾಜನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ನಾನು ನಂಬುವುದಿಲ್ಲ. ಆದ್ದರಿಂದ ಚಾಮರಾಜನಗರಕ್ಕೆ ಭೇಟಿ ನೀಡುತ್ತಿರುತ್ತೇನೆ. ರಾಜ್ಯದ ಎಲ್ಲ ಜಿಲ್ಲೆ ಗಳನ್ನೂ ಸಮಾನವಾಗಿ ಕಂಡು, ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡುತ್ತೇನೆ. ಚಾಮರಾಜ ನಗರಕ್ಕೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೂಢನಂಬಿಕೆ. ಆ ಮೌಢ್ಯವನ್ನು ಹೋಗಲಾಡಿಸಲು ಇಲ್ಲಿಗೆ ಭೇಟಿ ನೀಡಿದ್ದು, ಅಧಿಕಾರ ಈಗಲೂ ಮತ್ತು ಭವಿಷ್ಯದಲ್ಲಿಯೂ ಭದ್ರವಾಗಿರುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಐದು ವರ್ಷ ಆಡಳಿತ ನಡೆದು ಜನಾದೇಶ ಇದೆ. ನಮ್ಮ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ ಭರವಸೆಯನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ನವೆಂಬರ್ ಕ್ರಾಂತಿ ಎಂಬ ವಿಷಯವನ್ನು ಮಾಧ್ಯಮದವರೇ ಸೃಷ್ಟಿಸಿದರು. ಜನರ ಆಸೆಯಂತೆ ಐದು ವರ್ಷ ಸರಕಾರ ನಡೆಸಿ ನಂತರವೂ ಪುನ: ಕಾಂಗ್ರೆಸ್ ಪಕ್ಷವೇ ಆಯ್ಕೆಯಾಗಿ ಬರಲಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಇಲ್ಲಾಂದ್ರೆ ಕಾಂಗ್ರೆಸ್ ಇಲ್ಲ: ರಾಜಣ್ಣ

ಚಾಮರಾಜನಗರ: ಸಿದ್ದರಾಮಯ್ಯ ಇಲ್ಲಾಂದ್ರೆ ಕಾಂಗ್ರೆಸ್ ಇಲ್ಲಾ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದರು. ಚಾಮರಾಜ ನಗರದಲ್ಲಿ ಮಾಧ್ಯಮದವ ರೊಂದಿಗೆ ಅವರು ಮಾತನಾಡಿ, ನೋ ದೇವೇಗೌಡ- ನೋ ಜೆಡಿಎಸ್, ನೋ ಯಡಿಯೂ ರಪ್ಪ- ನೋ ಬಿಜೆಪಿ ಅದೇ ರೀತಿ ನೋ ಸಿದ್ದರಾಮಯ್ಯ- ನೋ ಕಾಂಗ್ರೆಸ್, ಬಿಜೆಪಿಗೆ ಯಡಿಯೂರಪ್ಪ ಹೇಗೆ ಮುಖ್ಯವೋ, ದೇವೇಗೌಡ, ಮಕ್ಕಳು ಜೆಡಿಎಸ್ ಗೆ ಹೇಗೆ ಮುಖ್ಯವೋ ಅದೇ ರೀತಿ ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ ಎಂದರು. ನಮ್ಮಲ್ಲಿ ಸಿಎಂ ಕುರ್ಚಿ ಖಾಲಿಯಿಲ್ಲ. ಈ ವೇಳೆ ಬದಲಾವಣೆ ಮಾತು ಹೇಗೆ ಬರಲಿದೆ, ನನಗೆ ಮಂತ್ರಿ ಸ್ಥಾನ ಸಿಗುವುದಕ್ಕಿಂತ ಅಥವಾ ನಾನು ಮಂತ್ರಿಯಾಗುವುದಕ್ಕಿಂತ ಸಿದ್ದರಾಮಯ್ಯ ಸಿಎಂ ಆಗಿರುವುದು ನನಗೆ ಬಹಳ ಮುಖ್ಯ ಎಂದರು.

ಜಿಮ್ನಾಸ್ಟಿಕ್ ತರಬೇತುದಾರ ಅರುಣ್ ಪಾಟೀಲ್ ನಿಧನ

ಮೈಸೂರು: ವಯೋಸಹಜ ಅನಾರೋಗ್ಯದಿಂದ ಭಾರತೀಯ ಕ್ರೀಡಾ ಪ್ರಾಧಿಕಾರದ ಹಿರಿಯ ಜಿಮ್ನಾಸ್ಟಿಕ್ ಅರುಣ್ ಕುಮಾರ್ ಪಾಟೀಲ್ (70) ಅವರು ಗುರುವಾರ ಮೈಸೂರಿನಲ್ಲಿ ನಿಧನರಾದರು.

ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಬೆಳಗ್ಗೆ 9 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಪಾಟೀಲ್ ಅವರು ನಿವೃತ್ತಿ ನಂತರ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಜಿಮ್ನಾಸ್ಟಿಕ್ ಕ್ರೀಡಾ ತರಬೇತುದಾರಾಗಿ ಕಾರ್ಯ ನಿರ್ವಹಿಸಿದ್ದರು. ಕರ್ನಾಟಕದಲ್ಲಿ ಜಿಮ್ನಾಸ್ಟಿಕ್ ಕ್ರೀಡೆ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮ ಪಟ್ಟಿದ್ದಾರೆ.

ಪಿಎಸ್‌ಐ ಹಗರಣ: ಆರ್‌ಡಿ ಪಾಟೀಲಗೆ ಮೂರು ವಾರ ಜಾಮೀನು ಮಂಜೂರು

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್.ಡಿ.ಪಾಟೀಲಗೆ ಸುಪ್ರೀಂ ಕೋರ್ಟ್ ಮೂರು ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಮಗಳ ಮದುವೆ ಸಮಾರಂಭದ ಧಾರ್ಮಿಕ ವಿಧಿಗಳನ್ನು ಡಿ.4ರೊಳಗೆ ಪೂರೈಸಬೇಕಿದ್ದು, ಮಧ್ಯಂತರ ಜಾಮೀನು ಮಂಜೂರು ಮಾಡಬೇಕ ಎಂದು ಆರೋಪಿ ಆರ್.ಡಿ.ಪಾಟೀಲ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ವಿನೋದ ಚಂದ್ರನ ಅವರ ಏಕ ಸದಸ್ಯ ನ್ಯಾಯಪೀಠವು, ಪ್ರಕರಣದಲ್ಲಿ ಈಗಾಗಲೇ ದೋಷಾರೋಪಣೆ ಪಟ್ಟಿ ಸಲ್ಲಿಕೆಯಾಗಿದೆ. ಪ್ರಕರಣದಲ್ಲಿ ದೊಡ್ಡ ಸಂಖ್ಯೆಯಲ್ಲಿ ಸಾಕ್ಷಿದಾರರಿರುವ ಕಾರಣ ವಿಚಾರಣೆಗೆ ಇನ್ನಷ್ಟು ಕಾಲಾವಕಾಶ ಹಿಡಿಯುವ ಸಾಧ್ಯಗಳಿವೆ. ಹೀಗಾಗಿ ಅರ್ಜಿದಾರರಿಗೆ ಮೂರು ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಲು ಒಲವು ತೋರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಜಾಮೀನು ಅವಧಿ ಮುಗಿದ ಬೆನ್ನಲ್ಲೆ ಅರ್ಜಿದಾರರು ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದೂ ಸುಪ್ರೀಂಕೋರ್ಟ್ ಸ್ಪಷ್ಟವಾಗಿ ನಿರ್ದೇಶನ ನೀಡಿದೆ.

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff.ulb.hosakote@yahoo.com Website.www.hosakotecity.mrc.gov.in
ನಂ.ನಸಹೊ/ಆ..ಶಾ/ಸಿ.ಆರ್/ಟೆಂಡರ್/01/2025–26 ದಿನಾಂಕ: 20.11.2025

ಪ್ರಕಟಣೆ

ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿನ ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ. ಸಂಸ್ಥೆಗಳು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳ ಮುಖ್ಯಸ್ಥರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ರಿಟ್ ಅರ್ಜಿ ಸಂಖ್ಯೆ 5/2025 ರಲ್ಲಿ ನೀಡಿರುವ ನಿರ್ದೇಶನದಂತೆ ತಮ್ಮ ಸಂಸ್ಥೆಯ ಆವರಣದಲ್ಲಿ ಯಾವುದೇ ಬೀದಿ ನಾಯಿಗಳು ವಾಸವಿದ್ದಲ್ಲಿ ಅದನ್ನು ಪರಿಶೀಲಿಸಿ ಕೂಡಲೇ ಅದರ ಸಂಖ್ಯೆಯನ್ನು ಲೆಕ್ಕ ಮಾಡಿ ಪೌರಾಯುಕ್ತರಿಗೆ ತಿಳಿಸುವುದು. 1. ತಮ್ಮ ಸಂಸ್ಥೆಯ ಆವರಣದಲ್ಲಿ ಬೀದಿ ನಾಯಿಗಳ ಉಪಟಳ ತಡೆಯಲು ಹಾಗೂ ಅವುಗಳ ಪ್ರದೇಶ ನಿಯಂತ್ರಿಸಲು ಕ್ರಮ ವಹಿಸುವುದು. 2. ನಗರ ಸ್ಥಳೀಯ ಸಂಸ್ಥೆಯಿಂದ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಸಹಕರಿಸಲು ಹಾಗು ಅವುಗಳ ಪ್ರವೇಶ ನಿರ್ಬಂದಿಸುವದನ್ನು ಮೇಲ್ವಿಚಾರಣೆ ಮಾಡಲು ತಮ್ಮ ಸಂಸ್ಥೆ ವತಿಯಿಂದ ಒಬ್ಬ ಜವಾಬ್ದಾರಿಯುತ ನೌಕರರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡುವುದು. 3. ಮಾನ್ಯ ಸರ್ವೋಚ್ಚ ನ್ಯಾಲಯದ ನಿರ್ದೇಶನದಂತೆ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಪುನ: ನಾಯಿಗಳು ವಾಸ ಮಾಡಲು ಅವಕಾಶ ಕೊಟ್ಟಲ್ಲಿ ಅವನ್ನು ಸ್ಥಳಾಂತರಿಸುವ ವೆಚ್ಚವನ್ನು ತಮ್ಮ ಸಂಸ್ಥೆಯಿಂದ ವಸೂಲಿ ಮಾಡಲಾಗುವುದು. 4. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ತಮ್ಮ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಸಹಿ/–
ಪೌರಾಯುಕ್ತರು
ನಗರಸಭೆ, ಹೊಸಕೋಟೆ.
ವಾಸಾಸಂಇ/ವಾ.ಪ್ರ/3942/ಶಿರಡಿ ಸಾಯಿ/2025–26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಜಿಲ್ಲಾ ಪಂಚಾಯತಿ, ವಿಜಯಪುರ
ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಡಾ|| ಬಿ.ಆರ್.ಅಂಬೇಡ್ಕರ ಕ್ರೀಡಾಂಗಣ ವಿಜಯಪುರ–586101.
ದೂರವಾಣಿ/ಫ್ಯಾಕ್ಸ್ ಸಂ:08352–251085
ಸಂಖ್ಯೆ:ಸನಿವಿ/ಯುಸೇಕ್ರೀಇ/ಕ್ರೀ.ಮೆ/2025–26 ದಿನಾಂಕ:18.11.2025

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಜನವರಿ 2026 ರಿಂದ ಡಿಸೆಂಬರ್ 2026 ರವರೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಊಟೋಪಹಾರ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಅನ್ವಯ ಅರ್ಹ ಪೂರೈಕೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ನಲ್ಲಿ ಹಾಗೂ ಕಚೇರಿಯ ದೂರವಾಣಿ ಸಂಖ್ಯೆ: 08352–251085 ಅಥವಾ 7019008443 ಗೆ ಸಂಪರ್ಕಿಸಲು ಕೋರಲಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.11.2025
ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.11.2025
ಟೆಂಡರಿನ ಒಟ್ಟು ಮೊತ್ತ ರೂ. 78,73,125/–
ಇ.ಎಂ.ಡಿ ಮೊತ್ತ ರೂ. 1,57,463/–

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ವಿಜಯಪುರ
ವಾಸಾಸಂಇ/ವಿಜಯಪುರ/474/ಕೆಎಸ್‌ಎಂಸಿಎ/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/3ನೇ ಟೆಂಡರ್ ಪ್ರಕಟಣೆ ಸಂಖ್ಯೆ :10/2024–25 ದಿನಾಂಕ : 17.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ–3ನೇ ಕರೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

Ref:1) No: EE/KNNL/BDN-4/TA/PB-1/4701 Bhadra / Tender Notification No: 10/2024-25: Dated: 15.11.2024
2) No: EE/KNNL/BDN-4/TA/PB-1/4701 Bhadra / 2nd Call Tender Notification No: 10/2024-25: Dated: 26.09.2025
ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ. 4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ. 1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 19.11.2025 ರಿಂದ 27.11.2025 ರವರೆಗೆ ಸಂಜೆ 17.30 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 28.11.2025 ರಂದು 17.30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority 4) ಕಾಲಾವಧಿ : 06 ತಿಂಗಳು. 5) ಟೆಂಡರ್‌ಗಿಟ್ಟ ಮೊತ್ತ : ರೂ. 84.50 ಲಕ್ಷ. 6) ಇಎಂಡಿ ಮೊತ್ತ : ರೂ. 1,69,000/–.
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಶಿ/ನಂ.78–11/ಝೇಂಕಾರ್/2025–26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com
No : HIMS/TS/EQT/8/2025-TNDR-HIMS-HSN
Date: 17.11.2025

ಇ–ಟೆಂಡರ್ ಪ್ರಕಟಣೆ

ಸಂಸ್ಥೆಯ ಭೋದಕ ಆಸ್ಪತ್ರೆಯ ಅರಿವಳಿಕೆ ಮತ್ತು ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. Sl.No. Tender Particulars 01. Radio Frequency Nerve ablation Machine Qty: 01 EMD(Rs.)1,83,000-00 Tender Particulars 02. Electric High Speed Drill System for Brain and Spine surgery Qty: 01 EMD(Rs.)83,750-00 ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಡನೆ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ:19.11.2025.ರಿಂದ ಪ್ರಾರಂಭವಾಗುವುದು, ಭರ್ತಿ ಮಾಡಿದ ಇ–ಟೆಂಡರ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ:03.12.2025.ರ ಸಂಜೆ 5.00ಗಂಟೆ. ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/786/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(Ph. No: 0821-2979772 E-mail:khsdrp.divmys@gmail.com)
ಸಂಖ್ಯೆ:ಆಕುಕ/ಇಂ.ವಿ./ಕಾ.ಅ/ಮೈ/ಸಇ–1&2/ಟೆಂಡರ್–14–2ನೇ ಕರೆ/AAM–2025–26 ದಿ:18.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಮೈಸೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಸಾಮಾನ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, CAT-1, CAT-II(A) ವರ್ಗಾವಾರು ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟಾರೆ 70 ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಟ ಅಂದಾಜು ಮೊತ್ತ ರೂ.53.15 ರಿಂದ ಗರಿಷ್ಟ ಅಂದಾಜು ಮೊತ್ತ ರೂ.54.72 ಲಕ್ಷಗಳಾಗಿರುತ್ತವೆ.
ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 01.12.2025 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 02.12.2025 ರಂದು 16.30 ಗಂಟೆಗೆ.
ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS/1250/KSMCA/696/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020
ಸಂ.: ಬೆಂಅಪ್ರಾ/ನಯೋಸ/CLU-36/3130/2025-26 ದಿನಾಂಕ: 19.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು **ವಸತಿ** ವಲಯದಿಂದ **ವಾಣಿಜ್ಯ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಿ. ಗಿರೀಶ್ ಮತ್ತು ಶ್ರೀ ಸಿ. ಸತೀಶ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಶೀಗೆಹಳ್ಳಿ	88/8	1–38.50	ವಸತಿ	ವಾಣಿಜ್ಯ

ಷರಾ: ಈ ಜಮೀನುಗಳಲ್ಲಿ ವಾಣಿಜ್ಯ ಕಟ್ಟಡ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ದಿನೋಪಯೋಗಿ ವಸ್ತುಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ ಮತ್ತು ವಾಣಿಜ್ಯ ಮಳಿಗೆಗಳು ದೊರಕುತ್ತದೆ. ಈ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ, ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತವೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, **'ವಸತಿ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316
ಸಂ.ರಾಮಪ/ತಾಂತ್ರಿಕ/ಕಾ/ಅ/ಮ.ನಿ/51,232,238,239,243,424,426/2025–26 ದಿನಾಂಕ: 18–11–2025.

ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಟೆಂಡರ್ / ಮರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP. Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2021–22 ಸಾಲಿನ15ನೇ ಹಣಕಾಸು (ಮುಕ್ತ) ಅನುದಾನ	Construction of Public Toilet at ward no 21 Behind Melrose School Devi Nagar in Raichur City (Continuation work) **Estimate Cost Rs.6,23,000/-**	DMA/2025-26/ BD/WORK_ INDENT41686/ CALL-4
2	2022–23 ಸಾಲಿನ 15ನೇ ಹಣಕಾಸು (ಮುಕ್ತ) ಅನುದಾನ	Improvement to the Garden near Valmiki Bhavan at Ward No-34 in Raichur City. **Estimate Cost Rs.9,00,000/-**	DMA/2025-26/ OW/ WORK_ INDENT 48647/CALL-2
3	ಎಸ್.ಬಿ.ಎಂ 2.0 ಅನುದಾನ.	Construction Work of a Urinal Next to the Food Department in the old DC office premises of the Raichur City. **Estimate Cost Rs.1,60,000/-**	DMA/2025-26/ BD/ WORK_ INDENT47741/ Call-3
4		Urinal Construction Work Near the OLD DUDC In The OLD DC Office Premises Of The Raichur City. **Estimate Cost Rs.1,60,000/-**	DMA/2025-26/ BD/ WORK_ INDENT47725/ Call-3
5	2022–23 ಸಾಲಿನ 15ನೇ ಹಣಕಾಸು (ಮುಕ್ತ) ಅನುದಾನ	Developement of Garden at HRB Layout in Ward No 11 in Raichur City **Estimate Cost Rs.9,00,000/-**	DMA/2025-26/ OW/ WORK_ INDENT51541
6	2024–25ಸಾಲಿನ 15ನೇ ಹಣಕಾಸು (ನಿರ್ಬಂಧಿತ) ಅನುದಾನ	Providing Laying of 300mm Dia M S Pipe Line and Fixing of DI Valve at Sidrameshwar Circle In Raichur City **Estimate Cost Rs.14,00,000/-**	DMA/2025-26/ OW/ WORK_ INDENT51417
7	ಮಹಾನಗರ ಪಾಲಿಕೆ ನಿಧಿ ಅನುದಾನ	Estimate for ABC Vaccination Programmes as per standard protocol in Raichur City **Estimate Cost Rs.30,00,000/-**	DMA/2025-26/ SE6614
8		Repair of 715 HP motor & pump at Chicksugur WTP in raichur city corporation Limits. **Estimate Cost Rs.8,25,000/-**	DMA/2025-26/ SE6589
9	2023–24 ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ	Intergration of Advanced Robotic Scavenger with Vehicle & Automated Waste Collection System for Raichur City Corporation **Estimate Cost Rs.55,00,000/-**	GEM/2025/B/ 6897567

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.
DIP/RCR/551/KSMCA/553/2025-26

ಮಂಗಳೂರು ಮಹಾನಗರಪಾಲಿಕೆ
DMA/WORK INDENT No. 51343/25-26/ EE1 ದಿನಾಂಕ: 20.11.2025

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿ.ನಂ.48 ಕಂಕನಾಡಿ ವೆಲೆನ್ಸಿಯಾ ವಾರ್ಡಿನ ಪಂಪ್‌ವೆಲ್ ಪಡೀಲ್ ರಸ್ತೆಯ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಯನ್ನು **ಪ್ರೀಮಿಯಂ ಎಫ್.ಎ.ಆರ್ ಅನುದಾನದಲ್ಲಿ** ನಿರ್ವಹಿಸುವ ಬಗ್ಗೆ ಅಂದಾಜುಪಟ್ಟಿ ಮೊತ್ತ **ರೂ. 399.00 ಲಕ್ಷಗಳು WORK INDENT NO.51343** ಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 20.12.2025 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು
DIPR/DK/KSMCA/1121/25-26 dt: 20.11.2025

ಗ್ಯಾರಂಟಿ ಅನುಷ್ಠಾನದಲ್ಲಿ ಯಶಸ್ವಿ | ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ನೇತೃತ್ವದ ಸರಕಾರ ಇಡೀ ದೇಶಕ್ಕೆ ಮಾದರಿ

ಎರಡೂವರೆ ವರ್ಷದಲ್ಲಿ ಅಭಿವೃದ್ಧಿಯೇ ಮೂಲ ಮಂತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಐತಿಹಾಸಿಕ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಭರ್ತಿ ಎರಡೂವರೆ ವರ್ಷ ತುಂಬಿದೆ. ಈ ಅವಧಿಯಲ್ಲಿ ರಾಜಕೀಯವಾಗಿ ಹಲವು ಗೊಂದಲ, ಗೋಜಲುಗಳು ಬಂದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಾಜ್ಯ ಸರಕಾರ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಕರ್ನಾಟಕದ ಅಭಿವೃದ್ಧಿಗೆ ಶ್ರಮಿಸಿದೆ.

2023ರ ಚುನಾವಣೆಯ ಸಮಯದಲ್ಲಿ 'ಪಂಚ ಗ್ಯಾರಂಟಿ' ಘೋಷಣೆಗಳನ್ನು ಕಾಂಗ್ರೆಸ್ ಮಾಡಿತ್ತು. ಈ ಯೋಜನೆಗಳನ್ನು ಜಾರಿಗೊಳಿಸುವುದು ಸಾಧ್ಯವಿಲ್ಲ ಎನ್ನುವ ಕೊಂಕನ್ನು ಪ್ರತಿಪಕ್ಷಗಳು ಮಾಡಿದ್ದರೂ, ಈ ಎಲ್ಲ ಸವಾಲುಗಳನ್ನು ಮೀರಿ ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿ, ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಯಿತು. ಆರಂಭದಲ್ಲಿ ಕಾಂಗ್ರೆಸ್‌ನ ಪಂಚಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ಅನೇಕರು, ಕರ್ನಾಟಕದಲ್ಲಿ ಅನುಷ್ಠಾನಗೊಂಡ ಬಳಿಕ ಇನ್ನುಳಿದ ರಾಜ್ಯಗಳ ಚುನಾವಣೆಗಳಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಈ ಗ್ಯಾರಂಟಿಗಳನ್ನು ಸೇರಿಸಿಕೊಂಡು. ಈ ಮೂಲಕ ಇಡೀ ದೇಶಕ್ಕೆ ಕರ್ನಾಟಕದ ಗ್ಯಾರಂಟಿ ಯೋಜನೆ ಮಾದರಿಯಾಯಿತು ಎಂದರೆ ತಪ್ಪಾಗುವುದಿಲ್ಲ.

ಪ್ರಮುಖವಾಗಿ ಏಳು ಕೋಟಿ ಕನ್ನಡಿಗರಲ್ಲಿ ಶೇ.70ಕ್ಕೂ ಹೆಚ್ಚು ಜನರನ್ನು ತಲುಪುವ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮೀ, ಅನ್ನಭಾಗ್ಯ ಹಾಗೂ ಯುವ ನಿಧಿ ಯೋಜನೆಗೆ ಅಧಿಕಾರಕ್ಕೆ ಬಂದ ಮೊದಲ ದಿನವೇ ಗ್ಯಾರಂಟಿ ಯೋಜನೆಗೆ ಚಾಲನೆ ನೀಡಿದ ಸರಕಾರ ಮೊದಲ ಆರು ತಿಂಗಳಲ್ಲೇ ಐದು ಗ್ಯಾರಂಟಿಗಳನ್ನೂ ಅನುಷ್ಠಾನಗೊಳಿಸಿದೆ. ಈವರೆಗೆ 1.05 ಲಕ್ಷ ಕೋಟಿ ರು. ಪ್ರಯೋಜನವನ್ನು ನೇರವಾಗಿ ಜನರಿಗೆ ತಲುಪಿಸಲಾಗಿದೆ. ಈ ಕರ್ನಾಟಕ ಮಾದರಿ ದೇಶ, ವಿದೇಶದಲ್ಲೇ ಮನ್ನಣೆ ಪಡೆದಿದ್ದು, ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸೇರಿ ಎಲ್ಲಾ ಪಕ್ಷಗಳೂ ಅನುಸರಿಸುವಂತಹ ಪ್ರೇರಣೆ ನೀಡಿದೆ.

ಕರ್ನಾಟಕದಿಂದ ಪ್ರೇರಣೆ ಪಡೆದು ಗ್ಯಾರಂಟಿ ಯೋಜನೆ ಜಾರಿಗೊಳಿಸಲು ಮುಂದಾದ ಹಿಮಾಚಲಪ್ರದೇಶ ಹಾಗೂ ಮಹಾರಾಷ್ಟ್ರದಂತಹ ಕೆಲ ರಾಜ್ಯಗಳು ಆರ್ಥಿಕ ಸಂಕಷ್ಟ ಅನುಭವಿಸಿದವು. ಆದರೆ, ಗ್ಯಾರಂಟಿಗಳನ್ನು ಸಮರ್ಥವಾಗಿ ನಿಭಾಯಿಸುವ ಜತೆಗೆ ಅಭಿವೃದ್ಧಿ ಯೋಜನೆಗಳಿಗೆ ತಡೆಯಾಗದಂತೆ ಸಿದ್ದರಾಮಯ್ಯ ಸರಕಾರ ಮುನ್ನೆಚ್ಚರಿಕೆ ವಹಿಸಿದೆ. ಗ್ಯಾರಂಟಿ ಅನುಕರಿಸಿದ ಕೆಲ ರಾಜ್ಯಗಳು ದಿವಾಳಿಯತ್ತ ಸಾಗಿದ್ದರೂ ರಾಜ್ಯ ಮಾತ್ರ ದಿನದಿಂದ ದಿನಕ್ಕೆ ಆರ್ಥಿಕವಾಗಿ ಸಬಲವಾಗುತ್ತಿದೆ.

ತಲಾದಾಯದಲ್ಲಿ ದೇಶದಲ್ಲೇ ನಂ.1

ಗ್ಯಾರಂಟಿಗಳ ಪರಿಣಾಮವಾಗಿ ರಾಜ್ಯವು ತಲಾದಾಯದಲ್ಲಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದೆ. ಶಕ್ತಿ ಯೋಜನೆಯಲ್ಲಿ ಮಹಿಳೆಯರು ಉಚಿತವಾಗಿ 500ಕೋಟಿ ಬಾರಿ ಪ್ರಯಾಣ ಮಾಡಿರುವುದು ವಿಶ್ವ ದಾಖಲೆಯಾಗಿದೆ. ಇದರ ನಡುವೆಯೇ ಗ್ಯಾರಂಟಿಯಿಂದ ಅನುದಾನ ಕೊರತೆಯಾಗಿದೆ ಎಂದು ಕೆಲ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಆದರೆ ಶಾಸಕರ ಕ್ಷೇತ್ರಗಳ ಅಭಿವೃದ್ಧಿಗೂ ಅನುದಾನ ನೀಡುವ ಮೂಲಕ ಈ ಗೊಂದಲಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರಕಾರ ಕೊನೆಯಾಡಿದೆ.

ಬೆಂಗಳೂರಿನ ಅಭಿವೃದ್ಧಿಗೆ ಒತ್ತು

ಸಿದ್ದರಾಮಯ್ಯ ನೇತೃತ್ವದ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಬೆಂಗಳೂರಿನ ಅಭಿವೃದ್ಧಿಗೆ ಹಲವು ಕ್ರಮಗಳನ್ನು ಕೈಗೊಂಡಿದೆ. ಪ್ರಮುಖವಾಗಿ ಬೆಂಗಳೂರಿಗೆ ಬಹುದೊಡ್ಡ ಸಮಸ್ಯೆಯಾಗಿರುವ ಟ್ರಾಫಿಕ್ ನಿಯಂತ್ರಣಕ್ಕೆ ಟನಲ್ ರಸ್ತೆ ನಿರ್ಮಾಣ, ಮೆಟ್ರೋ ವಿಸ್ತರಣೆಯಂತಹ ಹಲವು ಯೋಜನೆಗಳನ್ನು ಆರಂಭಿಸಿದೆ. ನಗರದಲ್ಲಿ ಸುಮಾರು 40 ಕಿ.ಮೀ.ನಷ್ಟು ಟನಲ್ ರಸ್ತೆ ನಿರ್ಮಾಣಕ್ಕೆ ಮುಂದಾಗಿದೆ. ಇದರೊಂದಿಗೆ 118 ಕಿ.ಮೀ ಮೇಲ್ಸೆತುವೆ ನಿರ್ಮಾಣ ಸೇರಿದಂತೆ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸುಮಾರು 1 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ನಿರ್ಧರಿಸಲಾಗಿದೆ. ಮನೆ ಬಾಗಿಲಿಗೆ 'ನಂಬಿಕೆ ನಕ್ಷೆ' ಎನ್ನುವ ಯೋಜನೆ ಆರಂಭಿಸಲಾಗಿದೆ. ಸುಮಾರು 25 ಲಕ್ಷ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ, ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸಲಾಗುತ್ತಿದೆ.

ಹಲವು ದಾಖಲೆ ಬರೆದ ಸರಕಾರ

ಹಾಗೇ ನೋಡಿದರೆ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಸಮಯದಲ್ಲಿ ಹಲವು ಸವಾಲುಗಳಿದ್ದವು. ಈ ಎಲ್ಲ ಸವಾಲುಗಳನ್ನು ಮೀರಿ ನಿಂತಿರುವ ಸರಕಾರ, ಗ್ಯಾರಂಟಿ ಜಾರಿ, ನಕ್ಸಲ್ ಮುಕ್ತ ರಾಜ್ಯ, ಒಳಮೀಸಲು, ರೈತರ ಪರ ನಿರ್ಧಾರ, ಕಂದಾಯ ಇಲಾಖೆ ಸುಧಾರಣೆಯಲ್ಲಿ ಕ್ರಾಂತಿಕಾರಕ ತೀರ್ಮಾನವನ್ನು ಸರಕಾರ ತೆಗೆದುಕೊಂಡಿದೆ. ಇದರೊಂದಿಗೆ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಮಾಡಿರುವುದು ಸರಕಾರದ ಹೆಗ್ಗಳಿಕೆ.

ನಕಲಿ ಖಾತೆ ತಡೆಗೆ ಹಲವು ಕ್ರಮ

ರಾಜ್ಯಾದ್ಯಂತ ಭೂಮಿಗೆ ಬಂಗಾರದ ಬೆಳೆ ಬಂದಾಗಿನಿಂದ ನಕಲಿ ಖಾತೆ, ನಕಲಿ ದಾಖಲೆಗಳ ಸಮಸ್ಯೆ ತೀವ್ರವಾಗಿತ್ತು. ಇದನ್ನು ಗಮನಿಸಿದ ರಾಜ್ಯ ಸರಕಾರ ಕಂದಾಯ ಇಲಾಖೆಯ ವತಿಯಿಂದ ಹಲವು ಸುಧಾರಣಾ ಕ್ರಮಗಳನ್ನು ವಹಿಸಿದೆ. ಪ್ರಮುಖವಾಗಿ 'ನನ್ನ ಭೂಮಿ- ನನ್ನ ಹಕ್ಕು', 'ಭೂ ಸುರಕ್ಷಾ', ಇ-ಪೌತಿ, ಪೋಡಿ ಮುಕ್ತ ಗ್ರಾಮ, ಪಹಣಿ-ಆಧಾರ್ ಜೋಡಣೆಯ ಯೋಜನೆಯನ್ನು ಆರಂಭಿಸಿದೆ. ಇದರೊಂದಿಗೆ ಇ- ಖಾತಾದ ಮೂಲಕ ಆಸ್ತಿಗಳ ಡಿಜಿಟಲೀಕರಣಕ್ಕೆ ಒತ್ತು ನೀಡಿದೆ.

ಪ್ರಮುಖ ಸಾಧನೆ

- ಬಿಬಿಎಂಪಿ ಅನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಮೇಲ್ದರ್ಜೆಗೆ
- ಮೆಟ್ರೋ ಹಳದಿ ಮಾರ್ಗ ಲೋಕಾರ್ಪಣೆ
- ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ದಾಖಲೆಯ 13 ಸಾವಿರ ಕೋಟಿ ರು.ಅನುದಾನ
- ಏಳು ಜಿಲ್ಲೆಗಳ ಲಕ್ಷಾಂತರ ಜನರ ಬದುಕು ಬದಲಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಹಂತ-1ಕ್ಕೆ ಚಾಲನೆ.
- ಸಮಗ್ರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಗೆ ಹೆಚ್ಚಿನ ಒತ್ತು; ಹತ್ತಾರು ಯೋಜನೆ ಜಾರಿ
- ದೇಶದಲ್ಲಿ ಮೊದಲ ಬಾರಿಗೆ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಕಾಯ್ದೆ-2025 ಜಾರಿ
- ಮಹಿಳೆಯರ ಹಿತರಕ್ಷಣೆ ಕಾಪಾಡುವ ಉದ್ದೇಶದಿಂದ ಮಹಿಳಾ ನೌಕರರಿಗೆ ಪ್ರತಿ ತಿಂಗಳು ಒಂದು ದಿನ ವೇತನ ಸಹಿತ ಋತುಚಕ್ರ ರಜೆ ಘೋಷಣೆ.
- ರಾಜ್ಯದ ಎಲ್ಲ ಜನರ ಸ್ಥಿತಿ-ಗತಿ ಅಧ್ಯಯನಕ್ಕೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ- 2025
- ಉದ್ಯೋಗ, ಶಿಕ್ಷಣ ಮತ್ತು ಆರ್ಥಿಕ ಸಬಲೀಕರಣಕ್ಕೆ ಒತ್ತು
- ನಗರ ಮತ್ತು ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಕೆಲಸಗಳು ಕಾಯಂ
- ರೈತರ ಹಿತರಕ್ಷಣೆ ಕಾಪಾಡುವ ಉದ್ದೇಶದಿಂದ ಪ್ರತಿಟನ್ ಕಬ್ಬಿಗೆ 3,300 ರು. ದರ ನಿಗದಿ ಮಾಡಿ ಅನ್ನದಾತರಿಗೆ ಆಸರೆ.
- ರಾಜ್ಯದಲ್ಲಿರುವ ಪ್ರವಾಸಿ ತಾಣಗಳಿಗೆ ಇನ್ನಷ್ಟು ಒತ್ತು ನೀಡುವ ಉದ್ದೇಶದಿಂದ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ಜಾರಿ.
- ವಿವಿಧ ವಸತಿ ನಿಗಮಗಳ ವತಿಯಿಂದ 3.69 ಲಕ್ಷ ಮನೆಗಳ ವಿತರಣೆ
- ಎಲ್ಲ ನಕ್ಸಲರನ್ನು ಶರಣಾಗತರನ್ನಾಗಿಸಿ, 'ನಕ್ಸಲ್ ಮುಕ್ತ ಕರ್ನಾಟಕ' ಘೋಷಣೆ
- ಸರಕಾರಿ ಶಾಲೆಗಳ ಸುಧಾರಣೆಗೆ ಸಿಎಸ್‌ಆರ್ ನಿಧಿ ಬಳಕೆ ಹಾಗೂ ಕೆಪಿಎಸ್ ಶಾಲೆಗಳ ನಿರ್ಮಾಣ
- ಕರ್ನಾಟಕ ರಾಜ್ಯ ಭಾಷಾ ಕಾಯ್ದೆ-1963ರಂತೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ.



ಗೃಹಲಕ್ಷ್ಮೀ ಯೋಜನೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಚಾಲನೆ ನೀಡಿದ ಸಂದರ್ಭ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಇದ್ದರು.

ಶಕ್ತಿಯೋಜನೆಯಡಿಯಲ್ಲಿ 500 ಕೋಟಿ ಟಿಕೆಟ್ ಪೂರೈಸಿದ ಹಿನ್ನೆಲೆ ಮಹಿಳೆಯೊಬ್ಬರಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ವಿಶೇಷ ಕೊಡುಗೆ ವಿತರಿಸಿದ ಸಂದರ್ಭ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕಲಬುರಗಿಯಲ್ಲಿ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡಿದ ಸಂದರ್ಭ.

ಈ ಹಿಂದೆಯೂ ನಡೆದಿದ್ದಾರೆ, ಈಗಲೂ ನಡೆಯುತ್ತಾರೆ | ಅದೃಷ್ಟವಿದ್ದರೆ ನನ್ನಣ್ಣ ಸಿಎಂ ಆಗ್ತಾನೆ

ಕೊಟ್ಟ ಮಾತನ್ನು ಸಿದ್ದು ಉಳಿಸಿಕೊಳ್ಳುತ್ತಾರೆ: ಡಿಕೆಸು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರು ಎಂದೂ ಕೊಟ್ಟ ಮಾತನ್ನು ತಪ್ಪುವವರಲ್ಲ. ಅವರು ಯಾರಿಗೆ ಮಾತು ಕೊಟ್ಟರೂ ತಪ್ಪುವುದಿಲ್ಲ ಎಂದು ಬಮೂಲ್ ಅಧ್ಯಕ್ಷರಾದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿಯಲ್ಲಿ ಸಿದ್ದರಾಮಯ್ಯ ಅವರ ಬಳಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಚರ್ಚೆಯಾಗಿಲ್ಲ. ಅಷ್ಟು ದೊಡ್ಡ ವ್ಯಕ್ತಿ ನಾನಲ್ಲ. ಅವರು ಹಿರಿಯ ನಾಯಕರು. ಅವರಿಗೆ ತಮ್ಮದೇ ಆದ ಜವಾಬ್ದಾರಿಯಿದೆ. ಕರ್ನಾಟಕದ ಜನರಿಗೆ ಕೊಟ್ಟ ಎಲ್ಲಾ ಭರವಸೆ ಈಡೇರಿಸಿದ್ದಾರೆ. ಈ ಸರಕಾರದಲ್ಲೂ ಅವರು ಯಾರಿಗೆ ಯಾವ ಮಾತು ಕೊಟ್ಟಿದ್ದಾರೋ ಅದರಂತೆ ನಡೆಯುತ್ತಿದ್ದಾರೆ ಎಂದು ಹೇಳಿದರು.

ಕರ್ನಾಟಕದ ಜನರ ಆಶೀರ್ವಾದದಿಂದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಿದ್ದು, ಎರಡೂವರೆ ವರ್ಷ ತುಂಬಿದೆ. ಕೊಟ್ಟ ಮಾತಿನಂತೆ ಮುಖ್ಯಮಂತ್ರಿಗಳು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಅವರು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ. ಪವರ್ ಶೇರಿಂಗ್ ವಿಷಯದ ಬಗ್ಗೆ ಗೊತ್ತಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಈ ವಿಚಾರವನ್ನು ಪಕ್ಷದ ವರಿಷ್ಠರು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡುತ್ತಾರೆ. ಈ ವಿಚಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರು. ಶಿವಕುಮಾರ್ ಎರಡೂವರೆ ವರ್ಷಗಳ ಬಳಿಕ ಮುಖ್ಯಮಂತ್ರಿಯಾಗುತ್ತಾರೆ ಎನ್ನುವ ಆಸೆ ಎಲ್ಲರಿಗೂ ಇದೆ. ಅವರ ಅಭಿಮಾನಿಗಳು ಹೇಳುತ್ತಿರುತ್ತಾರೆ, ಪೂಜೆ ಮಾಡುತ್ತಿರುತ್ತಾರೆ, ಅವರಿಗೆ ಏನು ಬೇಕೋ ಮಾಡುತ್ತಿರುತ್ತಾರೆ. ನಾವುಗಳು ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡುವವರು. ಪಕ್ಷ ಏನು ಹೇಳುತ್ತದೆಯೋ ಅದನ್ನು ಸಿಎಂ, ಡಿಸಿಎಂ ಸೇರಿದಂತೆ ಎಲ್ಲಾ ನಾಯಕರು ಪಾಲನೆ ಮಾಡುತ್ತಾರೆ. ಇದು ನಮ್ಮ, ನಿಮ್ಮ ಮುಂದೆ ನಡೆಯುವ ಚರ್ಚೆಯಲ್ಲ. ಇದನ್ನು ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಸದ್ಯಕ್ಕೆ ಸಿಎಂ ಹುದ್ದೆ ಖಾಲಿ ಇಲ್ಲ. ಏನೇ ತೀರ್ಮಾನ ಮಾಡುವುದಿದ್ದರೂ ಹೈಕಮಾಂಡ್ ತೀರ್ಮಾನ ಮಾಡಬೇಕು. ಇಲ್ಲಿ ವೈಯಕ್ತಿಕ ವಿಚಾರ ಇಲ್ಲ ಎಂದು ತಿಳಿಸಿದರು.

ದಾಖಲೆ ಬರೆಯುವ ಕನಸು ಡಿಕೆಗಿಲ್ಲ

ಡಿ.ಕೆ.ಶಿವಕುಮಾರ್ ಅವರಿಗೆ ಎಂಟು ವರ್ಷಕ್ಕಿಂತ ಹೆಚ್ಚು ಅವಧಿಗೆ ಕೆಪಿಸಿಸಿ ಅಧ್ಯಕ್ಷರಾಗಿ ದಾಖಲೆ ಬರೆಯುವ ಇಚ್ಛೆ ಇದೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಡಿ.ಕೆ.ಸುರೇಶ್, ಆ ರೀತಿ ಏನೂ ಇಲ್ಲ. ಅಧಿಕಾರದ ದಾಖಲೆ ಮಾಡುವ ಕನಸು ಅವರದ್ದಲ್ಲ. ರಾಜಕಾರಣದಲ್ಲಿ ಶಾಶ್ವತವಾಗಿ ಉಳಿಯಬೇಕಾದರೆ, ಜನರಿಗೆ ಆಗಲಿ, ಬೇರೆಯವರಿಗೆ ಆಗಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು. ಆಗ ಶಾಶ್ವತವಾಗಿ ನಾಯಕರಾಗಿ ಉಳಿಯಲು ಸಾಧ್ಯ. ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿ, ದೇವರಾಜ ಅರಸು, ನಿಜಲಿಂಗಪ್ಪ, ಎಸ್.ಎಂ. ಕೃಷ್ಣ ಸೇರಿದಂತೆ ಎಲ್ಲರೂ ಹೈಕಮಾಂಡ್ ಅಣತಿಯಂತೆ ಕೆಲಸ ಮಾಡಿದ್ದಾರೆ ಎಂದರು. ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿರುವುದೇ ದೊಡ್ಡ ಸಾಧನೆ. ಪಕ್ಷ ಅಧೋಗತಿಯಲ್ಲಿದ್ದ ಸಂದರ್ಭದಲ್ಲಿ ಜವಾಬ್ದಾರಿ ತೆಗೆದುಕೊಂಡು ಪಕ್ಷಕ್ಕೆ ಚೈತನ್ಯ ತುಂಬಿದ್ದಾರೆ. ಕಾರ್ಯಕರ್ತರಿಗೆ ಹುಮ್ಮಸ್ಸು ಕೊಟ್ಟಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತಂದು, ಕೊಟ್ಟ ಮಾತಿನಂತೆ ನಡೆದು ಉತ್ತಮ ಆಡಳಿತ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಶ್ರಮಕ್ಕೆ ತಕ್ಕ ಪ್ರತಿಫಲ ಇರುವುದಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಶಿವಕುಮಾರ್ ಅವರ ಶ್ರಮಕ್ಕೆ ಒಂದಲ್ಲಾ ಒಂದು ದಿನ ಫಲ ಸಿಕ್ಕೇ ಸಿಗುತ್ತೆ. ಕಾದು ನೋಡಬೇಕು. ಈ ಅವಧಿಯಲ್ಲಿ ಸಿಗುವುದೇ ಎಂಬುದು ನನಗೆ ಗೊತ್ತಿಲ್ಲ. ಅದೃಷ್ಟ ಇದ್ದರೆ ನಮ್ಮಣ್ಣ ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಿದ್ದೇನೆ. ಎಲ್ಲರೂ ಶ್ರಮ ಹಾಕಿದ್ದಾರೆ. ಶಿವಕುಮಾರ್ ಹಾಗೂ ಬೇರೆಯವರು ಶ್ರಮ ಹಾಕಿದ್ದಾರೆ. ಒಬ್ಬರು ಮಂತ್ರಿಯಾಗಬೇಕು, ಮತ್ತೊಬ್ಬರು ಉಪ ಮುಖ್ಯಮಂತ್ರಿಯಾಗಬೇಕು, ಸಂಸದರು, ಶಾಸಕರು ಆಗಬೇಕು ಎನ್ನುತ್ತಾರೆ. ರಾಜಕಾರಣದಲ್ಲಿ ಒಬ್ಬೊಬ್ಬರದ್ದು ಒಂದೊಂದು ರೀತಿಯ ಆಸೆ, ಆಕಾಂಕ್ಷೆ ಇರುತ್ತದೆ. ಹೀಗಾಗಿ ಇದು ಸ್ವಾಭಾವಿಕ.

– ಡಿ.ಕೆ.ಸುರೇಶ್, ಬಮೂಲ್ ಅಧ್ಯಕ್ಷ

ನಾಲ್ಕು ದಶಕದಿಂದಲೂ ಒಬ್ಬರೇ ಹೋಗುತ್ತಾರೆ

ಸಿಎಂ ದೆಹಲಿಗೆ ಹೋದರೆ ತಮ್ಮ ಬಣದ ಜತೆಗೆ ಹೋಗುತ್ತಾರೆ. ಶಿವಕುಮಾರ್ ಅವರು ಏಕಾಂಗಿಯಾಗಿ ಹೋಗುತ್ತಾರೆ ಎನ್ನುವ ಪ್ರಶ್ನೆಗೆ, ಶಿವಕುಮಾರ್ ಅವರ ದೆಹಲಿ ಸಂಪರ್ಕ 40 ವರ್ಷಗಳದ್ದು. ಅಂದಿನಿಂದಲೂ ಅವರು ಒಬ್ಬರೇ ದೆಹಲಿಗೆ ಹೋಗಿ ಬರುತ್ತಾರೆ. ಹೈಕಮಾಂಡ್ ಮುಂದೆ ಕೇವಲ ಕರ್ನಾಟಕ ವಿಚಾರ ಮಾತ್ರವಲ್ಲ, ಅನೇಕ ವಿಚಾರ ಇರುತ್ತದೆ. ಯಾವುದೇ ತೀರ್ಮಾನ ಮಾಡಬೇಕಾದರೂ ಹಲವು ರೀತಿ ಆಲೋಚನೆ ಮಾಡಬೇಕು. ಬಿಹಾರ ಚುನಾವಣೆ ಸೋಲಿನ ಪರಾಮರ್ಶೆ ಮಾಡುತ್ತಿದ್ದಾರೆ. ಬೇರೆ, ಬೇರೆ ರಾಜ್ಯಗಳಲ್ಲಿ ಮುಂಬರುವ ಚುನಾವಣೆ ಬಗ್ಗೆಯೂ ಚರ್ಚೆ ಮಾಡಬೇಕು. ಎಸ್‌ಐಆರ್ ಬಗ್ಗೆ ಚರ್ಚೆ ನಡೆಯುತ್ತಿದೆ. ಹೀಗಾಗಿ 12 ರಾಜ್ಯಗಳ ಬಗ್ಗೆ ಚಿಂತನೆ ಮಾಡಬೇಕು. ಪಕ್ಷ ಸಂಘಟನೆ, ಹೋರಾಟ, ವಿರೋಧ ಪಕ್ಷವಾಗಿ ಕಾರ್ಯತಂತ್ರ ರೂಪಿಸುವ ಬಗ್ಗೆ ಆಲೋಚನೆ ಮಾಡಬೇಕಿದೆ. ಹೈಕಮಾಂಡ್ ನಾಯಕರು ಈ ವಿಚಾರಗಳಲ್ಲಿ ನಿರತರಾಗಿದ್ದಾರೆ ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಶಾಮನೂರು ಶಿವಶಂಕರಪ್ಪ ಆರೋಗ್ಯದಲ್ಲಿ ಚೇತರಿಕೆ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ, ಮಾಜಿ ಸಚಿವ ಡಾ.ಶಾಮನೂರು ಶಿವಶಂಕರಪ್ಪ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ. ಕಳೆದ ಕೆಲವು ದಿನಗಳ ಹಿಂದ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಈಗ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ಹೇಳಲಾಗಿದೆ. 95 ವರ್ಷದ ವಯಸ್ಸಿನ ಡಾ. ಶಾಮನೂರು ಶಿವಶಂಕರಪ್ಪ ಅವರು ಕಳೆದ ಹಲವು ತಿಂಗಳಿನಿಂದ ಆಗಾಗ ಆರೋಗ್ಯ ಸರಿ ಇರುತ್ತಿರಲಿಲ್ಲ. ಬೆಂಗಳೂರಿನ ಸ್ಪರ್ಶ ಆಸ್ಪತ್ರಗೆ ತೆರಳಿ ಚಿಕಿತ್ಸೆ ಪಡೆದು ಬರುತ್ತಿದ್ದರು. ಇದರಿಂದ ಅವರು ಕ್ಷೇತ್ರದಲ್ಲಿ ಹೆಚ್ಚಾಗಿ ಓಡಾಟ ಇರಲಿಲ್ಲ. ಮನೆಯಲ್ಲಿ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಿದ್ದರು.



ನ.21 ರಿಂದ ಡಿ. 12 ರವರೆಗೆ ರಿಯಾಯಿತಿಯಲ್ಲಿ ದಂಡ ಪಾವತಿಗೆ ಅವಕಾಶ

ಟ್ರಾಫಿಕ್ ಫೈನ್ ಶೇ.50ರಷ್ಟು ರಿಯಾಯಿತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರ ವಾಹನ ಸವಾರರಿಗೆ ಬಾಕಿ ಸಂಚಾರ ದಂಡದ ಮೇಲೆ ಶೇ.50ರಷ್ಟು ರಿಯಾಯಿತಿಯನ್ನು ಘೋಷಿಸಿದ್ದು, ವಾಹನ ಸವಾರರು ಈ ರಿಯಾಯಿತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿದೆ.

ರಾಜ್ಯ ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ರಂಗಪ್ಪ ಕರಿಗಾರ ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, ಈ ಸೌಲಭ್ಯವು ಇಂದಿನಿಂದ (ನ.21 ರಿಂದ) ಡಿಸೆಂಬರ್ 12 ರವರೆಗೆ ಜಾರಿಯಲ್ಲಿ ರಲಿದ್ದು, ಈ ಅವಧಿಯಲ್ಲಿ ಚಾಲಕರು ತಮ್ಮ ಬಾಕಿ ದಂಡವನ್ನು ಅರ್ಧ ಮೊತ್ತಕ್ಕೆ ಪಾವತಿಸಿ ಪ್ರಕರಣ ಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಹೇಳಿದೆ. ಸಂಚಾರ ದಂಡ ರಿಯಾಯಿತಿ ಕುರಿತಂತೆ ಸಾರಿಗೆ ಇಲಾಖೆ ಸರಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿದ ಬಳಿಕ, ಸರಕಾರ ಅಂಗೀಕರಿಸಿ ತಕ್ಷಣ ಜಾರಿಗೆ ತರಲು ಆದೇಶ ಹೊರಡಿಸಿದೆ. ಕಳೆದ ಬಾರಿ ದಂಡ ರಿಯಾಯಿತಿ ನೀಡಿದಾಗ ಸರಕಾರಕ್ಕೆ ಕೋಟ್ಯಂತರ ರು. ಆದಾಯ ಹರಿದು ಬಂದಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಮತ್ತೊಮ್ಮೆ ಈ ರಿಯಾಯಿತಿ ನೀಡಲಾಗಿದ್ದು, ಸರಕಾರದ ಆದೇಶದಂತೆ ಇಂದಿನಿಂದ (ನ.21 ರಿಂದ) ರಾಜ್ಯಾದ್ಯಂತ ಶೇ.50ರಷ್ಟು ದಂಡ ರಿಯಾಯಿತಿ ಯೋಜನೆ ಜಾರಿಗೆ ಬರಲಿದೆ. ಈ ವಿಶೇಷ ಅವಕಾಶ ಡಿಸೆಂಬರ್ 12 ರವರೆಗೆ ಮಾತ್ರ ಲಭ್ಯವಿರಲಿದ್ದು, ಚಾಲಕರು ಈ ಅವಧಿಯೊಳಗೆ ತಮ್ಮ ಬಾಕಿ ಇರುವ ಸಂಚಾರ ದಂಡಗಳನ್ನು ಶೇ.50ರಷ್ಟು ರಿಯಾಯಿತಿಯಲ್ಲಿ ಪಾವತಿಸಬಹುದು.

ಸಂಚಾರ ನಿಯಮ ಉಲ್ಲಂಘನೆಯ ನೂರಾರು ಕೋಟಿ ರು. ದಂಡ ಕಟ್ಟದೆ ವಾಹನ ಸವಾರರು ಬಾಕಿ ಉಳಿಸಿಕೊಂಡಿದ್ದರು. ಹೀಗಾಗಿ, ಸಾರಿಗೆ ಇಲಾಖೆ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಪ್ರಾಧಿಕಾರ ಜಂಟಿ ಸಭೆ ನಡೆಸಿ 2023ರಲ್ಲಿ ಮೊದಲ ಬಾರಿಗೆ ದಂಡ ಪಾವತಿಗೆ ಶೇ. 50ರಷ್ಟು ರಿಯಾಯಿತಿಗೆ ಶಿಫಾರಸು ಮಾಡಿದ್ದವು. ಇದಕ್ಕೆ ಸರಕಾರ ಸಹ ಒಪ್ಪಿ ರಿಯಾಯಿತಿ ಘೋಷಿಸಿತ್ತು. ರಿಯಾಯಿತಿ ದರದಲ್ಲಿ ದಂಡ ಪಾವತಿಗೆ ವಾಹನ ಸವಾರರು ಹೆಚ್ಚು ಆಸಕ್ತಿ ತೋರಿಸಿ ಮೊದಲ ಹಂತದಲ್ಲಿ ರಾಜ್ಯಾದ್ಯಂತ 120 ಕೋಟಿ ರುಗಳಿಗೂ ಹೆಚ್ಚು ದಂಡ ಪಾವತಿಯಾಗಿತ್ತು. ಬಳಿಕ ದಂಡ ಪಾವತಿ ಅವಧಿಯನ್ನು ಹಂತ- ಹಂತವಾಗಿ ವಿಸ್ತರಿಸಲಾಗಿತ್ತು.

ದಂಡ ಕಟ್ಟುವುದೆಲ್ಲಿ?

ದಂಡ ಪಾವತಿ ಉಳಿಸಿಕೊಂಡಿರುವ ವಾಹನ ಸವಾರರು ಬೆಂಗಳೂರಿನಲ್ಲಿ ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ವೆಬ್‌ಸೈಟ್‌ಗಳಲ್ಲಿ ವಿವರ ಪಡೆದು ಪಾವತಿಸಬಹುದು. ಜಿಲ್ಲೆಗಳಲ್ಲಿ ಸಮೀಪದ ಪೊಲೀಸ್ ಠಾಣೆಗಳಿಗೆ ಖುದ್ದು ಭೇಟಿ ನೀಡಿ ರಿಯಾಯಿತಿ ದರದಲ್ಲಿ ದಂಡ ಕಟ್ಟಬಹುದಾಗಿದೆ. ಇನ್ನು ಆನ್‌ಲೈನ್ ಮೂಲಕ ಪಾವತಿ ಮಾಡುವವರು ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್ ಬಿಟಿಪಿ ಅಸ್ತ್ರಂ ಮುಖಾಂತರವೂ ಖುದ್ದಾಗಿ ದಂಡ ಪಾವತಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಸಿಕಂದ್ರಾಬಾದ್‌ಗೆ ವಿಶೇಷ ರೈಲು

ಬೆಂಗಳೂರು: ಭಗವಾನ್ ಶ್ರೀಸತ್ಯ ಸಾಯಿ ಬಾಬಾ ಶತಮಾನೋತ್ಸವ ಅಂಗವಾಗಿ ಬೆಂಗಳೂರು ನೈಋತ್ಯ ರೈಲ್ವೆಯು ಬೆಂಗಳೂರಿನಿಂದ ಉತ್ತರ ಪ್ರದೇಶ ರಾಜ್ಯದ ಮಹಾನಗರಕ್ಕೆ ವಿಶೇಷ ರೈಲು ಸೇವೆ ಒದಗಿಸಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದರು.

ಹಬ್ಬದ ವೇಳೆ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿದೆ ವೇಳಾಪಟ್ಟಿ ಬಿಡುಗಡೆ ಮಾಡಲಾಗಿದ್ದು, ನೈಋತ್ವ ರೈಲ್ವೆಯು ಸಿಕಂದ್ರಾಬಾದ್-ಬೆಂಗಳೂರು ಕಂಟೋನ್ಮೆಂಟ್-ಸಿಕಂದ್ರಾಬಾದ್ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಆರಂಭಿಸಿದ್ದು, ಈ ವಿಶೇಷ ಸೇವೆಯು ತಾತ್ಕಾಲಿಕವಾಗಿ ಭಕ್ತರ ಸುಲಭ ಸಂಚಾರಕ್ಕಾಗಿ ಆರಂಭಿಸಲಾಗಿದೆ ಎಂದು ಹೇಳಿದ್ದಾರೆ. ಸಿಕಂದ್ರಾಬಾದ್-ಬೆಂಗಳೂರು ಕಂಟೋನ್ಮೆಂಟ್ -ಸಿಕಂದ್ರಾಬಾದ್ ವಿಶೇಷ ರೈಲು (07413) ನ.22 (ಶನಿವಾರ) ರಂದು ಕಾರ್ಯಾಚರಣೆ ಆರಂಭಿಸಲಿದೆ.

ವಿಶ್ವವಾಣಿ

ಸಂಪಾದಕೀಯ

ಕಟ್ಟುನಿಟ್ಟಿನ ಸುರಕ್ಷತೆ ಅಗತ್ಯ

ರಾಜಧಾನಿ ಬೆಂಗಳೂರಿನಲ್ಲಿ ಬ್ಯಾಂಕ್ ಎಟಿಎಂಗೆ ತುಂಬಬೇಕಿದ್ದ 7.11 ಕೋಟಿ ರು. ನಗದು ಹಾಡಹಗಲೇ ದರೋಡೆಯಾಗಿರುವುದು ಆತಂಕಕಾರಿ ಬೆಳವಣಿಗೆ. ಕಳೆದ ಐದಾರು ತಿಂಗಳಲ್ಲಿ ಇಂತಹ ಆರೇಳು ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ. ಆದರೂ ಬ್ಯಾಂಕ್ ಮತ್ತು ಎಟಿಎಂ ಹಣದ ಸುರಕ್ಷತೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪೊಲೀಸರು ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟ. ಕ್ಷಣಾರ್ಧದಲ್ಲಿ ಕೋಟ್ಯಂತರ ರೂಪಾಯಿ ಲೂಟಿಯಾಗುತ್ತಿದ್ದು, ಇದಕ್ಕೆ ಕಂಪನಿಗಳ ಸುರಕ್ಷತಾ ಲೋಪ ಕಾರಣವೋ ಅಥವಾ ಸಿಬ್ಬಂದಿಯ ಅಜಾಗರೂಕತೆಯೋ ಎಂಬ ಸಂಶಯ ಮೂಡಿದೆ. ಬೆಂಗಳೂರಿನಲ್ಲಿ ನಡೆದ ದರೋಡೆ ಪ್ರಕರಣದಲ್ಲಿ ಎಟಿಎಂಗೆ ಹಣ ತುಂಬುವ ಸಿಬ್ಬಂದಿಗಳ ಕೈವಾಡ ಇದೆ ಎಂದು ಶಂಕಿಸಲಾಗಿದೆ. ಸಾರಿಗೆ ಬಸ್‌ಗಳಿಗೂ ಜಿಪಿಆರ್‌ಎಸ್ ವ್ಯವಸ್ಥೆ ಇರುವಾಗ ಕೋಟ್ಯಂತರ ರುಪಾಯಿ ಹಣ ಸಾಗಿಸುವ ಸಿಎಂಎಸ್ ವಾಹನಗಳು ಯಾವ ರಸ್ತೆಯಲ್ಲಿ ಚಲಿಸುತ್ತದೆ, ಎಷ್ಟು ಗಂಟೆಗೆ, ಯಾವ ಎಟಿಎಂ ತಲುಪಿದೆ ಎಂಬ ಮಾಹಿತಿ ಸಿಬ್ಬಂದಿಗಳಿಗೆ ಇಲ್ಲ ಎಂದರೆ ಇದು ಉದ್ದೇಶಪೂರ್ವಕ ನಿರ್ಲಕ್ಷ್ಯ ಎಂದು ಭಾವಿಸಬೇಕಾಗುತ್ತದೆ. ಎಟಿಎಂ ವಾಹನದ ಚಲನವಲನದ ಬಗ್ಗೆ ಮಾಹಿತಿ ಇರುವವರೇ ಈ ಕೃತ್ಯ ಎಸಗಿರುವುದು ಸ್ಪಷ್ಟ. ಈ ಹಿಂದೆ ಮಂಗಳೂರಿನ ಉಳ್ಳಾಲ ಮತ್ತು ವಿಜಯಪುರದ ಚಡಚಣ ಮತ್ತು ಮನಗೂಳಿಯಲ್ಲಿ ನಡೆದ ಬ್ಯಾಂಕ್ ದರೋಡೆ ಪ್ರಕರಣಗಳಲ್ಲಿ ಉತ್ತರ ಭಾರತ ಮೂಲದ ದರೋಡೆಕೋರರು ಭಾಗಿಯಾಗಿದ್ದರು. ಪೊಲೀಸರು ಅಲ್ಪಾವಧಿಯಲ್ಲಿಯೇ ಈ ಪ್ರಕರಣವನ್ನು ಭೇದಿಸಿ, ದರೋಡೆಯಾದ ಬಹುತೇಕ ನಗದು ಮತ್ತು ಆಭರಣಗಳನ್ನು ವಶಪಡಿಸಿಕೊಳ್ಳಲು ಯಶಸ್ವಿಯಾಗಿದ್ದರು. ಬೆಂಗಳೂರು ದರೋಡೆ ಪ್ರಕರಣದಲ್ಲಿ ಆರೋಪಿಗಳ ಸುಳಿವು ಲಭ್ಯವಾಗಿದೆ ಎನ್ನಲಾಗಿದೆ. ಆದರೆ ಯಾವುದೋ ರಾಜ್ಯದಿಂದ ಇಲ್ಲಿಗೆ ಬಂದು ದರೋಡೆ ನಡೆಸಲು ದುಷ್ಕರ್ಮಿಗಳಿಗೆ ಪ್ರೇರಣೆ ಏನು ಎನ್ನುವುದನ್ನು ಪತ್ತೆ ಮಾಡಬೇಕಾಗಿದೆ. ಪಾತಕಿಗಳಿಗೆ ಕರ್ನಾಟಕ ಸಾಫ್ಟ್ ಸ್ಟೇಟ್ ಎಂಬ ಭಾವನೆ ಇದ್ದಂತಿದೆ. ಈ ಭಾವನೆಯನ್ನು ಹೋಗಲಾಡಿಸಬೇಕಾದರೆ ಈಗಾಗಲೇ ಸಿಕ್ಕಿ ಬಿದ್ದ ಆರೋಪಿಗಳಿಗೆ, ಮುಂದೆ ಪಾಠವಾಗುವ ರೀತಿಯಲ್ಲಿ ಕಠಿಣ ಶಿಕ್ಷೆ ವಿಧಿಸಬೇಕು. ಮತ್ತೊಮ್ಮೆ ಇಂತಹ ಕೃತ್ಯ ಮರುಕಳಿಸದಂತೆ ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ಸೊಂಪಾದಕೀಯ

ಕುತ್ತಿಗೆಗೆ ಬಂತಾ?

ಭಾರತ ದಕ್ಷಿಣ ಆಫ್ರಿಕಾ ನಡುವಿನ ಮೊದಲ ಪಂದ್ಯದಲ್ಲಿ ಭಾರತ ಹೀನಾಯವಾಗಿ ಸೋತಿದ್ದಕ್ಕೆ ಈಗ ಎಲ್ಲರೂ ನಾಯಕ ಶುಭ್ಮನ್ ಗಿಲ್ ಮತ್ತು ಕೋಚ್ ಗಂಭೀರ ಅವರತ್ತ ಬೆರಳು ತೋರಿಸುತ್ತಿದ್ದಾರೆ. ಅದರಲ್ಲೂ ನಾಯಕ ಗಿಲ್ ಅಂತೂ ಡಬಲ್ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸ್ವೀಪ್ ಶಾಟ್ ಹೊಡೆಯಲು ಹೋಗಿ ಕುತ್ತಿಗೆ ತಿರುಚಿಕೊಂಡು ಅವರು ಈಗ ಆಸ್ಪತ್ರೆ ಪಾಲಾಗಿದ್ದಾರೆ. ಕಲ್ಕತ್ತಾ ದ ಪಿಚ್ ನಲ್ಲಿ ಟರ್ನ್ ಇತ್ತು, ನಿಜ ಆದರೆ ತೀರಾ ಗಿಲ್ ಅವರ ಕುತ್ತಿಗೆ ಟರ್ನ್ ಆಗುವಷ್ಟು ಇತ್ತಾ ಅನ್ನೋದು ಹಲವರ ಪ್ರಶ್ನೆ. ಆದರೆ ಈಗ ಅವರ ಕುತ್ತಿಗೆಯ ಟರ್ನ್‌ಗಿಂತ ಅವರು ತಂಡಕ್ಕೆ ರಿಟರ್ನ್ ಆಗುವ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿದೆ. ಮೊದಲ ಪಂದ್ಯದಲ್ಲಿ ಸೋತರೂ ನೆಕ್ ಟು ನೆಕ್' ಫೈಟ್ ಕೊಟ್ಟಿದೀವಮ್ಮ ಅಂತ ಗಿಲ್ ಹೇಳಿಕೊಳ್ಳಬಹುದು. ಆದರೆ ತಂಡದಲ್ಲಿ ಅವರ ಬಂಡವಾಳ ಈಗ ಬಯಲಾಗಿದೆ. ಆಲ್ ರೌಂಡರ್‌ಗಳ ಹೆಸರಲ್ಲಿ 15-20 ರನ್ ಹೊಡೆಯುವವರನ್ನು ತಂಡಕ್ಕೆ ತುಂಬಿಸಿಕೊಂಡು ಬ್ಯಾಟ್ಸ್ ಮನ್‌ಗಳ ಕೊರತೆ ಅನುಭವಿಸುತ್ತಿರುವ ಭಾರತ ತಂಡಕ್ಕೆ ಈಗ ಬ್ಯಾಟರ್‌ಗಳ ಅಗತ್ಯ ಇದೆ. ಅದರಲ್ಲೂ ಮುಂದಿನ ಪಂದ್ಯಕ್ಕೆ ಗಿಲ್ ಇಲ್ಲ ಅಂದ್ರೆ ಅವರ ಜಾಗಕ್ಕೆ ಯಾರು ಅನ್ನೋ ಪ್ರಶ್ನೆಯೂ ಇದೆ. ಇನ್ನು ಕೆಲವರು ಈಗಾಗಲೇ ಏಕದಿನ ಸರಣಿಗೆ ಮತ್ತೆ ರೋಹಿತ್ ಶರ್ಮಾ ಅವರನ್ನೇ ನಾಯಕರನ್ನಾಗಿ ಮಾಡಿ ಅಂತ ವರಸೆ ತೆಗೆದಿದ್ದಾರೆ. ಹಾಗಾಗಿ ಕುತ್ತಿಗೆಗೆ ಗಾಯ ಆಗಿರುವ ಗಿಲ್ ಅವರ ನಾಯಕತ್ವದ ವಿಷಯ ಈಗ ಅವರ ಕುತ್ತಿಗೆಗೆ ಬಂದಿದೆ ಎನ್ನಬಹುದು. ಇನ್ನು ಮುಂದಿನ ಟೆಸ್ಟ್ ಪಂದ್ಯದಲ್ಲಿ ರಿಷಬ್ ಪಂತ್ ನಾಯಕರಾಗುವ ಸಾಧ್ಯತೆಗಳಿವೆ. ಒಂದು ವೇಳೆ ಈ ಪಂಥಾಹ್ವಾನದಲ್ಲಿ ರಿಷಬ್ ಗೆದ್ದರೆ ಮುಂದೆ ಅವರೇ ಪರ್ಮನೆಂಟ್ ನಾಯಕರಾಗುತ್ತಾರಾ ಅನ್ನೋ ಅನುಮಾನಗಳೂ ಇವೆ. ಹಾಗಾದರೆ ಅಚ್ಚರಿ ಏನಿಲ್ಲ. ಯಾಕಂದ್ರೆ, ಗೌತಮ್ ಗಂಭೀರ್ ಅವರು ಕೋಚ್ ಆಗಿರುವಾಗ ಯಾರು ಬೇಕಾದರೂ ಏನು ಬೇಕಾದರೂ ಆಗಬಹುದು. ಆಡುವ ಬಳಗದ್ದೇ ಯಾರಿಗೂ ಕ್ಲಾರಿಟಿ ಇಲ್ಲದ ಈ ಸಮಯದಲ್ಲಿ ಗಂಭೀರ್ ಅವರು ಭಾರತ ತಂಡದ ವಿಷಯದಲ್ಲಿ ಗಂಭೀರವಾಗಿ ಯೋಚಿಸದೆ ಆಟ ಆಡುತ್ತಿದ್ದಾರೆ ಅನ್ನೋದಕ್ಕೆ ಉದಾಹರಣೆಯಂತೆ ದೇಶದ ಎಲ್ಲೆಡೆಯಿಂದ ಅವರಿಗೆ ವಿರೋಧ ವ್ಯಕ್ತವಾಗುತ್ತಿರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ವಿಮಾನದ ಬಾಗಿಲ ರಚನೆ

ವಿಮಾನದ ಬಾಗಿಲುಗಳು ಕೇವಲ ವಿಮಾನದೊಳಗೆ ಪ್ರವೇಶಿಸಲು ಮತ್ತು ಹೊರಬರಲು ಇರುವ ದಾರಿಗಳಲ್ಲ, ಅವು ವಿಮಾನಯಾನ ಸುರಕ್ಷತೆ, ವಿಮಾನದ ರಚನಾತ್ಮಕ ಸಮಗ್ರತೆ ಮತ್ತು ವಿಮಾನದ ಕಾರ್ಯಾಚರಣೆಯ ದಕ್ಷತೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ. ವಿಮಾನದ ಬಾಗಿಲುಗಳ ವಿನ್ಯಾಸವು ಕೇವಲ ಪ್ರಯಾಣಿಕರು ಒಳಬರುವುದು- ಹೊರಹೋಗುವುದನ್ನು ಗಮನದಲ್ಲಿರಿಕೊಂಡು ಮಾಡಿದ್ದಲ್ಲ. ಅದಕ್ಕಿಂತ ಹೆಚ್ಚಾಗಿದೆ. ಇದು ವಿಮಾನಯಾನ ಎಂಜಿನಿಯರಿಂಗ್‌ನ ಅತ್ಯಂತ ಸಂಕೀರ್ಣ ಮತ್ತು ನಿರ್ಣಾಯಕ ಅಂಶಗಳಲ್ಲಿ ಒಂದಾಗಿದೆ. ವಿಮಾನಗಳು ಹಾರುವ ಅತ್ಯಂತ ಎತ್ತರದಲ್ಲಿ, ಹೊರಗಿನ ವಾತಾವರಣದ ಒತ್ತಡ ಮತ್ತು ಆಮ್ಲಜನಕದ ಮಟ್ಟವು ಮಾನವನ ಜೀವನಕ್ಕೆ ಮಾರಕವಾಗಿರುತ್ತದೆ. ಈ ಸಮಸ್ಯೆಯನ್ನು ನಿಭಾಯಿಸಲು, ವಿಮಾನದ ಕ್ಯಾಬಿನ್ನೊಳಗಿನ ಗಾಳಿಯ ಒತ್ತಡವನ್ನು ಭೂಮಿಯ ಮೇಲಿನ ಒತ್ತಡಕ್ಕೆ ಹೋಲುವಂತೆ ಕೃತಕವಾಗಿ ಹೆಚ್ಚಿಸಬೇಕು ಮತ್ತು ಈ ನಿರ್ವಹಣೆಯಲ್ಲಿ ಬಾಗಿಲುಗಳ ವಿನ್ಯಾಸವು ಪ್ರಮುಖ ಪಾತ್ರ ವಹಿಸುತ್ತದೆ. ಸಮುದ್ರ ಮಟ್ಟದಿಂದ ಹತ್ತು ಸಾವಿರಾರ ಅಡಿಗಳಿಗಿಂತ (ಸುಮಾರು ಮೂರು ಸಾವಿರ ಮೀ) ಹೆಚ್ಚು ಎತ್ತರದಲ್ಲಿ, ಮಾನವ ದೇಹವು ವಾತಾವರಣದ ಒತ್ತಡ ಹಾಗೂ ಆಮ್ಲಜನಕದ ಕೊರತೆಯಿಂದಾಗಿ ಕಡಿಮೆಯಾಗುವುದರಿಂದ ತೊಂದರೆಗೊಳಗಾಗುತ್ತದೆ. ವಾಣಿಜ್ಯ ವಿಮಾನಗಳು ಸಾಮಾನ್ಯವಾಗಿ 30,000 ರಿಂದ 45,000 ಅಡಿಗಳ ಎತ್ತರದಲ್ಲಿ ಹಾರುತ್ತವೆ. ಈ ಎತ್ತರದಲ್ಲಿ, ಹೊರಗಿನ ಗಾಳಿಯ ಒತ್ತಡವು ಕ್ಯಾಬಿನ್ನೊಳಗಿನ ಒತ್ತಡಕ್ಕಿಂತ ಸುಮಾರು ನಾಲ್ಕರಿಂದ ಆರು ಪಟ್ಟು ಕಡಿಮೆ ಇರುತ್ತದೆ. ಪ್ರಯಾಣಿಕರು ಮತ್ತು ಸಿಬ್ಬಂದಿಗೆ ಆರಾಮದಾಯಕ ಮತ್ತು ಸುರಕ್ಷಿತವಾದ ಉಸಿರಾಟದ ವಾತಾವರಣವನ್ನು ಒದಗಿಸುವುದು. ಹೊರಗಿನ ಮತ್ತು ಒಳಗಿನ ಒತ್ತಡದ ನಡುವಿನ ವ್ಯತ್ಯಾಸವನ್ನು ನಿಭಾಯಿಸುವ ಸಾಮರ್ಥ್ಯವನ್ನು ವಿಮಾನದ ರಚನೆಗೆ ನೀಡುವುದು. ಈ ಒತ್ತಡದ ವ್ಯತ್ಯಾಸದಿಂದಾಗಿ, ವಿಮಾನದ ಬಾಗಿಲುಗಳು ಹೊರಗಿನ ಒತ್ತಡದ ಶಕ್ತಿ ಮತ್ತು ಕ್ಯಾಬಿನ್ನೊಳಗಿನ ಒತ್ತಡದ ಶಕ್ತಿಯೆರಡನ್ನೂ ನಿರ್ವಹಿಸಲು ವಿನ್ಯಾಸಗೊಳಿಸಬೇಕು. ಹೆಚ್ಚಿನ ಆಧುನಿಕ ವಿಮಾನಗಳಲ್ಲಿ, ವಿಶೇಷವಾಗಿ ಪ್ರಯಾಣಿಕರ ಪ್ರವೇಶಕ್ಕಾಗಿ, ಪ್ಲಗ್ ಡೋರ್ ವಿನ್ಯಾಸವನ್ನು ಬಳಸಲಾಗುತ್ತದೆ . ಇದು ಒತ್ತಡ ನಿರ್ವಹಣೆಗೆ ಅತ್ಯಂತ ಸುರಕ್ಷಿತ ಮತ್ತು ಪ್ರಬಲ ಪರಿಹಾರವಾಗಿದೆ. ಪ್ಲಗ್ ಡೋರ್ ವಿನ್ಯಾಸವು ಬಾಗಿಲು ವಿಮಾನದ ಫ್ರೇಮ್‌ಗಿಂತ ಸ್ವಲ್ಪ ದೊಡ್ಡದಾಗಿರುತ್ತದೆ ಮತ್ತು ಒಳಗಿನಿಂದ ಮುಚ್ಚಿದಾಗ, ಅದು ಕ್ಯಾಬಿನ್ನ ಫ್ರೇಮ್‌ಗೆ ಸರಿಯಾಗಿ ಅಳವಡಿಸುತ್ತದೆ. ವಿಮಾನವು ಹಾರಾಟದ ಎತ್ತರಕ್ಕೆ ಏರಿದಾಗ ಮತ್ತು ಕ್ಯಾಬಿನ್ ಒತ್ತಡ ಹೆಚ್ಚಾದಾಗ, ಈ ಒತ್ತಡವು ಬಾಗಿಲನ್ನು ಹೊರಗೆ ತಳ್ಳುವ ಬದಲು, ಅದನ್ನು ಫ್ರೇಮ್‌ಗೆ ಇನ್ನೂ ಬಿಗಿಯಾಗಿ ಮತ್ತು ದೃಢವಾಗಿ ತಳ್ಳುತ್ತದೆ. ಇದರರ್ಥ ಒತ್ತಡದಲ್ಲಿರುವಾಗ, ಮಾನವ ಹಸ್ತಕ್ಷೇಪವಿಲ್ಲದೇ ಬಾಗಿಲು ಸ್ವತಃ ಲಾಕ್ ಆಗಿರುತ್ತದೆ. ಬಾಗಿಲನ್ನು ತೆರೆಯಲು, ಕ್ಯಾಬಿನ್ನೊಳಗಿನ ಮತ್ತು ಹೊರಗಿನ ಒತ್ತಡವು ಬಹುತೇಕ ಸಮನಾಗಿರಬೇಕು. ಬಾಗಿಲಿನ ಅಂಚುಗಳ ಸುತ್ತಲೂ ಇರುವ ದಪ್ಪವಾದ ರಬ್ಬರ್ ಅಥವಾ ಸಿಲಿಕೋನ್ ಸೀಲ್‌ಗಳು (Seals) ನಿರ್ಣಾಯಕ ಪಾತ್ರ ವಹಿಸುತ್ತವೆ. ಒತ್ತಡದ ಕಾರಣದಿಂದಾಗಿ ಬಾಗಿಲು ಫ್ರೇಮ್‌ಗೆ ಬಿಗಿಯಾಗಿ ಒತ್ತಿದಾಗ, ಈ ಸೀಲ್‌ಗಳು ವಾಯುಪ್ರವೇಶವಿಲ್ಲದ (Airtight) ಬಂಧವನ್ನು ಸೃಷ್ಟಿಸುತ್ತವೆ, ಕ್ಯಾಬಿನ್ ಗಾಳಿಯು ಹೊರಗೆ ಸೋರಿಕೆಯಾಗದಂತೆ ತಡೆಯುತ್ತವೆ. ಪ್ಲಗ್ ಡೋರ್ ತತ್ವಕ್ಕೆ ಪೂರಕವಾಗಿ, ವಿಮಾನದ ಬಾಗಿಲುಗಳು ಯಾಂತ್ರಿಕ ಮತ್ತು ಎಲೆಕ್ಟ್ರಾನಿಕ್ ಸುರಕ್ಷತಾ ಬೀಗಗಳನ್ನು ಹೊಂದಿರುತ್ತವೆ. ವಿಮಾನವು ನೆಲದ ಮೇಲೆ ಇಲ್ಲದಿದ್ದರೆ (ಉದಾಹರಣೆಗೆ, ವೇಗ ನಿರ್ದಿಷ್ಟ ಮಿತಿಯನ್ನು ಮೀರಿದಾಗ) ಅಥವಾ ಕ್ಯಾಬಿನ್ನೊಳಗಿನ ಒತ್ತಡವು ಸುರಕ್ಷಿತ ಮಟ್ಟವನ್ನು ಮೀರಿದಾಗ, ಈ ವ್ಯವಸ್ಥೆಯು ಬಾಗಿಲಿನ ಹ್ಯಾಂಡಲ್ ಅನ್ನು ಸಂಪೂರ್ಣವಾಗಿ ತಿರುಗಿಸಲು ಮತ್ತು ಬಾಗಿಲನ್ನು ತೆರೆಯಲು ಅವಕಾಶ ನೀಡುವುದಿಲ್ಲ. ಇದು ಹಾರಾಟದ ಸಮಯದಲ್ಲಿ ಆಕಸ್ಮಿಕವಾಗಿ ಬಾಗಿಲು ತೆರೆಯುವುದನ್ನು ಖಚಿತವಾಗಿ ತಡೆಯುತ್ತದೆ. ತುರ್ತು ನಿರ್ಗಮನ ಬಾಗಿಲುಗಳು (Emergency Exit Doors) ಸಹ ಒತ್ತಡದ ವಿನ್ಯಾಸ ವನ್ನು ಬಳಸುತ್ತವೆ. ಆದರೆ ಅವು ತುರ್ತು ಪರಿಸ್ಥಿತಿಯಲ್ಲಿ ತ್ವರಿತವಾಗಿ ತೆರೆಯುವ ಸಾಮರ್ಥ್ಯವನ್ನು ಸಹ ಹೊಂದಿರಬೇಕು. ಈ ವ್ಯವಸ್ಥೆಯನ್ನೂ ಬಾಗಿಲುಗಳು ಹೊಂದಿರುತ್ತವೆ.

ನಾವೇಕೆ ಎಲ್ಲದಕ್ಕೂ ಈ ಪರಿ ಹೆಸರಿಡುತ್ತೇವೆ?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಯಾವುದೋ ಅನ್ಯಗ್ರಹ ಜೀವಿಗಳು ಭೂಮಿಯಿಂದ ಸ್ವಲ್ಪ ಮೇಲೆ ನಿಂತು ನಮ್ಮನ್ನೆಲ್ಲ ಗ್ರಹಿಸುತ್ತಿವೆ ಎಂದುಕೊಳ್ಳಿ. ಮೊದಲನೆಯದಾಗಿ ಅವಕ್ಕೆ ನಮ್ಮ ವ್ಯವಹಾರ, ಗುಣ ಎಲ್ಲ ಅರ್ಥವಾಗಬೇಕೆಂದರೆ ಸುಲಭವಿಲ್ಲ. ಅವು ನಮಗಿಂತ ಹತ್ತು ಪಟ್ಟು ಹೆಚ್ಚಿನ ಬುದ್ಧಿವಂತಿಕೆ ಹೊಂದಿದ್ದರೂ ಪೂರ್ಣ ಅರ್ಥವಾಗಲಿಕ್ಕಿಲ್ಲ, ಗೊಂದಲವಂತೂ ಪಕ್ಕಾ. ನಾವು ನೀವು ಜೇನಿನ ಡಬ್ಬಿ ತೆಗೆದು ಅದರೊಳಗಿನ ಜೇನಿನ ಹುಳುಗಳ ವ್ಯವಹಾರ ನೋಡಿದ ರೀತಿ ಆದೀತು. ಕಾಲ್ಪನಿಕ ಗೆರೆಯೆಳೆದು ಅದನ್ನು ದೇಶವೆನ್ನುವ ; ಜಾತಿ, ಧರ್ಮ, ಸಿದ್ಧಾಂತ, ಇಂತಹ ಪ್ರತ್ಯೇಕಿಸಿಕೊಳ್ಳುವ ವ್ಯವಹಾರ, ಯುದ್ಧ ಇವೆಲ್ಲ ಅವುಗಳ ಪಿಎಚ್‌ಡಿ ಪ್ರಬಂಧವಾಗಬಹುದು. ಅವುಗಳಿಗೆ ಕೆಲವೊಂದು ಚಿಕ್ಕಪುಟ್ಟ ವ್ಯವಹಾರ ಕೂಡ ಬಹಳ ವಿಚಿತ್ರವೆನಿಸಬಹುದು. ಉದಾಹರಣೆಗೆ ಗಡಿಯಾರ, ಮೊಬೈಲ್ ಇತ್ಯಾದಿ. ಇಡೀ ಮನುಷ್ಯ ಕುಲ ಎದ್ದೇಳುವುದು, ಸ್ನಾನಕ್ಕೆ ಹೊರಡುವುದು, ಊಟ ಮಾಡುವುದು, ಮಲಗುವುದು ಸಂಪೂರ್ಣ ಈ ಚಿಕ್ಕ ಎರಡು ಮೂರು ಮುಳ್ಳಿರುವ, ಸುತ್ತು ಸುತ್ತುವ ಯಂತ್ರವೇ ನಿಯಂತ್ರಿಸುತ್ತದೆ! ಅಷ್ಟೇ ಅಲ್ಲ, ಯಾವಾಗ ಸಂತೋಷದಿಂದಿರುವುದು (ವಾರಾಂತ್ಯ) ಮತ್ತು ಯಾವಾಗ ಬೇಸರದಲ್ಲಿರಬೇಕು ಎಂದು ನಿರ್ಧರಿಸುವುದೂ ಇದೇ.

ಇದರ ಜೊತೆಯಲ್ಲಿ ಎಲ್ಲರ ಕೈಯಲ್ಲೂ ಹೊಳೆಯುವ ಆಯತಾಕಾರದ ವಸ್ತು. ಯಾವುದೇ ಸಮಯದಲ್ಲಿ ನೂರಾರು ಕೋಟಿ ಮನುಷ್ಯರು ತಲೆಬಾಗಿ ಇದನ್ನೇ ದಿಟ್ಟಿಸುತ್ತ, ತೀಡುತ್ತಿರುತ್ತಾರೆ. ಯಾವಾಗಲೆಲ್ಲ ಈ ಪ್ರಕ್ರಿಯೆ ನಡೆಯುತ್ತದೆಯೋ ಆಗೆಲ್ಲ ಆ ಮನುಷ್ಯ ಸಿಟ್ಟು, ಖುಷಿ, ದುಃಖ, ಅಸೂಯೆ, ಯಾವುದೋ ಒಂದು ಭಾವವನ್ನು ಕೂತಲ್ಲಿಯೇ, ಅರೆಕ್ಷಣದಲ್ಲಿ ಹೊಂದಿಬಿಡಬಹುದು. ಮನುಷ್ಯ ತನ್ನದೇ ಆವಿಷ್ಕಾರಗಳ ಸಂಪೂರ್ಣ ಅಡಿಯಾಳಾಗಿಬಿಟ್ಟಿದ್ದಾನೆ ಎಂದು ತೀರ್ಪು ನೀಡಲು ಏಲಿಯನ್ ಗಳಿಗೆ ಇವೆರಡೇ ವಿಷಯ ವಸ್ತು ಸಾಕು.

ದಯೆ, ಕ್ರೌರ್ಯ, ಆವಿಷ್ಕಾರ, ವಿನಾಶ, ಬುದ್ಧಿವಂತಿಕೆ, ದಡ್ಡತನ ಇಂತಹ ವಿರೋಧಾಭಾಸಗಳನ್ನೆಲ್ಲ ಕಂಡು ಅವಕ್ಕೆ ಮನುಷ್ಯ ನಿಜವಾಗಿಯೂ ಮುಂದುವರಿದ ಪ್ರಭೇಧವೇ ಎಂಬುದರ ಬಗ್ಗೆಯೆ ಅನುಮಾನ ಬರುವುದು, ಅವುಗಳಲ್ಲಿಯೇ ಚರ್ಚೆ ವಾಗ್ವಾದಗಳಾಗುವುದಂತೂ ಊಹಾತೀತವಲ್ಲ. ಅದೆಲ್ಲ ಬಿಡಿ - ಅವುಗಳಿಗೆ ನಮ್ಮ ಕೆಲವು ತೀರಾ ಸಹಜವೆನ್ನುವ ವ್ಯವಹಾರ ಕೂಡ ಅತ್ಯಂತ ವಿಚಿತ್ರವೇ ಅನ್ನಿಸಬಹುದು ಅಲ್ಲವೇ? ಅಂಥದ್ದೇ ಒಂದು ವಿಷಯ- ಮನುಷ್ಯನ ಹೆಸರಿಡುವ ಗೀಳಿನ ಬಗ್ಗೆ. ಅದೆಷ್ಟೋ ಶತಮಾನಗಳಿಂದ ಇದೊಂದು ಗಮನಾರ್ಹ ಕೆಲಸವನ್ನು ನಾವು ಮನುಷ್ಯರು ಮಾಡಿಕೊಂಡು ಬಂದಿದ್ದೇವೆ. ಕಂಡಕಂಡದ್ದಕ್ಕೆಲ್ಲ ಹೆಸರಿಡುವ ಕೆಲಸ. ಏಲಿಯನ್ನರಂತೆ ಸ್ವಲ್ಪ ಹೊತ್ತು ಮನುಷ್ಯ ಪರಿಧಿಯಾಚೆ ನಿಂತು ಈ ನಮ್ಮ ವ್ಯವಹಾರವನ್ನು ಇವತ್ತು ಸ್ವಲ್ಪ ಗಮನಿಸೋಣ.

ಚರ- ಅಚರ ಯಾವುದೇ ಇರಲಿ - ಮೊದಲು ಅದಕ್ಕೊಂದು ಹೆಸರಿಟ್ಟೇ ನಮ್ಮ ವ್ಯವಹಾರ ಆರಂಭ. ಯಾವುದನ್ನೇ ನಮ್ಮ ಮನುಷ್ಯ ಸಮಾಜದ ವರ್ತುಲದೊಳಕ್ಕೆ ತರಬೇಕೆಂದರೆ ಅದಕ್ಕೆ ಆಗಬೇಕಾದ ಮೊದಲ ಕೆಲಸ ನಾಮಕರಣ. ಅಪ್ಪ ಅಮ್ಮ ಮಗುವಿಗೆ ಇಡುವ ಹೆಸರು, ಪ್ರಿಯತಮೆಗೆ ಪ್ರಿಯತಮ ಇಡುವ ಮುದ್ದು ಹೆಸರು, ಅಜ್ಜಿ (ತನ್ನ ಗಂಡನ ಹೆಸರಿಟ್ಟುಕೊಂಡ ಮೊಮ್ಮಗನಿಗೆ) ಕರೆಯುವ ಬದಲಿ ಹೆಸರು ಹೀಗೆ ಬಹುತೇಕರಿಗೆ ಒಂದಕ್ಕಿಂತ ಜಾಸ್ತಿ ಹೆಸರು ಬಳಕೆಯಲ್ಲಿರುತ್ತದೆ.

ಅಸಲಿಗೆ 'ಹೆಸರು' ಎಂದರೇನು? ಒಂದು ಅನನ್ಯ ಶಬ್ದ -ಧ್ವನಿ. ಬಾಯಿಂದ ಹೊರಡಿಸುವ ಒಂದು ಸದ್ದು sound. ಅದನ್ನು ಚಿಕ್ಕ ಮಗುವಿಗೆ ಕಿವಿಯಲ್ಲಿ ಹೇಳಿ ಕರೆಯುವುದು - ನಾಮ ಸಂಸ್ಕಾರ. ಅಲ್ಲಿಂದ ಮುಂದೆ ಆ ಮಗುವಿಗೆ ಅದನ್ನೇ ಕರೆದು ಕರೆದು ಕ್ರಮೇಣ ಆ ಸದ್ದೇ ನಾನು, ಅದು ನನ್ನ ಗಮನವನ್ನು ಸೆಳೆಯಲು, ಸಂಬೋಧಿಸಲು ಬಳಸುವ ಸದ್ದು ಎನ್ನುವುದು ಮಗುವಿಗೆ ಮನದಟ್ಟಾಗುತ್ತದೆ. ಆಮೇಲೆ ಆ ಹೆಸರಿಟ್ಟು ಕರೆದಾಗಲೆಲ್ಲ ಮಗು ತಿರುಗಿ ನೋಡಲು ಆರಂಭಿಸುತ್ತದೆ. ಮಗು ಮೊದಲ ಬಾರಿ ಹೆಸರಿಗೆ ಸ್ಪಂದಿಸಿದಾಗ ಅಪ್ಪ ಅಮ್ಮನಿಗೆ ಆಗುವ ಖುಷಿ ಅಷ್ಟಿಷ್ಟಲ್ಲ. ಮಗು ಈ ಗಂಟಲಿನ ಸದ್ದನ್ನು ಗುರುತಿಸುತ್ತಿದೆ ಎಂಬುದು ಸಣ್ಣ ವಿಷಯವಲ್ಲ! ಆದರೆ ಆಮೇಲೆ, ಬೆಳೆದಂತೆಲ್ಲ ಆ ಒಂದು ಗಂಟಲಿನ ಸದ್ದಿಗೆ ನಾವು ಕೊಡುವ ಮಹತ್ವವಿದೆಯಲ್ಲ! ಪರಮಾತ್ಮಾ.

ನಾವು ನಾಯಿ, ಆಕಳು - ಸಾಕು ಪ್ರಾಣಿಗಳಿಗೆ ಕೂಡ ಹೆಸರಿಟ್ಟುಕೊಂಡಿರುತ್ತೇವಲ್ಲ. ಕೊಡಗು, ಮಡಿಕೇರಿ, ವಿರಾಜಪೇಟೆ ಕಡೆ ಬಹುತೇಕ ನಾಯಿಗೆ ಟಿಪ್ಪು ಎಂದೇ ಹೆಸರಿಡುವುದು. ಟಿಪ್ಪು ಸುಲ್ತಾನ್ ಆ ನೆಲದಲ್ಲಿ ನಡೆಸಿದ ನರಮೇಧ, ಅದರ ಪರಿಣಾಮ ಇತ್ಯಾದಿ ಇಷ್ಟು ತಲೆಮಾರು ಕಳೆದರೂ ಹಸಿಯಾಗಿಯೇ ಅಲ್ಲಿನ ಜನಮಾನಸದಲ್ಲಿದೆ. ಯೋಚಿಸಿದರೆ ಮೈನಡುಗುವಷ್ಟು ವಿಕೃತಿ ಟಿಪ್ಪುವಿನದು. ಆದರೆ ಅದೆಲ್ಲದರ ನಡುವೆ ಅಲ್ಲಿನ ಬಹುತೇಕ ನಾಯಿಗೆ ಟಿಪ್ಪು' ಎಂಬ ಹೆಸರು. ಕೊಡಗಿನಲ್ಲಷ್ಟೇ ಅಲ್ಲ ಕರ್ನಾಟಕದ ಬಹಳಷ್ಟು ಕಡೆ, ಕರಾವಳಿ ಭಾಗದ ದಕ್ಷಿಣ ಕನ್ನಡ , ಉಡುಪಿ, ಉತ್ತರಕನ್ನಡ ಅಲ್ಲೆಲ್ಲ ಪ್ರತೀ ನಾಲ್ಕನೇ ನಾಯಿಯ ಹೆಸರು 'ಟಿಪ್ಪು'. ನಮ್ಮ ಮನೆಯಲ್ಲೂ 'ಟಿಪ್ಪು' ಇತ್ತು. ನಾಯಿಯ ಹೆಸರಿಗೂ ಇತಿಹಾಸ. ನೀವು ನಾಯಿಯನ್ನು ಟಿಪ್ಪು ಅನ್ನಿ, ಟಾಮಿ ಅನ್ನಿ. ನಾಯಿಗೆ ಅದು ತನ್ನ ಹೆಸರು ಎಂಬ ಅರಿವಾಗಿದೆಯಲ್ಲ. ಆಕಳಿಗೆ ಬೆಳ್ಳಿ, ಶುಕ್ರಿ, ಕುಳ್ಳಿ - ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು ರೀತಿ ಹೆಸರಿಡುತ್ತಾರೆ. ಅವೆಲ್ಲವೂ ಮನುಷ್ಯರಂತೆ ತಮ್ಮ ಹೆಸರನ್ನು ಗುರುತಿಸಿಕೊಂಡಿವೆಯಲ್ಲ, ಅವೇನಾದರೂ ಬೇಲಿ ಹಾರುವಾಗ ' ಕಮೋನ್ ' ಎಂದು ನಮ್ಮಂತೆ ಹೆಸರಿಟ್ಟು ಧೈರ್ಯ ತುಂಬಿಕೊಳ್ಳುತ್ತವೆಯೇ? ಗೊತ್ತಿಲ್ಲ. ಆಕಳಿಗಂತೂ ಅದೇ ಶಬ್ದ ತನ್ನ ಹೆಸರೆಂಬುದು ಗೊತ್ತು. ಅಂತೆಯೇ ಆಕಳು ಕೂಡ ಅದರದೇ ಒಂದು ಅನನ್ಯ ಶಬ್ದದಿಂದ ತನ್ನ ವಾರಸುದಾರರನ್ನು ಕರೆಯುತ್ತದೆ. ಅದು ಆ ಸಾಕಿದವರಿಗೆ ಸ್ಪಷ್ಟ ಗೊತ್ತಿರುತ್ತದೆ. ಅದೇ ಅತ್ತ ಅಮೆರಿಕಾದ ಡೈರಿ ಫಾರ್ಮ್ ಗಳಲ್ಲಿ - ಹೆಸರಿನ ಬದಲಿಗೆ ಒಂದು ಸಂಖ್ಯೆ - ರೋಲ್ ನಂಬರ್ ಒಂದು ಪ್ಲಾಸ್ಟಿಕ್ ಹಳೆಯಮೇಲೆ ಅಚ್ಚು ಮಾಡಿ ಅದನ್ನು ಕಿವಿಗೆ ಸುರಿಯಲಾಗುತ್ತದೆ. ಅಲ್ಲಿ ಆ ಆಕಳಿಗೆ ಹೆಸರಿಲ್ಲ, ಮನುಷ್ಯ ಸಂಬಂಧದ ಪರಿಧಿಯಾಚೆ ಹೆಸರು ಮರೆಯಾಗುತ್ತದೆ.

ನದಿಗೆ, ಕೆರೆಗೆ, ಹಳ್ಳಕ್ಕೆ, ಕಾಡಿಗೆ, ಗುಡ್ಡಕ್ಕೆ ಎಲ್ಲದಕ್ಕೂ ಹೆಸರಿಡುತ್ತೇವೆ. ಹರಿಯುವ, ಶೇಖರಣೆಯಾದ ನೀರು, ಭೂಮೇಲ್ಮೈನ ಉಬ್ಬು ತಗ್ಗುಗಳು, ಸಮುದ್ರ, ಸಾಗರಗಳು. ಅವಕ್ಕೆಲ್ಲ ಒಂದು ಪ್ರಾಶಸ್ತ್ಯವಿದೆ. ಉದಾಹರಣೆಗೆ ಗಂಗಾ', ಕಾವೇರಿ' ನದಿಯ ಹೆಸರೇ ಮನುಷ್ಯನ ಹೆಸರಾಗಿಸಿಕೊಳ್ಳುತ್ತೇವೆ. ಅದೆಲ್ಲ ಬಿಡಿ - ಒಂದು ದಿವಸದ ಹಿಂದೆ ಇಲ್ಲದ ಸೈಕ್ಲೋನ್, ಬಿರುಗಾಳಿ, ಸುಂಟರಗಳಿಗೆಲ್ಲ ಅದು ಹುಟ್ಟುವುದಕ್ಕಿಂತ ಮೊದಲೇ ಹೆಸರಿಡಲಾಗುತ್ತದೆ. ಅಮೆರಿಕಾದಲ್ಲಿ ಮಗು ಗಂಡೋ ಹೆಣ್ಣೋ ಮೊದಲೇ ತಿಳಿಯಲು ಅನುಮತಿಯಿದೆ. ಹಾಗಾಗಿ ಇಲ್ಲಿ ಹುಟ್ಟುವುದಕ್ಕಿಂತ ಮೊದಲೇ ಹೆಸರು ನಿರ್ಧಾರವಾಗಿರುತ್ತದೆ. ಚಂಡಮಾರುತಗಳಂತೆ. ಅಮೆರಿಕಾದಲ್ಲಿ ಚಂಡಮಾರುತಗಳು ಜಾಸ್ತಿ - ವರ್ಷಕ್ಕೆ ಹತ್ತಿಪ್ಪತ್ತು. ಅದೆಲ್ಲದಕ್ಕೂ ಒಂದೊಂದು ಹೆಸರಿಡಲಾಗುತ್ತದೆ. ಅದರಲ್ಲಿಯೇ ಮಹಾ ಹೊಡೆತ ಕೊಟ್ಟ ಹರಿಕೇನ್ ಸ್ಯಾಂಡಿ ಇತ್ಯಾದಿ ಇತಿಹಾಸ ಸೇರಿದ ಕುಖ್ಯಾತ ಹೆಸರುಗಳು. ಈಗೀಗ ನಮ್ಮಲ್ಲಿ, ಕರಾವಳಿಯ ಮಾನ್ಸೂನ್ ಮಾರುತಗಳಿಗೂ ಹೆಸರಿಡಲಾಗುತ್ತಿದೆ.

ದೇಶ, ರಾಜ್ಯ, ಊರು, ಕೇರಿ, ಮನೆ, ರಸ್ತೆಗಳು, ಕಟ್ಟಡಗಳು, ಕಂಪನಿ, ಉತ್ಪನ್ನಗಳು, ಸೇತುವೆ, ಸ್ಮಾರಕಗಳು, ಮೈದಾನ, ಪುಸ್ತಕ, ಅಂಕಣ, ಹಾಡು, ಚಲನಚಿತ್ರ, ನಮ್ಮ ಭಾವನೆಗಳಿಗೆ, ಅನುಭವಕ್ಕೆ, ಹೆದರಿಕೆಗೆ, ಫೋಬಿಯಾ, ಮಾನಸಿಕ ಸ್ಥಿತಿ, ಧರ್ಮ, ಅವ್ಯಕ್ತ ಶಕ್ತಿ - ದೇವರು, ರಾಜಕೀಯ ಸಿದ್ಧಾಂತ, ಪಂಗಡ, ಕ್ರಾಂತಿ, ದಂಗೆ, ಯುದ್ಧ, ಒಪ್ಪಂದಗಳು, ರೋಗ, ಸಾಂಕ್ರಾಮಿಕ, ಆವಿಷ್ಕಾರಗಳು. ಥೋ, ಎಲ್ಲೆಲ್ಲೂ ಹೆಸರೇ ಹೆಸರು, ಎಲ್ಲದಕ್ಕೂ ಒಂದೊಂದು ಹೆಸರು. ಭಾಷೆ - ಕರ್ತೃ, ಕರ್ಮ, ಕ್ರಿಯಾಪದಗಳೂ ಮೂಲದಲ್ಲಿ ಹೆಸರುಗಳೇ. ಅದೆಲ್ಲ ಬಿಡಿ - ಭೂಮಿಯಿಂದಾಚೆ ಇರುವ ಚಂದ್ರ, ಸೂರ್ಯ, ನಕ್ಷತ್ರಗಳಿಗೂ ಹೆಸರಿಟ್ಟಿದ್ದೇವೆ. ನವಗ್ರಹಗಳಿಗೆ, ಅಶ್ವಿನಿ, ಭರಣಿ ಎಂದು ಸುಮಾರು 27 ಮಹತ್ವದ ನಕ್ಷತ್ರಗಳಿಗೆ ವೇದಕಾಲಕ್ಕಿಂತ ಮುಂಚೆಯೇ ಹೆಸರಿಡಲಾಗಿತ್ತು. ಸೌರಮಂಡಲದ 891 ಸಹಜ ಉಪಗ್ರಹಗಳು, 20 ಸಾವಿರ ಕ್ಷುದ್ರಗ್ರಹಗಳಿಗೆ, 3 ಸಾವಿರ ಧೂಮಕೇತುಗಳಿಗೆ, ಸುಮಾರು 10 ಸಾವಿರ ನಕ್ಷತ್ರಗಳಿಗೆ ಸಂಖ್ಯೆ ಅಲ್ಲ- ಹೆಸರೇ ಇದೆ. ಇನ್ನು ನಕ್ಷತ್ರ ಪುಂಜ - ರಾಶಿಗೂ ಒಂದೊಂದು ಹೆಸರು. ಹೆಸರಷ್ಟೇ ಅಲ್ಲ - ಹೆಸರಿನ ಜೊತೆ ನಂಬಿಕೆ ಮತ್ತು ಕಥೆಗಳು.

ಭಾರತದಲ್ಲಿ ಮನುಷ್ಯರಿಗಿಟ್ಟುಕೊಳ್ಳುವ ಹೆಸರಿನ ವೈವಿಧ್ಯ ನಮಗೆಲ್ಲ ತಿಳಿದದ್ದೇ. ನಾಮಕರಣವೆಂಬುದು ಹದಿನಾರು ಸಂಸ್ಕಾರಗಳಲ್ಲಿ ಒಂದು. ನಮ್ಮಲ್ಲಿ ದೇವರ ಹೆಸರಷ್ಟೇ ಅಲ್ಲ, ಪ್ರಕೃತಿ, ವಾತಾವರಣದ್ದೆಲ್ಲ ಹೆಸರಿಟ್ಟುಕೊಳ್ಳುತ್ತೇವೆ. ಶಿಶಿರನಿಗೂ ಶಿಶಿರಕಾಲಕ್ಕೂ ಸಂಬಂಧವಿರಬೇಕೆಂದಿಲ್ಲ. ಹೇಮಂತ, ಶರತ್ ಇವೆಲ್ಲ ವಾರ್ಷಿಕ ಮರುಕಳಿಸುವ ವಾತಾವರಣ ಸ್ಥಿತಿ. ಇನ್ನು ಸತ್ಯ, ದಯಾ, ವೀರ, ಸಹನಾ ಇವೆಲ್ಲ ಸದ್ಗುಣಗಳ ಹೆಸರುಗಳು. ಮನುಷ್ಯ ನಿರ್ದಿಷ್ಟ ರೀತಿಯಲ್ಲಿ ಸಮಾಜಕ್ಕೆ ಒಪ್ಪಿಗೆಯಾಗುವಂತೆ ನಡೆಯುವ ರೀತಿಯೇ ಹೆಸರಾದದ್ದು. ತಮಿಳಿನಲ್ಲಿ ಸೆಲ್ವನ್' ಎಂದರೆ ಮಗ, ಸೆಲ್ವಿ' ಎಂದರೆ ಮಗಳು. ಅರುಲ್ ಸೆಲ್ವನ್, ಅರ್ಜುನ ಸೆಲ್ವನ್, ಜ್ಞಾನ ಸೆಲ್ವಿ, ತೇನಿಸೆಲ್ವಿ ಇತ್ಯಾದಿ. ಮಗ - ಮಗಳು ಎಂದು ಸೇರಿಸುವುದು ದಕ್ಷಿಣದಲ್ಲಾದರೆ ಅತ್ತ ಪಂಜಾಬಿನಲ್ಲಿ ಗುರುಪ್ರೀತ್ ಸಿಂಗ್ ಎಂದರೆ ಗಂಡು, ಗುರುಪ್ರೀತ್ ಕೌರ್ ಎಂದರೆ ಹೆಣ್ಣು. ಅದೇ ಹೆಸರಿನ ಮುಂದೆ ಲಿಂಗದ ಆರೋಪ. ಪಶ್ಚಿಮ ಬಂಗಾಳ - ಕೋಲ್ಕತಾ ಕಡೆ ಏನೇನೋ ಮುದ್ದು ಹೆಸರಿಟ್ಟುಕೊಂಡಿರುತ್ತಾರೆ. ಬುಬಾಯ್, ತುಂಪಾ, ಬುಂಬಾ ಇತ್ಯಾದಿ ಬಿದ್ದ ಹೆಸರುಗಳೇ ಅಸಲಿ ಹೆಸರಿಗಿಂತ ಜಾಸ್ತಿ ನಿತ್ಯವ್ಯವಹಾರದಲ್ಲಿ ಬಳಕೆಯಾಗುತ್ತಿರುತ್ತದೆ.

ನೇಟಿವ್ ಅಮೆರಿಕನ್ (ರೆಡ್ ಇಂಡಿಯನ್ಸ್) ಜನರಲ್ಲಿ ಒಂದು ವಿಚಿತ್ರ ಪದ್ಧತಿಯಿದೆ. ಅಲ್ಲಿ ಮಗು ಹುಟ್ಟಿದಾಗ ಒಂದು ಹೆಸರಿಡಲಾಗುತ್ತದೆ - ಉದಾಹರಣೆಗೆ Kangi Wichakca ಇದರರ್ಥ 'ಮುದ್ದಾದ ಮರಿ ಕಾಗೆ'. ಆ ಮಗು ದೊಡ್ಡವನಾಗಿ ಏನೋ ಒಂದು ಸಾಹಸ ಮಾಡಿದನೆಂದುಕೊಳ್ಳಿ - ಉದಾಹರಣೆಗೆ ಯಾರನ್ನೋ ಗಂಡಾಂತರದಿಂದ ರಕ್ಷಿಸಿದ ಎಂದಾದಲ್ಲಿ ಆ ರೆಡ್ ಇಂಡಿಯನ್ ಕುಲದ ಮುಖ್ಯಸ್ಥ ಅವನಿಗೆ ಮರುನಾಮಕರಣ ಮಾಡುತ್ತಾನೆ. ಅಲ್ಲಿಂದ ಮುಂದೆ ಅವನ ಹೆಸರು Thasina Luta - ಮಹಾನ್ ರಕ್ಷಕ. ಎಲ್ಲರೂ ಅವನನ್ನು ಅಲ್ಲಿಂದ ಹಾಗೆಯೇ ಕರೆಯುವುದು. ಹಾಗೆ ಮರುನಾಮಕರಣವಾದ ಮೇಲೆ ಹಳೆಯ ಹೆಸರನ್ನು ಕರೆಯುವುದು ಅಶುಭವೆಂಬ ನಂಬಿಕೆ. ಹಾಗಾಗಿ ಹಳೆಯ ಹೆಸರು ಸಂಪೂರ್ಣ ಬಿಟ್ಟಂತೆ. ವ್ಯಕ್ತಿ ಮಧ್ಯವಯಸ್ಸಿನಲ್ಲಿ ಹೊಸ ಹೆಸರನ್ನು ರೂಢಿಸಿಕೊಳ್ಳಬೇಕು. ನಮ್ಮ ಕರಾವಳಿ ಕೊಂಕಣಿಗರಲ್ಲಿ ಹೆಣ್ಣು ಮದುವೆಯಾಗುವಾಗ ಗಂಡನಮನೆಯಲ್ಲಿ ಹೊಸ ಹೆಸರು ಪಡೆವಂತೆ. ಇಲ್ಲಿ ಹೆಸರು ಸ್ಥಿರವಲ್ಲ - ಒಂದು ಘಟನೆಯ ನಂತರ ಪಡೆದುಕೊಂಡದ್ದು.

ಚೀನಿಯರ ಹೆಸರುಗಳನ್ನು ಕೇಳಿದಲ್ಲಿ ಅವರ ಹೆಸರಲ್ಲ ಚಿತ್ರವಿಚಿತ್ರ ಸದ್ದುಗಳಂತೆ ನಮಗನಿಸುತ್ತದೆ. ಆದರೆ ಅಲ್ಲಿ ಕೂಡ ನಮ್ಮಂತೆ ನಾಮ ವಿಶೇಷತೆಗಳಿವೆ, ನೂರಾರು ರೂಢಿ ಪದ್ಧತಿಗಳಿವೆ. ಅದರಲ್ಲಿ ಒಂದು ವಿಶೇಷ ಪದ್ಧತಿಯ ಬಗ್ಗೆ ನನಗೆ ಹೇಳಿದ್ದು ಚೀನಾದ ಸಹವರ್ತಿ - ಸ್ನೇಹಿತೆ. ಜೆಜಿಂಗ್, ಗೌಂಗ್ಡಾಂಗ್ ಪ್ರಾಂತ್ಯದಲ್ಲಿ ಈ ಪದ್ಧತಿ ಹೆಚ್ಚಂತೆ. ಕುಟುಂಬದವರೆಲ್ಲ ಸೇರಿ ಒಂದು ತಲೆಮಾರಿಗೆ ಒಂದು ಶಬ್ದವನ್ನು ಹೆಸರಿನ ಜೊತೆ ಸೇರಿಸಿ ಇಡುವಂತೆ ನಿರ್ಧರಿಸುವುದು. ಉದಾಹರಣೆಗೆ ಒಂದು ಕುಟುಂಬ ಒಂದು ತಲೆಮಾರಿನ ಮಕ್ಕಳಿಗೆ 'ಮಿಂಗ್' ಎಂಬ ಹೆಸರಿಡಲು ನಿರ್ಧರಿಸಿದಲ್ಲಿ ಹುಟ್ಟಿದವರ ಹೆಸರು ಮಿಂಗ್ ವೀ, ಮಿಂಗ್ ತಾವೋ, ಮಿಂಗ್ ಹುವಾ, ಮಿಂಗ್ ಚೀ ಹೀಗೆ. ದೊಡ್ಡಪ್ಪ ಚಿಕ್ಕಪ್ಪ ನ ಮಕ್ಕಳ ಹೆಸರಿನಲ್ಲಿ 'ಮಿಂಗ್'. ಹೆಸರು ಮನುಷ್ಯನನ್ನು ಜೋಡಿಸುತ್ತದೆ, ಪ್ರತ್ಯೇಕಿಸುತ್ತದೆ. ಇಲ್ಲಿ ಮಿಂಗ್ ಎಂಬ ಶಬ್ದ ಅವರೆಲ್ಲಿ ಸಹೋದರ ಸಹೋದರಿಯ ಭಾವ ಹೆಸರಿನಿಂದಲೇ ಜಾಗೃತವಾಗಿಡುತ್ತದೆ.

ತಂತ್ರಜ್ಞಾನದಿಂದಾಗಿ ಇತ್ತೀಚೆಗೆ ಇನ್ನೊಂದು ಹೆಸರು ಸೇರಿಕೊಂಡಿದೆ. ಅದು ಆರಂಭವಾಗುವುದು ಇಂದ. ನನ್ನ ಹೆಸರು ಟ್ವಿಟ್ಟರ್‌ನಲ್ಲಿ @iHegde. ಸಾಮಾಜಿಕ ಜಾಲತಾಣಗಳಲ್ಲಿ ನೀವೇ ನಿಮಗೆ ಏನು ಹೆಸರನ್ನು ಬೇಕಾದರೂ ಇಟ್ಟುಕೊಳ್ಳಬಹುದು. ಅಲ್ಲಿ ರಾಮ ರಾವ್ @CoffeeZombie_99 ಆಗುತ್ತಾನೆ. ಅನಂತ ಶೆಟ್ಟಿ @infinity_Slayer ಆಗುತ್ತಾನೆ. ಇತ್ಯಾದಿ. ಈ ಹೆಸರಿಗೆ ಯಾವುದೇ ಅರ್ಥವಿರಬೇಕಾಗಿಲ್ಲ, ಆದರೆ ಯಾರೋ ಇಂಟರ್ನೆಟ್ಟಿನಲ್ಲಿ ಎಂದು ನಮ್ಮ ಹೆಸರು ಹಾಕಿಬಿಟ್ಟರೆ ಜಗತ್ತಿನ ಯಾವ ಮೂಲೆಯಲ್ಲೇ ಇರಲಿ, ಅವನಿಗೆ ಕ್ಷಣಮಾತ್ರದಲ್ಲಿ ಸಂದೇಶ ತಲುಪಿಬಿಡುತ್ತದೆ. ಇಲ್ಲಿ ಹೆಸರಿನ ವ್ಯಾಪ್ತಿ ಅಪರಿಮಿತ.

ಹೆಸರು ಎಂದರೆ ಗುರುತು. ಯಾವುದೇ ಹೆಸರಿಗೆ ಕೆಲವು ಕನಿಷ್ಠ ಮಾಪಕಗಳಿವೆ. ಮೊದಲನೆಯದಾಗಿ ಅದಕ್ಕೆ ಏನೋ ಒಂದು ಒಳ್ಳೆಯ ಅರ್ಥವಿರಬೇಕು. ಎರಡನೆಯದು ಕರೆಯಲು ಸುಲಭ ವಾಗಬೇಕು. ಆದರೆ ಇತ್ತೀಚೆ ಅದರಲ್ಲೂ ಹೊಸ ತಲೆಮಾರಿನ ಭಾರತದಲ್ಲಿ ಇಡುವ ಹೆಸರುಗಳು ಚಿತ್ರವಿಚಿತ್ರ. ಹೆಚ್ಚಿನವು ಇಂಟರ್ನೆಟ್ ನಿಂದ ಇಳಿಸಿದವು. ಇಂದು ಇಂಟರ್ನೆಟ್ಟಿನಲ್ಲಿ ಸಾಕಷ್ಟು ಸಂಸ್ಕೃತ ವೈವಿಧ್ಯದ ಹೆಸರುಗಳು ಸಿಗುತ್ತವೆ. ಆದರೆ ಕೆಲವೊಂದು ಶಬ್ದಕ್ಕೆ ಅಸಲಿಗೆ ಯಾವುದೇ ಅರ್ಥವೇ ಇರುವುದಿಲ್ಲ, ರಿಯಾನ್, ತಿವಾನ್, ಆರಿವ್, ಮೈಕಾ, ತಿವಿಕಾ, ನೈರಾ, ಕೈರಾ, ಅರಿನ್, ರೆಯಾ, ನಿವಾನ್ ಇತ್ಯಾದಿ ಇತ್ಯಾದಿ. ಭಾರತೀಯ ಜೆನ್ ತಂದೆ ತಾಯಂದಿರ ಅನನ್ಯ ಹೆಸರಿನ ಹುಡುಕಾಟದಲ್ಲಿ ಮಕ್ಕಳು ಅರ್ಥವೂ ಇಲ್ಲದ, ಕರೆಯಲಿಕ್ಕೂ ಆಗದ ಹೆಸರನ್ನು ಪಡೆಯುತ್ತಿವೆ. ಅವುಗಳ ಅರ್ಥವನ್ನು ಇಂದು ಕೇಳಿದರೆ ಅದಕ್ಕೆ ಇಂಟರ್ನೆಟ್ ನಲ್ಲಿ ಎಲ್ಲೋ ಏನೋ ಯಾರೋ ಬರೆದದ್ದೇ ಬೇಲಿ ಗುಟ್ಟದ ಸಾಕ್ಷಿ . ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಅಂತಹ ಶಬ್ದೋತ್ಪತ್ತಿಯೇ ಸಾಧ್ಯವಿರುವುದಿಲ್ಲ.

ನನಗೆ ಯಾವುದೇ ಹೆಸರು ಕೇಳಿದಾಗಲೂ ಅದರ ಅರ್ಥ ಕೇಳುವ ಕೆಟ್ಟ ಚಾಳಿಯಿತ್ತು. ಅದನ್ನು ಈಗೀಗ ಸಂಪೂರ್ಣ ನಿಲ್ಲಿಸಿದ್ದೇನೆ. ಒಮ್ಮೆ ಹೀಗಾಯಿತು, ಸ್ನೇಹಿತನ ಮಗನಿಗೆ ಇಂಥದ್ದೇ ಚಿತ್ರವಿಚಿತ್ರ ಹೆಸರಿತ್ತು. ನನಗೆ ಅರ್ಥ ತಿಳಿಯದಾಗಿ ಹುಡುಗನಲ್ಲಿ ಕೇಳಿದೆ. ಅವನಿಗೂ ಆ ಪ್ರಶ್ನೆ ಹಿಂದೆ ಯಾವತ್ತೂ ಎದುರಾಗಿರಲಿಲ್ಲ, ಕೇಳಿಕೊಂಡಿರಲಿಲ್ಲವೇನಿಸುತ್ತದೆ. ಗಾಬರಿ ಬಿದ್ದು ತಂದೆಯತ್ತ ನೋಡಿದ. ನಂತರ ತಂದೆಯೂ ಹೀಗೇನೋ ಒಂದು ಅರ್ಥವಿದೆ ಇಂದು ಇಂಟರ್‌ನೆಟ್‌ನಲ್ಲಿ ಹುಡುಕಿ ಹೇಳಿದ. ಆದರೆ ಅಲ್ಲಿ ಜೊತೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಎರಡರಲ್ಲೂ ಪ್ರವೀಣರಾದವರೊಬ್ಬರಿದ್ದರು. ಅವರು ಚರ್ಚೆಗಿಳಿದುಬಿಟ್ಟರು. ಕೊನೆಯಲ್ಲಿ, ಚರ್ಚೆ ಮುಗಿಯುವಾಗ - ಪಾಪ ಆ ಹುಡುಗನ ಹೆಸರಿಗೆ ಯಾವುದೇ ಅರ್ಥವಿಲ್ಲ ಎಂದು ಜಾಹೀರವಾಯ್ತು. ಆತ ಆ ಹೆಸರನ್ನು ಜೀವಮಾನವಿಡೀ ಇಟ್ಟುಕೊಳ್ಳಬೇಕಲ್ಲ! ಕೊನೆಗೆ ಹೆಸರೆಂದರೆ ಗಂಟಲಿಂದ ಬರುವ ಒಂದು ವಿಶೇಷ, ಸಂಬೋಧನೆಗೆ ಬಳಸುವ ಸದ್ದು ಎಂದು ಹೇಳಿ ಸಮಾಧಾನ ಮಾಡಿದ್ದಾಯ್ತು!

ಅಷ್ಟಕ್ಕೂ ಹೆಸರಿನಲ್ಲೇನಿದೆ ಮಣ್ಣು? ಹೆಸರು ಕೇವಲ ಒಂದು ಹಣೆಪಟ್ಟಿ, ಗುರುತು ಮಾತ್ರವಲ್ಲ. ಅದು ವ್ಯಕ್ತಿ ಮತ್ತು ಜಗತ್ತಿನ ನಡುವೆ ಇರುವ ಜೀವಂತ ಒಡಂಬಡಿಕೆ. ಹೆಸರು ನಾವೆಲ್ಲಿಂದ ಬಂದಿದ್ದೇವೆ, ನಮ್ಮ ಹಿನ್ನೆಲೆ, ಸಾಧ್ಯತೆ, ನಡವಳಿಕೆ, ಮೌಲ್ಯ ಹೀಗೆ ಏನೇನನ್ನೋ ನಮಗರಿವಿಲ್ಲದಂತೆ ಹೇಳಿಬಿಡುತ್ತದೆ. ಅಂತೆಯೇ ಒಂದನ್ನು ಮುಖ್ಯ, ಇದರ ಅಸ್ತಿತ್ವ ಮಹತ್ವದ್ದು ಎಂದೆನಿಸಿದಾಕ್ಷಣ ಹೆಸರಿಡುವುದು ಗೀಳಿನಾಚೆಯ ನಮ್ಮ ಅಗತ್ಯತೆ. ಗಿಡ ಮರಕ್ಕೆ, ವಸ್ತುಗಳಿಗೆ, ಗ್ರಹ-ನಕ್ಷತ್ರಗಳಿಗೆ, ಬ್ರಹ್ಮಾಂಡಕ್ಕೆ ಹೆಸರಿನ ಅವಶ್ಯಕತೆಯಿದೆಯೇ? ಹೆಸರು ಮನುಷ್ಯನ ಅವಶ್ಯಕತೆ ಮಾತ್ರ. ಹಾಗಾಗಿಯೇ ಹೆಸರು ಅವಿನಾಶಿಯಲ್ಲ. ಅದೊಂದು ವಿಚಾರ ನಿರಂತರ ನೆನಪಿದ್ದರೆ ಸಾಕು. ಬದುಕು ಸುಲಭ !

ವಾರಕ್ಕೆ 72 ಗಂಟೆ ಕೆಲಸ ಮಾಡಿ ಎಂದು ಅವರೆಲ್ಲ ಹೇಳುತ್ತಿರುವುದೇಕೆ?!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.

ಇನ್ಫೋಸಿಸ್ ಸ್ಥಾಪಕ ನಾರಾಯಣಮೂರ್ತಿ, ಜಪಾನ್ ಪ್ರಧಾನಿ ಸನಾಯ್ ಟಕಾಯಿಚಿ, ಟೆಸ್ಲಾ ಸ್ಥಾಪಕ ಎಲಾನ್ ಮಸ್ಕ್, ಅಮೇಜಾನ್ ಮಾಲೀಕ ಜೆಫ್ ಬಿಜೋಸ್, ಅಲಿಬಾಬಾದ ಒಡೆಯ ಜ್ಯಾಕ್ ಮಾ, ಪೆಪ್ಸಿಯ ಮಾಜಿ ಸಿಇಒ ಇಂದ್ರಾ ನೂಯಿ, ಬಾಲಿವುಡ್ ನಟ ಶಾರುಖ್ ಖಾನ್ ಇವರೆಲ್ಲರೂ ತಮ್ಮ ಕ್ಷೇತ್ರಗಳಲ್ಲಿ ಅದ್ಭುತ ಸಾಧಕರು. ಇವರೆಲ್ಲರೂ ಯಶಸ್ಸಿಗೆ ಒಂದೇ ಮೆಟ್ಟಿಲು, 'ಕೆಲಸ... ಕೆಲಸ... ಕೆಲಸ' ಎನ್ನುತ್ತಾರೆ! ಇದು ಪರ-ವಿರೋಧದ ಅಲೆಯನ್ನು ಎಬ್ಬಿಸಿದೆ. ಒಂದನ್ನು ಅರ್ಥ ಮಾಡಿಕೊಳ್ಳಬೇಕು. ಮೂರ್ತಿಯವರ ಸಲಹೆಗಳೂ ಐಚ್ಛಿಕ. ಬೆಳಗ್ಗೆ 9 ಗಂಟೆಯಿಂದ ಸಂಜೆ 5ಕ್ಕೆ ಮುಕ್ತಾಯವಾಗುವ ಕೆಲಸಕ್ಕೆ ಹೋಗಬಹುದು. ಆದರೆ ನೀವು ಒಬ್ಬ ಸಾಧಕರಾಗಬೇಕಿದ್ದರೆ, ವಾರಕ್ಕೆ 70 ಗಂಟೆಗೂ ಹೆಚ್ಚು ಕಾಲ ಶಿಸ್ತಿನಿಂದ ಕೆಲಸ ಮಾಡಬೇಕಾಗುತ್ತದೆ ಅಂತ ಅವರು ಹೇಳಿದ್ದಾರೆ.

ಮಿಸ್ಟರ್ ನಾರಾಯಣಮೂರ್ತಿ, ದ ನೇಶನ್ ವಾಂಟ್ ಟು ನೋ... ವರ್ಕ್ ಮತ್ತು ಲೈಫ್ ನಡುವೆ ಬ್ಯಾಲೆನ್ಸ್ ಬಗ್ಗೆ ನೀವು ಈ ಹಿಂದೆ ನೀಡಿದ್ದ ಹೇಳಿಕೆಗೆ ನೀವು ಈಗಲೂ ಬದ್ಧರಾಗಿದ್ದೀರಾ?! 'ಹೀಗೆ ತಮ್ಮ ಎಂದಿನ ಶೈಲಿಯಲ್ಲಿ ರಿಪಬ್ಲಿಕ್ ವರ್ಲ್ಡ್ ಚಾನೆಲ್‌ನ ಸ್ಥಾಪಕ, ಖ್ಯಾತ ಪತ್ರಕರ್ತ ಅರ್ನಾಬ್ ಗೋಸ್ವಾಮಿಯವರು ಇತ್ತೀಚೆಗೆ ಕೇಳಿದ ಪ್ರಶ್ನೆಗೆ, ಮುಗುಳ್ನಗುತ್ತಾ ಉತ್ತರಿಸಿದ ಮೂರ್ತಿಯವರು: ನೋಡಿ, ಒಬ್ಬ ಎಂಜಿನಿಯರ್ ಆಗಿ ನಾನು ಅಂಕಿಅಂಶಗಳನ್ನು ಮತ್ತು ವಸ್ತುನಿಷ್ಠ ವಿಷಯಗಳನ್ನು ಮಾತ್ರ ಬಳಸುತ್ತೇನೆ. ನನಗೆ ಯಾವುದೇ ಪೂರ್ವಾಗ್ರಹಪೀಡಿತ ನಿಲುವುಗಳ ಅಗತ್ಯವೂ ಇಲ್ಲ. ನಾನು ಪ್ರಪಂಚದ ನಾನಾ ಕಡೆಗಳಲ್ಲಿ ರಾಜಕಾರಣಿಗಳು, ಕಾರ್ಪೊರೇಟ್ ವಲಯದ ಪ್ರಮುಖರನ್ನು ಮಾತನಾಡಿಸಿದ್ದೇನೆ. ಫಾರ್ಚ್ಯೂನ್ 20 ಕಾರ್ಪೊರೇಟ್ ಲೀಡರ್‌ಗಳು, ಅಮೆರಿಕದ ಟಾಪ್ ಯುನಿವರ್ಸಿಟಿಗಳ ಪ್ರೊಫೆಸರ್‌ಗಳ ಜತೆ ಚರ್ಚಿಸಿದ್ದೇನೆ. ಭಾರತದಲ್ಲೂ ನಾನಾ ಸಾಧಕರನ್ನು ಭೇಟಿಯಾಗಿರುವೆ. ಆಗ ಗೊತ್ತಾಗಿರುವ ಒಂದು ವಿಷಯ ಸಾಮಾನ್ಯವಾಗಿತ್ತು. ಯಾವುದೇ ವ್ಯಕ್ತಿ, ಸಮುದಾಯ, ರಾಷ್ಟ್ರವು ಕಠಿಣ ಪರಿಶ್ರಮ ಇಲ್ಲದೆ ಯಾವುದೇ ಏಳಿಗೆ ಹೊಂದಿಲ್ಲ. ಪರಿಶ್ರಮ ಎಂದರೆ ಕಚೇರಿಗೆ ಹೋಗಿ ಅಲ್ಲಿ ನಿದ್ದೆ ಮಾಡುವುದಲ್ಲ. ನನ್ನ ಪ್ರಕಾರ ಶ್ರಮ ಎಂದರೆ ಕಠಿಣ ಪರಿಶ್ರಮ ಮತ್ತು ಸ್ಮಾರ್ಟ್ ವರ್ಕ್. ನಾನೊಬ್ಬರು ಖಭೌತ ಶಾಸ್ತ್ರಜ್ಞರನ್ನು ಭೇಟಿಯಾಗಿದ್ದೆ. ಅವರು ನಿಸರ್ಗದ ಬಗ್ಗೆ 70ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಬರೆದಿದ್ದರು. ಭಾರತದಲ್ಲಿ ಬಹುಶಃ 4-5 ಮಂಡಿಸಿದರೂ ಅದ್ಭುತ ಕೆಲಸ ಎಂದು ಪರಿಗಣನೆಯಾಗುತ್ತದೆ. ಆದ್ದರಿಂದ ಇಷ್ಟು ದೊಡ್ಡ ಸಾಧನೆ ಹೇಗೆ ಸಾಧ್ಯವಾಯಿತು? ನೀವು ಅತ್ಯಂತ ಬುದ್ಧಿವಂತರಾಗಿರುವುದು ಕಾರಣವೇ? ಎಂದು ಕೇಳಿದೆ. ಅದಕ್ಕೆ ಅವರು ಹೀಗೆಂದರು- ಜಗತ್ತಿನಲ್ಲಿ ಬುದ್ಧಿವಂತರಿಗೆ ಕೊರತೆ ಇಲ್ಲ, ನನ್ನ ಸುತ್ತುಮುತ್ತಲು ಇರುವವರೆಲ್ಲವೂ ನನ್ನಷ್ಟೇ ಬುದ್ಧಿಶಾಲಿಗಳು. ಆದರೆ ಅವರಿಗೂ ನನಗೂ ಇರುವ ವ್ಯತ್ಯಾಸ ಏನೆಂದರೆ, ಅವರಿಗಿಂತ ಹೆಚ್ಚು ಹೊತ್ತು ಕೆಲಸ ಮಾಡುತ್ತೇನೆ. ನನ್ನ ಕುಟುಂಬ ಕೂಡ ನನಗೆ ಸಹಕರಿಸುತ್ತಿದೆ. ಆದ್ದರಿಂದ ಇದೆಲ್ಲ ನನಗೆ ಸಾಧ್ಯವಾಯಿತು ಎಂದು ವಿವರಿಸಿದರು.

ನಮ್ಮ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರೂ ವಾರಕ್ಕೆ 100 ಗಂಟೆಗೆ ಕಡಿಮೆ ಇಲ್ಲದಂತೆ ಕೆಲಸ ಮಾಡುತ್ತಾರೆ ಎಂಬುದು ನನ್ನ ದೃಢವಾದ ನಂಬಿಕೆ. ಅವರ ಸಂಪುಟದ ಸಹೋದ್ಯೋಗಿಗಳು, ಹಿರಿಯ ಅಧಿಕಾರಿಗಳೂ ವಾರಕ್ಕೆ 72 ಗಂಟೆಗೂ ಹೆಚ್ಚು ಕೆಲಸ ಮಾಡುತ್ತಾರೆ. ಖ್ಯಾತ ಕ್ರಿಕೆಟ್ ಪಟುಗಳೂ, ದಿನದ ಅಂತ್ಯಕ್ಕೆ ಹೇಳುವುದು ಏನೆಂದರೆ, ಪ್ರಾಕ್ಟೀಸ್....ಪ್ರಾಕ್ಟೀಸ್...ಪ್ರಾಕ್ಟೀಸ್!

ಸುಮಾರು 26 ವರ್ಷಗಳ ಹಿಂದೆ ಪತ್ರಕರ್ತರೊಬ್ಬರು ನನ್ನ ಸ್ನೇಹಿತರೂ, ಕಾರ್ಪೊರೇಟ್ ಕಂಪನಿಯ ಮುಖ್ಯಸ್ಥರೊಬ್ಬರನ್ನು ಸಂದರ್ಶನ ಮಾಡುತ್ತಿದ್ದರು. ವರ್ಕ್ ಲೈಫ್ ಬ್ಯಾಲೆನ್ಸ್ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಪ್ರಶ್ನಿಸಲಾಯಿತು. ನನ್ನ ಸ್ನೇಹಿತರು ಬ್ರಿಲಿಯಂಟ್ ಉತ್ತರ ಕೊಟ್ಟರು. ಸರ್ ಮೊದಲು ನಮಗೆಲ್ಲ ಲೈಫ್ ಸಿಗಬೇಕು. ಬಳಿಕ ವರ್ಕ್-ಲೈಫ್ ಬ್ಯಾಲೆನ್ಸ್ ಬಗ್ಗೆ ಯೋಚನೆ ಮಾಡಬಹುದು. ದೇಶಕ್ಕೆ ಬೇಕಾಗಿರುವುದು ಏನೆಂದರೆ, ಭಗವಂತನ ದಯೆಯಿಂದ ಆರೋಗ್ಯವಂತರಾಗಿರುವ ಎಲ್ಲರೂ ಅತ್ಯಂತ ಶಿಸ್ತಿನಿಂದ ಕೆಲಸ ಮಾಡಬೇಕು. ಚುರುಕಾಗಿ ಕಾರ್ಯನಿರ್ವಹಿಸಬೇಕು. ಹಾಗೂ ಯಾರಿಗೆ ಕೆಲಸ ಇಲ್ಲವೋ, ಅವರಿಗೆ ಅವಕಾಶಗಳನ್ನು ಕೊಡಬೇಕು. ಆಗ ಅವರಿಗೂ ಲೈಫ್ ಸಿಗುತ್ತದೆ. ನಂತರ ಕೆಲಸ ಮತ್ತು ಜೀವನದ ಸಮತೋಲನದ ಬಗ್ಗೆ ಚಿಂತಿಸಬೇಕು. ನನ್ನ ತಾಯಿ ಕೂಡ ಬೆಳಗ್ಗೆ 6 ಗಂಟೆಯಿಂದ ರಾತ್ರಿ 11 ಗಂಟೆಯ ತನಕ ನಿರಂತರವಾಗಿ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆಗ ಸೌದೆ ಒಲೆಯಲ್ಲಿ ಅಡುಗೆ ತಯಾರಾಗುತ್ತಿತ್ತು. ಎಲ್‌ಪಿಜಿ ಸಿಲಿಂಡರ್ ಕೂಡ ಇದ್ದಿರಲಿಲ್ಲ. ಕೆಲಸ ಅಂದರೆ ಕಚೇರಿಯಲ್ಲಿ ಮಾಡುವ ಕೆಲಸ ಒಂದೇ ಅಲ್ಲ ಎಂದು ವಿವರಿಸಿದ್ದಾರೆ.

ಚೀನಾದ ಹಲವಾರು ಟೆಕ್ ಕಂಪನಿಗಳಲ್ಲಿ ಜನಪ್ರಿಯವಾಗಿರುವ 9-9-6 ಕೆಲಸದ ಸಂಸ್ಕೃತಿಯ ಬಗ್ಗೆ ಕೂಡ ಮೂರ್ತಿ ಪ್ರಸ್ತಾಪಿಸಿದ್ದಾರೆ. ಭಾರತ ಕೂಡ ಚೀನಾದಂತೆ ಅಭಿವೃದ್ಧಿ ಹೊಂದಬೇಕಿದ್ದರೆ, ಅಲ್ಲಿರುವಂತೆ 9-9-6 ಕೆಲಸದ ಸಂಸ್ಕೃತಿಯನ್ನು ಜಾರಿಗೆ ತರಬೇಕು ಎನ್ನುತ್ತಾರೆ. ಹಾಗಾದರೆ ಏನಿದು? 9-9-6 ಎಂಬುದು ಒಂದು ಕೆಲಸದ ಶಿಸ್ತು. ಬೆಳಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯ ತನಕ ದುಡಿಯುವುದು. ವಾರದ 6 ದಿನಗಳಲ್ಲಿ ಇದು ಕಡ್ಡಾಯ. ಒಂದು ದಿನ ಮಾತ್ರ ರಜೆ. ಇದರಿಂದ ವಾರಕ್ಕೆ 72 ದಿನಗಳ ದುಡಿಮೆಯಾಗುತ್ತದೆ. ಬಹುತೇಕ ರಾಷ್ಟ್ರಗಳಲ್ಲಿ ವಾರಕ್ಕೆ 40-48 ಗಂಟೆಗಳ ಕೆಲಸದ ಸಮಯ ಇರುತ್ತದೆ. ಇದಕ್ಕೆ ಹೋಲಿಸಿದರೆ ಇದು ಹೆಚ್ಚು, ಚೀನಾದಲ್ಲಿ ಅಲಿಬಾಬಾ, ಹುವಾಯ್ ಮತ್ತು ಹಲವಾರು ಸ್ಟಾರ್ಟಪ್‌ಗಳ ಶರವೇಗದ ಬೆಳವಣಿಗೆಯಲ್ಲಿ ಇಂಥ ಕೆಲಸದ ಸಂಸ್ಕೃತಿ ಪ್ರಧಾನ ಪಾತ್ರ ವಹಿಸಿತು. ವಿಶ್ವದರ್ಜೆಯ ಉತ್ಪನ್ನಗಳನ್ನು ಕೊಡಬೇಕಿದ್ದರೆ, ವೇಗವಾಗಿ ಬೆಳೆಯಬೇಕಿದ್ದರೆ, ಜಾಗತಿಕ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿರಬೇಕಿದ್ದರೆ, ಈ ರೀತಿ ಗಂಟೆಗಟ್ಟಲೆ ಕೆಲಸ ಅವಶ್ಯಕ ಎನ್ನುತ್ತಾರೆ ಸಾಧಕರು.

ಹೀಗಿದ್ದರೂ, ಇದಕ್ಕೆ ಟೀಕಾಕಾರರು ಇದ್ದಾರೆ. 2010ರ ಕಾಲಘಟ್ಟದಲ್ಲಿ ಚೀನಾ ವೇಗವಾಗಿ ಅಭಿವೃದ್ಧಿ ಹೊಂದಿದರೂ, ಜನರ ಆರೋಗ್ಯದ ಮೇಲೆ ಒತ್ತಡ, ಖಿನ್ನತೆ ಉಂಟಾಗುವ ಸಾಧ್ಯತೆ ಇದೆ ಎಂಬ ವಾದ ಅಲ್ಲಿಯೂ ಉಂಟಾಗಿತ್ತು. 2021ರಲ್ಲಿ ಚೀನಾದ ಸುಪ್ರೀಂ ಕೋರ್ಟ್ ಈ ವ್ಯವಸ್ಥೆಯನ್ನು ಕಾನೂನು ಬಾಹಿರ ಎಂದು ಘೋಷಿಸಿತ್ತು. ಆದರೂ ವರದಿಗಳ ಪ್ರಕಾರ ಈಗಲೂ ಹಲವಾರು ಚೀನಿ ಕಂಪನಿಗಳಲ್ಲಿ ಈ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ.

ಆರ್ಥಿಕ ಬೆಳವಣಿಗೆ ಮತ್ತು ಉತ್ಪಾದಕತೆಯ ವಿಚಾರದಲ್ಲಿ ಭಾರತವು ಚೀನಾಕ್ಕಿಂತ ಈಗಲೂ ಬಹಳ ಹಿಂದುಳಿದಿರುವುದು ವಾಸ್ತವ. ಚೀನಾದ ಆರ್ಥಿಕತೆಯು ಭಾರತಕ್ಕಿಂತ ಸುಮಾರು 6 ಪಟ್ಟು ದೊಡ್ಡದು. ಆದ್ದರಿಂದ ಅದಕ್ಕೆ ಪ್ರತಿಸ್ಪರ್ಧೆ ನೀಡಬೇಕಿದ್ದರೆ ಪ್ರತಿಯೊಬ್ಬರಿಂದಲೂ ಅಪಾರ ಶ್ರಮದ ಅಗತ್ಯ ಇದೆ ಎಂಬ ಸದುದ್ದೇಶದಿಂದ ನಾರಾಯಣ ಮೂರ್ತಿಯವರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಿ ಎಂಬ ಸಲಹೆ ನೀಡುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ. ಭಾರತದಲ್ಲಿ ವಾರಕ್ಕೆ 70 ಗಂಟೆಗಳ ಕಾಲ ಎಲ್ಲರಿಗೂ ಕೆಲಸ ಮಾಡಲು ಸಾಧ್ಯವೇ? ಇಲ್ಲವೇ? ಎಂಬುದು ಬೇರೆ ವಿಚಾರ. ಆದರೆ ಮೂರ್ತಿಯವರ ದೂರದೃಷ್ಟಿ, ಆಶಯ, ಕಾಳಜಿಯಲ್ಲಿ ಸ್ವಾರ್ಥವಿಲ್ಲ.

ಮೂರ್ತಿಯವರಿಗಿಂತಲೂ ಕಠೋರ ಪರಿಶ್ರಮಿಗಳನ್ನು ನೋಡಬಹುದು! ಜಪಾನಿನ ನೂತನ ಪ್ರಧಾನಿ ಸನಾಯ್ ಟಕಾಯಿಚಿ, ಅಲ್ಲಿನ ಮೊದಲ ಮಹಿಳಾ ಪ್ರಧಾನಿ. ಅವರ ಕೆಲಸ ಶೈಲಿ ಬೇರೆಯವರ ನಿದ್ದೆಗೆಡಿಸಿದೆ! ಟೋಕಿಯೋದಲ್ಲಿ 5 ಗಂಟೆಗೆಲ್ಲ ಸೂರ್ಯೋದಯ ಆಗುತ್ತದೆ. ಇತ್ತೀಚೆಗೆ ಜಪಾನ್ ಪ್ರಧಾನಿ ಬಜೆಟ್ ಕುರಿತ ಸಿದ್ಧತೆಗೆ ಸೂರ್ಯೋದಯಕ್ಕಿಂತಲೂ ಬಹು ಮೊದಲು, ಬೆಳಗ್ಗೆ 3 ಗಂಟೆಗೇ ಕಚೇರಿಗೆ ಹಾಜರಾಗಿದ್ದರು. ಎಲ್ಲರೂ ನಿದ್ರಿಸುತ್ತಿದ್ದಾಗ ಅವರು ಆಫೀಸಿನಲ್ಲಿದ್ದರು. ಮನೆಯಲ್ಲಿರುವ ಫ್ಯಾಕ್ಸ್ ಮಶೀನ್ ಕೆಟ್ಟಿದ್ದರಿಂದ ಕಚೇರಿಗೆ ಹೋಗಲು ನಿರ್ಧರಿಸಿದೆ ಎಂದು ಟಕಾಯಿಚಿ ಹೇಳಿದ್ದರು. (ಜಪಾನಿನಲ್ಲಿ ಸಂವಹನದ ಭಾಗವಾಗಿ ಈಗಲೂ ಫ್ಯಾಕ್ಸ್ ಮೆಶೀನ್‌ಗಳು ಬಳಕೆಯಲ್ಲಿವೆ).

ನಾನು ಪ್ರತಿದಿನ 2 ಗಂಟೆ ಮಾತ್ರ ನಿದ್ದೆ ಮಾಡುತ್ತೇನೆ. 4 ಗಂಟೆ ನಿದ್ರಿಸಿದರೆ ಅದೇ ಹೆಚ್ಚು ಎನ್ನುತ್ತಾರೆ ಟಕಾಯಿಚಿ. ಈ ರೀತಿ ಬೆಳಗ್ಗೆ ಮೂರು ಗಂಟೆಗೆಲ್ಲ ಕಚೇರಿಗೆ ಕರ್ತವ್ಯಕ್ಕೆ ಬರುವುದು ಅವರಿಗೆ ಹೊಸತೇನಲ್ಲವಂತೆ. ಹೀಗಿದ್ದರೂ, ತಮ್ಮ ಕಾರ್ಯಶೈಲಿಯಿಂದ ಇತರರಿಗೆ ತೊಂದರೆ ಆಗುತ್ತಿರುವುದನ್ನೂ ಅವರು ಒಪ್ಪಿದ್ದಾರಂತೆ. ಆದರೆ ಮನುಷ್ಯನ ಉತ್ಪಾದಕತೆಗೆ ಒಂದು ಮಿತಿ ಇದೆಯಲ್ಲವೇ? ಜೀವನಪೂರ್ತಿ ಬೆಳಗ್ಗೆ ಮೂರು ಗಂಟೆಗೆ ಏಳಲು ಎಷ್ಟು ಮಂದಿಗೆ ಸಾಧ್ಯವಿದೆ? ಎನ್ನುವ ತರ್ಕದಲ್ಲೂ ಹುರುಳಿದೆ.

ಕೆಲಸ ಮತ್ತು ಜೀವನದ ಸಮತೋಲನದ ಬಗ್ಗೆ ಜೆಫ್ ಬಿಜೋಸ್ ಹೀಗೆನ್ನುತ್ತಾರೆ: ನೀವು ಕಚೇರಿಯಲ್ಲಿ ಸಂಪೂರ್ಣ ಚೈತನ್ಯದಿಂದ ಕೆಲಸ ಮಾಡಿದರೆ, ಮನೆಯಲ್ಲೂ ಅದೇ ರೀತಿ ಇರುತ್ತೀರಿ. ಇದು ಸಮತೋಲನದ ಮಾತಲ್ಲ, ಇದೊಂದು ವೃತ್ತ. ಒಂದಕ್ಕೊಂದು ಸಂಬಂಧ ಇರುವಂಥದ್ದು. ಜಗತ್ತಿನ ಅತ್ಯಂತ ಶ್ರೀಮಂತ ಟೆಕ್ ಉದ್ಯಮಿ ಎಲಾನ್ ಮಸ್ಕ್ ಹೇಳೋದು ಹೀಗೆ- ನನ್ನ ಕೆಲಸದ ಒತ್ತಡ ಹೇಗಿರುತ್ತದೆ ಎಂದರೆ, ವಾರಕ್ಕೆ 70ರಿಂದ 120 ಗಂಟೆಯ ತನಕ ಕೆಲಸ ಇರುತ್ತದೆ. ಬೇರೆ ಆಯ್ಕೆಯೇ ಇಲ್ಲ.

ಹೀಗಿದ್ದರೂ, ವರ್ಕ್-ಲೈಫ್-ಬ್ಯಾಲೆನ್ಸ್ ಬಗ್ಗೆ ಮೈಕ್ರೊಸಾಫ್ಟ್ ಸ್ಥಾಪಕ ಬಿಲ್ ಗೇಟ್ಸ್ ಅವರ ನಿಲುವಿನಲ್ಲಿ ಬದಲಾವಣೆಯಾಗಿದೆ. ಮೊದಲೆಲ್ಲ ವಾರಾಂತ್ಯದ ರಜಾ ದಿನಗಳು, ಮೋಜು-ಮಸ್ತಿಯ-ತಿರುಗಾಟದ ರಜೆಯ ದಿನಗಳನ್ನು ಅವರು ನಂಬುತ್ತಿರಲಿಲ್ಲ. ಆದರೆ ಈಗ ಅವುಗಳ ಮಹತ್ವವನ್ನೂ ಮನಗಂಡಿದ್ದಾರೆ. ಶ್ರೇಷ್ಠ ಜೀವನ ಮತ್ತು ಮಾಡುವ ಕೆಲಸದಲ್ಲಿ ಉತ್ತಮವಾಗಿರುವುದು ಎರಡೂ ಸಮಾನ ಮಹತ್ವದ್ದು ಎಂದು ಪ್ರತಿಪಾದಿಸುತ್ತಿದ್ದಾರೆ. ನಾರಾಯಣ ಮೂರ್ತಿಯವರೂ, ವರ್ಕ್-ಲೈಫ್ ಬ್ಯಾಲೆನ್ಸ್‌ಗೆ ಒತ್ತು ನೀಡುವವರೇ ಆಗಿದ್ದಾರೆ. ಆದರೆ ಲೈಫ್ ಸಿಗಬೇಕಿದ್ದರೆ ಕಠಿಣ ಪರಿಶ್ರಮ ಮೊದಲು ಬರಬೇಕು ಎಂಬುದೇ ಮೂರ್ತಿಯವರ ಸಲಹೆ. ಇದನ್ನು ನೇರವಾಗಿ ಅವರು ಹೇಳಿದ್ದರಿಂದ ಅಪಥ್ಯದಂತೆ ಹಿಡಿಸದಿರಬಹುದು. ಆದರೆ ಕಷಾಯ ಕಹಿಯಾಗಿರುವುದಲ್ಲವೇ?

ಸಾರಾಂಶವೇನೆಂದರೆ, ಅಪಾರ ಯಶಸ್ಸು ಗಳಿಸಿದವರೆಲ್ಲ ಒಂದಿಲ್ಲೊಂದು ಹಂತದಲ್ಲಿ ಹಗಲು-ರಾತ್ರಿಗಳ ವ್ಯತ್ಯಾಸವಿಲ್ಲದೆ ದುಡಿದವರೇ. ಕಾಂತಾರದ ನಾಯಕ ರಿಷಬ್ ಶೆಟ್ಟಿಯವರ ಉದಾಹರಣೆಯನ್ನೇ ಗಮನಿಸಿ. ಚಿತ್ರೀಕರಣದ ಸೆಟ್‌ನಲ್ಲಿಯೇ ಜೀವಿಸುತ್ತಿದ್ದರು. ಕಳರಿಪಯಟ್ಟು ಕಲಿತಿದ್ದರು. ಮೇಕಪ್ಪಿಗೇ ಆರೇಳು ಗಂಟೆಗಳ ಕಾಲ ಅಲ್ಲಾಡದೆ ಕುಳಿತಿರುತ್ತಿದ್ದರು. ಇನ್ನು ಕಾರ್ಪೊರೇಟ್ ವಲಯದ, ಖಾಸಗಿ ಕಂಪನಿಗಳಲ್ಲಿ ಕೂಡ ಗಮನಿಸಿ, ಅನೇಕ ಮಂದಿ ವಾರಕ್ಕೆ 70 ಗಂಟೆ ಕೆಲಸ ಮಾಡುವವರು ಸಿಗುತ್ತಾರೆ.

ಭಟ್ಟರ್ ಸ್ಕಾಚ್

- **ಪಿನಾಕಪಾಣಿ, ತುಮಕೂರು**
ಭಟ್ರೇ, ಗಂಡನು ಮದುವೆಯ ನಂತರ ಪ್ರೇಮ' ಎಂದು ಯಾವುದನ್ನು ಕರೆಯುತ್ತಾನೆ?
– **ಸತಿ ಹೇಳಿದ್ದನ್ನು ತಕ್ಷಣ ಕೇಳುವುದು!**

- **ರಾಮು ಸಿ.,ಬಾಣಸವಾಡಿ**
ಭಟ್ರೇ, ಹೆಂಡತಿ ಕೇಳುವ ನಾನು ದಪ್ಪ ಆಗಿದ್ದೇನಾ?' ಎಂಬ ಪ್ರಶ್ನೆಗೆ ಸುರಕ್ಷಿತ ಉತ್ತರ ಯಾವುದು?
– **ನೀನು ಸಂಪೂರ್ಣವಾಗಿ ಪರ್ಫೆಕ್ಟ್ ಆಗಿ ಕಾಣಿಸುತ್ತಿದ್ದೀಯ, ನನ್ನ ಕಣ್ಣಿಗೆ!**

- **ಭರತ್ ಶೇಷಾದ್ರಿ, ಬೆಂಗಳೂರು**
ಭಟ್ರೇ, ಮದುವೆಯ ಅತ್ಯಂತ ಚಿಕ್ಕ ಲವ್ ಸ್ಟೋರಿ ಯಾವುದು?
– **ಸರಿ, ನೀ ಹೇಳಿದ್ದೇ ಸರಿ'!**

- **ಸರೋಜಾ ನಾಗರಾಜ, (ಇಮೇಲ್ ಮೂಲಕ)**
ಭಟ್ರೇ, ರೊಮ್ಯಾನ್ಸ್' ಮತ್ತು ಮದುವೆ' ನಡುವಿನ ವ್ಯತ್ಯಾಸವೇನು?
– **ರೊಮ್ಯಾನ್ಸ್‌ನಲ್ಲಿ ನೀವು ಅವಳ ಕೈ ಹಿಡಿಯುತ್ತೀರಿ, ಮದುವೆಯಲ್ಲಿ ನೀವು ಅವಳ ಬಿಲ್ ಹಿಡಿಯುತ್ತೀರಿ!**

- **ಸದಾನಂದ ಹೆಗಡೆ, (ಇಮೇಲ್ ಮೂಲಕ)**
ಭಟ್ರೇ, ಗಂಡ-ಹೆಂಡತಿ ಯಾವಾಗಲೂ ಒಬ್ಬರನ್ನೊಬ್ಬರು ಹೇಗೆ ಗುರುತಿಸುತ್ತಾರೆ?
– **ಅವರ ಫೋನ್‌ಗಳ ಚಾರ್ಜರ್‌ಗಳು ಯಾವಾಗಲೂ ಅದಲು ಬದಲಾಗಿರುತ್ತವೆ!**

- **ರಾಕೇಶ ಜೋಶಿ, ಮೈಸೂರು**
ಭಟ್ರೇ, ಮದುವೆಯು ಏಕತಾನತೆಯನ್ನು ಕೊನೆಗೊಳಿಸುತ್ತದೆ ಎಂದು ಏಕೆ ಹೇಳುತ್ತಾರೆ?
– **ಏಕೆಂದರೆ ಅದರ ನಂತರ ನಿಮ್ಮಲ್ಲಿ ಒಂದಕ್ಕಿಂತ ಹೆಚ್ಚು ತಲೆನೋವು' ಇರುತ್ತವೆ!**

- **ಸಿ.ಎಂ.ಕಣ್ಣನ್, ಗೋಕುಲ**
ಭಟ್ರೇ, ಗಂಡನಾಗುವುದಕ್ಕಿಂತ ಮುನ್ನ ಗಂಡಸರು ಯಾವ ವಿಷಯದ ಬಗ್ಗೆ ಸುಳ್ಳು ಹೇಳುತ್ತಾರೆ ?
– **ಸಂಬಳದ ಬಗ್ಗೆ!**

- **ರಾಜೇಂದ್ರ ಭಟ್, ಕುಮಟಾ**
ಭಟ್ರೇ, ಗಂಡ ಹೇಳಿದ ತಮಾಷೆಗೆ ಹೆಂಡತಿ ನಗದಿರುವಾಗ ಗಂಡನ ಪ್ರತಿಕ್ರಿಯೆ ಏನು?
– **ಏನೂ ಇಲ್ಲ, ನಾನು ಅದನ್ನು ನನಗೇ ಹೇಳಿಕೊಂಡೆ' ಅನ್ನೋದು !**

- **ಗಡ್ಡದೂರು ಮೋಹನ, (ಇಮೇಲ್ ಮೂಲಕ)**
ಭಟ್ರೇ, ದಾಂಪತ್ಯದಲ್ಲಿ ಸಾಮಾನ್ಯವಾಗಿ ನಡೆಯುವ ಪೈಪೋಟಿ ಯಾವುದು?
– **ರಾತ್ರಿಯಿಡೀ ಫ್ಯಾನ್ ವೇಗವನ್ನು ಯಾರು ನಿಯಂತ್ರಿಸುತ್ತಾರೆ ಎಂಬುದು!**

- **ಸುರೇಶ ಗೌಡ, ಬೆಂಗಳೂರು**
ಭಟ್ರೇ, ಪ್ರೀತಿಯು ಕುರುಡು ಎಂದು ಏಕೆ ಹೇಳಲಾಗುತ್ತದೆ?
– **ಏಕೆಂದರೆ ಮದುವೆಯ ನಂತರ ದೃಷ್ಟಿ ಮತ್ತೆ ಬರುತ್ತದಲ್ಲ?!**

ಈ ಕೀಟಗಳು ಕಡಿದರೆ ಅಪಾಯ ತಪ್ಪಿದ್ದಲ್ಲ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಕೀಟಗಳ ಲೋಕವನ್ನು ಗಮನಿಸುತ್ತಾ ಹೋದರೆ, ಒಂದು ಅದ್ಭುತ ಜಗತ್ತೇ ತೆರೆದುಕೊಳ್ಳುತ್ತದೆ. ನಮ್ಮ ಜಗತ್ತಿನಲ್ಲಿ ಅದೆಷ್ಟೋ ಲಕ್ಷ ಪ್ರಭೇದದ ಕೀಟಗಳಿವೆಯಂತೆ! ಇಲ್ಲೊಂದು ವಿಶೇಷವಿದೆ : ಮನುಷ್ಯನ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡದ ಇನ್ನೂ ಅದೆಷ್ಟೋ ಸಾವಿರ ಪ್ರಭೇದದ ಕೀಟಗಳಿವೆಯಂತೆ. ಅಂದರೆ, ಹೊಸ ಹೊಸ ಪ್ರಭೇದದ ಕೀಟಗಳು ಪ್ರತಿ ವರ್ಷ ಪತ್ತೆಯಾಗುತ್ತಲೇ ಇವೆ. ಕೀಟಗಳಲ್ಲಿ ಕೆಲವು ಅಮಾಯಕ, ಕೆಲವು ನಿರುಪದ್ರವಿ; ಇನ್ನು ಕೆಲವು ತಮ್ಮ ರಕ್ಷಣಾ ಕೌಶಲಕ್ಕೆ ಹೆಸರುವಾಸಿ. ಅಂತಹ ಒಂದು ಅಪರೂಪದ ಆದರೆ ರಣಭಯಂಕತ ರಕ್ಷಣಾ ತಂತ್ರವನ್ನು ಹೊಂದಿರುವ ಕೀಟವೆಂದರೆ, ಹುಲಿಕಡ್ಜುಳ (ದೊಡ್ಡ ಗಾತ್ರದ ಕಣಜ, ಟೈಗರ್ ವ್ಯಾಸ್ಪ್). ನಮ್ಮ ಹಳ್ಳಿಯಲ್ಲಿ ಇವುಗಳು ಬಹಳ ಇವೆ; ಬೆಂಗಳೂರಿನಂತಹ ಮಹಾ ನಗರದ ಸರಹದ್ದಿನಲ್ಲೂ ಕೆಲವು ದೊಡ್ಡ ಗಾತ್ರದ ಕಡ್ಜುಳಗಳಿವೆ; ಅವುಗಳ ಕಡಿತ ಎಂದರೆ ತುಸು ಅಪಾಯಕಾರಿ.

ನಮ್ಮ ಹಳ್ಳಿಯಲ್ಲಿ ಹುಲಿಕಡ್ಜುಳ ಎಂದರೆ ಎಲ್ಲರಿಗೂ ಭಯ! 'ಹ್ವಾಯ್ ಅಯ್ಯಾ, ನಿಮ್ಮ ಮನೆ ಎದುರಿಗೆ, ಅಡಕೆ ಮರದಲ್ಲಿ ಒಂದು ಗೂಡು ಬೆಳಿತಾ ಉಂಟು, ಕಂಡಿದ್ರ್ಯಾ?' ಎಂದು ಹೊನ್ನಪ್ಪ ಕೇಳಿದಾಗ ಇಲ್ಲ ಎಂದು ತಲೆ ಆಡಿಸಿದೆ. 'ನೀವು ಮರದ ಹತ್ತಿರ ಹೋಗಿ ಜೋರಾಗಿ ಕೈ ಎತ್ತಿದ್ರೆ ನೀಕತ್, ಅದು ಹುಲಿ ಕಡ್ಜುಳನ ಗೂಡು ಕಾಣಿ. ಈಗ ತೆಂಗಿನ ಕಾಯಿ ಅಷ್ಟು ದೊಡ್ಡದಾಗಿತ್, ಇದನ್ನ ಹೀಂಗೇ ಬಿಟ್ರೆ ಇನ್ನು ಒಂದು ತಿಂಗಳಲ್ಲಿ ಅಕ್ಕಿ ಮುಡಿಯಷ್ಟು ದೊಡ್ಡ ಆತ್. ಹುಲಿ ಕಡ್ಜುಳ ಕಚ್ಚಿದರೆ ಭಾರೀ ಡೇಂಜರ್ ಮಾರಾಯ್ರೆ. ಕೂಡ್ಲೆ ತೆಗ್ಸುದ್ ಒಳ್ಳೆದ್' ಎಂದ ಹೊನ್ನಪ್ಪ.

ಹುಲಿ ಕಡ್ಜುಳ ಸುಮಾರು ಒಂದು ಇಂಚು ಉದ್ದದ ಕೀಟ. ಮಾಮೂಲಿ ಕಡ್ಜುಳಕ್ಕಿಂತ ಇದು ಬೇರೆ ಎಂದು ಗುರುತಿಸಲು 'ಹುಲಿ ಕಡ್ಜುಳ' ಎಂದು ಹೆಸರಿಟ್ಟಿದ್ದರು ನಮ್ಮ ಹಳ್ಳಿಯ ಜನರು. ಇದಕ್ಕಿಂತ ತುಸು ಚಿಕ್ಕದಾದ, ಎಲೆ ಕಡ್ಜುಳ ಎಂಬ ಹಸಿರು ಬಣ್ಣದ ಇನ್ನೊಂದು ಕೀಟವೂ ಇದೆ. ಹುಲಿ ಕಡ್ಜುಳದ ಮೈಮೇಲೆ ಹಳದಿ ಬಣ್ಣದ ಪಟ್ಟಿ ಇರುವುದರಿಂದ, ಹುಲಿಯ ಮೈವಿನ್ಯಾಸವನ್ನು ಹೋಲುತ್ತದೆ! ಇದನ್ನೇ ಹೋಲುವ ಕುಂಬಾರ ಹುಳ ಎಂಬ, ಸಾಕಷ್ಟು ನಿರುಪದ್ರವಿ ಕೀಟವೂ ನಮ್ಮ ಮನೆ ಸುತ್ತ ಮುತ್ತ ಹಾರಾಡುತ್ತಿರುತ್ತದೆ. ಮನೆಯೊಳಗೆ, ಜಂತಿ ತೊಲೆಗಳಿಗೆ ಅಂಟಿಸಿದಂತೆ, ಮಣ್ಣಿನಿಂದ ಗೂಡು ಕಟ್ಟಿ ಮರಿ ಮಾಡುವ ಕುಂಬಾರ ಹುಳ, ಒಮ್ಮೊಮ್ಮೆ ಕಚ್ಚುವುದೂ ಉಂಟು. ನಾನು ಅದರಿಂದ ಕಚ್ಚಿಸಿಕೊಂಡು, ಉರಿ ಮತ್ತು ತಾಪವನ್ನು ಅನುಭವಿಸಿದ್ದೆ. ಕುಂಬಾರ ಹುಳಕ್ಕಿಂತ ದೊಡ್ಡ ಗಾತ್ರದ ಹುಲಿ ಕಡ್ಜುಳನ ಕಡಿತ ಸಾಕಷ್ಟು ಅಪಾಯಕಾರಿ ಎಂದು ಕೇಳಿ ಗೊತ್ತಿತ್ತು.

'ಮನೆ ಎದುರೇ ಅಡಿಕೆ ಮರನಾಗೆ ಗೂಡು ಕಟ್ಟಿತ್ ಮಾರಾಯ್ರೆ. ಅಡಕೆ ಹೆಡೆ ಬಿದ್ರೆ, ಮಂಗ ಬಂದು ಏನಾದ್ರೂ ಕೀಟಲೆ ಮಾಡಿದರೆ, ಆ ಗೂಡಲ್ಲಿ ಇಪ್ಪೊ ಎಲ್ಲಾ ಹುಲಿ ಕಡ್ಜುಳಗಳು ಒಟ್ಟಿಗೇ ಬಂದು ಯಾರಿಗಾದರೂ ಕಚ್ಚುವ ಅಪಾಯ ಉಂಟು ಮಾರಾಯ್ರೆ. ಅವು ಕಚ್ಚಿದ್ರೆ, ಗೊತ್ತಿತಲೆ.. ಜಾಸ್ತಿ ಹುಳ ಕಚ್ಚಿದರೆ ವಿಷ ಏರಿ, ಜೀವಕ್ಕೇ ಅಪಾಯ' ಎಂದು ಹೊನ್ನಪ್ಪ ಎಚ್ಚರಿಸಿ, ಕಡ್ಜುಳನ ಗೂಡನ್ನು ಬೇಗನೆ ತೆಗೆಸುವಂತೆ ಸಲಹೆ ನೀಡಿದ. ಅವನ ಮನೆಯೂ ನಮ್ಮ ಮನೆಯ ಹತ್ತಿರದಲ್ಲೇ ಇದ್ದುದರಿಂದ, ಆ ಹುಳಗಳು ಅಕಸ್ಮಾತ್ ಗುಂಪಾಗಿ ಬಂದು ಕಚ್ಚಿದರೆ ಎಂಬ ದಿಗಿಲು ಅವನಿಗೆ.

ಹಗಲು ಹೊತ್ತಿನಲ್ಲಿ ಆ ಗೂಡು ತೆಗೆಯುವುದು ಕಷ್ಟ, ಅವು ಎಲ್ಲಾ ಒಟ್ಟಿಗೇ ಹೊರಗೆ ಬಂದು ಕಚ್ಚುತ್ತವೆ. ಹತ್ತಿರ ಇದ್ದ ಎಲ್ಲರಿಗೂ ಅಪಾಯ. ಕತ್ತಲಾದ ಮೇಲೆ, ಚಿಮಿಣಿ ಎಣ್ಣೆ ಹಾಕಿ, ಹೊಗೆ ಬರಿಸಿ, ಬೆಂಕಿ ಹಾಕಿ ಅವುಗಳನ್ನು ಓಡಿಸಬೇಕು ಎಂದ.

ಇಷ್ಟು ಹೇಳಿದ ನಂತರ, ಅದೇನೆಂದು ನೋಡಬೇಕಾಯಿತು; ನಮ್ಮ ಮನೆ ಅಂಗಳದಿಂದ ಸುಮಾರು 30 ಅಡಿ ದೂರದಲ್ಲಿದ್ದ ಅಡಿಕೆ ಮರದ ಮೇಲೆ ಬೆಳೆದಿದ್ದ ಕಾಳುಮೆಣಸಿನ ಬಳ್ಳಿಯನ್ನು ಆಧರಿಸಿ ಆ ಹುಳಗಳು ಗೂಡು ಕಟ್ಟಿದ್ದವು. ನಾಲ್ಕಾರು ಹುಲಿ ಕಡ್ಜುಳಗಳು ಸುತ್ತಮುತ್ತ ಹಾರಾಡುತ್ತಾ, ಗೂಡಿನೊಳಗೆ ಹೋಗಿಬಂದು ಮಾಡುತ್ತಿದ್ದವು. ತೆಂಗಿನ ಕಾಯಿಯಷ್ಟು ದೊಡ್ಡದಾದ ಬೂದು ಬಣ್ಣದ ಆ ಗೂಡು ಸುಮಾರು ಹತ್ತು ಅಡಿ ಎತ್ತರದಲ್ಲಿತ್ತು. ಹಾಗೇ ಬಿಟ್ಟರೆ, ಅದನ್ನು ಅವುಗಳು ವಿಸ್ತರಿಸುತ್ತಾ ಹೋಗಿ, ಸಣ್ಣ ಮೂಟೆಯಷ್ಟು ಗಾತ್ರಕ್ಕೆ ಬೆಳೆಸಬಲ್ಲವು!

ನಮ್ಮ ಮನೆ ಕೆಲಸಕ್ಕೆ ಮಾಡುತ್ತಿದ್ದ ಚಿನ್ನಪ್ಪ ಎಂಬುವವನಿಗೆ ಇದನ್ನೆಲ್ಲಾ ವಿವರಿಸಿದೆ. 'ನಮ್ಮ ಇಕಾಲಜಿಯ, ಪರಿಸರದ ಭಾಗ ಎನಿಸುವ ಆ ಕೀಟಗಳು, ಅವುಗಳ ಗೂಡು ಇವೆಲ್ಲಕ್ಕೂ ತನ್ನದೇ ಆದ ಸ್ಥಾನವಿದೆ; ಇದನ್ನು ಬೆಂಕಿ ಹಾಕಿ ಸುಡಲು ಮನಸ್ಸು ಒಪ್ಪುತ್ತಿಲ್ಲ, ಆದರೆ ಆ ಗೂಡಿಗೆ ಬೆಂಕಿ ಹಾಕಿ ಸುಡಬೇಕು ಅಂತ ಹೊನ್ನಪ್ಪ ಹೇಳಿದ್ದಾನೆ. ಬೆಂಕಿ ಹಾಕಿ ಓಡುಸುವುದು ಸರಿ ಅಲ್ಲ ಅನಿಸುತ್ತೆ, ಬೇರೆ ಯಾವುದಾದರೂ ರೀತಿಯಲ್ಲಿ ಆ ಕಡ್ಜುಳಗಳನ್ನು ಓಡಿಸುವುದಕ್ಕೆ ಆಗುತ್ತಾ ನೋಡು' ಎಂದು ಚಿನ್ನಪ್ಪನಿಗೆ ನನ್ನ ಮನದಿಂಗಿತವನ್ನು ವಿವರಿಸಿದೆ.

'ನಿಮಗೆ ಜೀವದ ಮೇಲೆ ಆಸೆ ಇದ್ದರೆ, ಆ ಗೂಡನ್ನು ಬೇಗ ತೆಗೆಸುವುದು ಒಳ್ಳೆಯದು' ಎಂದ ಅವನು, ಒಂದೇ ಏಟಿಗೆ! 'ಹುಲಿ ಕಡ್ಜುಳ ಕಚ್ಚಿದರೆ ಜೀವಕ್ಕೆ ಅಪಾಯ. ಒಂದೋ, ಎರಡೋ ಕಚ್ಚಿದರೆ ಮುಖ ದಪ್ಪ ಆತ್. ಹತ್ತೋ ಇಪ್ಪತ್ತೋ ಕಚ್ಚಿದರೆ ಜೀವ ಹೋದ ಹಾಂಗೇ. ಬಾಳಾ ಕಷ್ಟ' ಎಂದು ಎಚ್ಚರಿಸಿದ. ಸಣ್ಣ ಪೇಟೆಯ ನಡುವಿದ್ದ ನಮ್ಮ ಮನೆಯ ಎದುರಿನ ಮೆಣಸಿನ ಬಳ್ಳಿಯನ್ನು ಅದೇಕೆ ಗೂಡು ಕಟ್ಟಲು ಆಯ್ಕೆ ಮಾಡಿಕೊಂಡವು ಎಂಬ ಕುತೂಹಲ ನನಗೆ.

'ಹುಲಿಕಡ್ಜುಳಗಳು ಹಾಡಿ ಹಕ್ಕಲಿನಲ್ಲಿ ತೋಟದಲ್ಲಿ ಗೂಡು ಕಟ್ಟುತ್ತೊ. ನಿಮ್ಮ ಜಾಗ ಹಿಂದೆ ಹಕ್ಲ್ ಆಗಿತ್ತು ಅಲ್ದಾ. ಅದಕ್ಕೆ ಅವು ಗೂಡು ಕಟ್ಟಿದ್ವೋ ಏನೋ. ಆದರೆ, ಅವು ಕಚ್ಚಿದರೆ ಮಾತ್ರ ಭಾರೀ ಕಷ್ಟ. ನಿಮಗೆ ರಾಜಪ್ಪನ ಕತೆ ಗೊತ್ತಿತಲ್ದಾ?' ಎಂದ. ಆ ವಿಚಾರ ನನಗೆ ಕೇಳಿ ಗೊತ್ತಿತ್ತು. ಚಿನ್ನಪ್ಪ ತನ್ನ ಸಹಪಾಠಿಯು, ಹುಲಿಕಡ್ಜುಳಗಳಿಂದ ಕಚ್ಚಿಸಿಕೊಂಡದ್ದನ್ನು ವಿವರವಾಗಿ ಹೇಳಿದ.

'ನಾನು ಆಗ ಎರಡನೆ ಕ್ಲಾಸಿನಲ್ಲಿದ್ದೆ ಮಾರಾಯ್ರೆ. ಗೋರಾಜಿ ಶಾಲೆಯಿಂದ ನಾವಿಬ್ರೂ ಮನೆಗೆ ಒಟ್ಟಿಗೇ ಬತ್ತೊದ್ದೊ. ಹಾಡಿ ಹಕ್ಲು ದಾರಿ. ನಮ್ಮ ಜೊತೆ ಒಂದನೇ ಕ್ಲಾಸಿನ ರಾಜಪ್ಪನೂ ಇದ್ದ. ದಾರಿ ಮಧ್ಯೆ, ಅದೆಂತಕೋ ಏನೊ, ಕಡ್ಜುಳಗಳ ಹಿಂಡು ನಮ್ಮನ್ನು ಕಚ್ಚುಕೆ ಶುರು ಮಾಡಿದೊ. ಎಂತ ಮಾಡುದಂತ ಗೊತ್ತಾಯ್ಲಿಲ್ಲೆ. ನಾವೆಲ್ಲಾ ಕೂಗಿಕೊಂಡು ಮನೆಗೆ ಓಡಿ ಬಂದೆವು. ರಾಜಪ್ಪ ಮಾತ್ರ ಜಾರಿ ಬಿದ್ದಾ ಕಾಣತ್, ಹುಲಿ ಕಡ್ಜುಳಗಳು ಅವನಿಗೆ ಸಮಾ ಕಚ್ಚಿದೊ' ಚಿನ್ನಪ್ಪ ಮುಖ ಸಪ್ಪಗೆ ಮಾಡಿದ.

'ಆಮೇಲೆ ಎಂತ ಆಯ್ತ್, ಡಾಕ್ಟರ ಹತ್ತಿರ ಹೋದಿರಾ, ಅವನಿಗೆ ತುಂಬಾ ನೋವಾಯ್ತಾ?'

'ಬರೇ ನೋವಾ? ಮುಖ, ಮೈ ಎಲ್ಲಾ ಇಷ್ಟು ದಪ್ಪ ಆಯ್ತು. ಕೂಡಲೆ ಅವನನ್ನು ಆಚಾರ್ ಡಾಕ್ಟರ ಹತ್ತಿರ ಕರ್ಕೊಂಡು ಹೋದರು. ಡ್ರಿಪ್ ಹಾಕಿದರು. ಆದರೆ ರಾಜಪ್ಪ ಉಳಿಯಲಿಲ್ಲ' ಎಂದ ಚಿನ್ನಪ್ಪ, ಮ್ಲಾನವದನದಿಂದ.

'ಹುಲಿ ಕಡ್ಜುಳ ಕಚ್ಚಿದರೆ ನಿಜಕ್ಕೂ ಅಪಾಯಕಾರಿನಾ?' ನನ್ನ ಪರಿಚಿತ ವೈದ್ಯರಿಗೆ ಫೋನ್ ಮಾಡಿ ಕೇಳಿದೆ. ಈ ರೀತಿಯ ಕೀಟಗಳು (ಹಾರ್ನೆಟ್ ಅಥವಾ ವ್ಯಾಸ್ಪ್) ಕಚ್ಚಿದರೆ, ಕೆಲವರಿಗೆ ವಿಪರೀತ ಅಲರ್ಜಿ ಆಗಬಹುದು; ಹತ್ತಾರು ಕೀಟಗಳು ಕಚ್ಚಿದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇದೆ. ಮಂಡಲದ ಹಾವಿನಲ್ಲಿರುವಂತಹ ವಿಷವನ್ನು ಹೋಲುವ ವಿಷವು ಈ ಕೀಟಗಳಲ್ಲಿದೆ. ಜೇನುಹುಳಗಳಿಗಿಂತ ಎರಡರಷ್ಟು ಅಪಾಯಕಾರಿ' ಎಂದರು. ಅವು ಕಚ್ಚಿದಾಗ, ಅವುಗಳ ಮೂತಿ ತುದಿಯಲ್ಲಿರುವ ಕೊಂಡಿಯು ಮನುಷ್ಯರ ಚರ್ಮದಲ್ಲೇ ಉಳಿದು, ಅದರಿಂದಲೂ ಅಲರ್ಜಿ, ನೋವು, ಊತ ಉಂಟಾಗುತ್ತದೆ ಎಂದರು.

ಚಿನ್ನಪ್ಪನಿಗಂತೂ, ಆ ಗೂಡು ನಮ್ಮ ಮನೆಯ ಹತ್ತಿರ ಇದ್ದರೆ ಮನೆಗೆ ಬರುವ ಎಲ್ಲರಿಗೂ ಅಪಾಯ ಎಂಬ ಅತಿ ಕಾಳಜಿ. ಒಂದು ಸಂಜೆ, ಸೂರ್ಯಾಸ್ತದ ನಂತರ, ಆ ಗೂಡಿಗೆ ಬೆಂಕಿ ಹಚ್ಚಿ ತೆಗೆಯುತ್ತೇನೆ ಎಂದ. ಆದರೂ ನನ್ನ ಮನಸ್ಸಿಗೆ ಕಸಿವಿಸಿ. 'ಇಕಾಲಜಿಯ ಸರಪಣಿಯಲ್ಲಿ ಹುಲಿ ಕಡ್ಜುಳವೂ ಸೇರಿದಂತೆ, ಎಲ್ಲಾ ಜೀವಿಗಳದ್ದೂ ಪ್ರಮುಖ ಪಾತ್ರ. ಪರಿಸರ ಪ್ರಪಂಚದ ಸಮತೋಲನದಲ್ಲಿ ನಾವು ಹಸ್ತಕ್ಷೇಪ ಎಷ್ಟು ಸರಿ?' ಎಂಬ ಯೋಚನೆ. ನಮ್ಮ ತಾಲೂಕಿನ ಹಲವು ಸಮಾನಾಸಕ್ತರ ಒಂದು ಫೇಸ್‌ಬುಕ್ ಗ್ರೂಪ್ ಇದೆ. ಅದರಲ್ಲಿ ನನ್ನ ಈ ತಳಮಳ ತೋಡಿಕೊಂಡೆ.

'ಕೂಡಲೆ ತೆಗೆಸಿ, ಜಾಗ್ರತೆ ವಹಿಸಿ, ಹತ್ತಿರ ಹೋಗಬೇಡಿ, ಅವು ಕಚ್ಚಿದರೆ ಪಾರ್ಟಿ ಪಡ್ಚ, ರಿಸ್ಕ್ ಬೇಡ, ರಾತ್ರಿಯಾದ ನಂತರ ಅವನ್ನು ಓಡಿಸಿ. . . ಜೀವದ ಮೇಲೆ ಆಸೆ ಇದ್ದರೆ, ಅವುಗಳನ್ನು ಮನೆಯಿಂದ ದೂರ ಓಡಿಸಲೇ ಬೇಕು.' ಈ ರೀತಿಯ ಹಲವು ಅಭಿಪ್ರಾಯಗಳು ತೇಲಿಬಂದವು. ಓರ್ವ ಹಿರಿಯರು ತಮ್ಮ ಅನುಭವವನ್ನು ವಿವರವಾಗಿ ಹಂಚಿಕೊಂಡಿದ್ದರು. '1978ರಲ್ಲಿ ನನಗೆ 87 ಹುಲಿ ಕಡ್ಜುಳ ಕಚ್ಚಿದ್ದವು. ಅದೇ ಸಮಯದಲ್ಲಿ ಗೂಡಿಗೆ ಯಾರೊ ಕಲ್ಲು ಹೊಡೆದಿದ್ದರಂತೆ. ನನಗೆ ಗೊತ್ತಿಲ್ಲದೆ ಆ ದಾರಿಯಲ್ಲಿ ಬಂದೆ. ನನಗೆ ಒಂದೇ ಸಮನೆ ಕಚ್ಚಲು ಆರಂಭಿಸಿದವು. ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ. ಮಳೆಗಾಲದ ಆರಂಭದ ದಿನಗಳು. ಹತ್ತಿರದಲ್ಲಿದ್ದ ಒಂದು ಗದ್ದೆಯಲ್ಲಿ ಹೂಟಿ ಮಾಡುತ್ತಿದ್ದ ಓರ್ವ ಪುಣ್ಯಾತ್ಮ ನನ್ನತ್ತ ಕಂಬಳಿ ಎಸೆದು, ಸ್ವಲ್ಪ ಬಚಾವು ಮಾಡಿದ. ನಾನು ಕಂಬಳಿ ಹೊದ್ದುಕೊಂಡು, ಅಲ್ಲೇ ಕುಳಿತೆ. ಮೊದಲಿಗೆ 4 – 5 ಹುಳ ಕಚ್ಚುವ ತನಕ, ದೇಹಕ್ಕೆ ಮೊಳೆ ಹೊಡೆದಂತಹ ನೋವು. ಆನಂತರ ಇಡೀ ದೇಹಕ್ಕೆ ಭಾರೀ ವಿದ್ಯುತ್ ಶಾಕ್ ಹೊಡೆದಂತಹ ಅನುಭವ. ನನಗೆ ವಾಂತಿ ಬೇಧಿ ಶುರು ಆಯಿತು. ಡಾಕ್ಟರು ಒಂದೊಂದೇ ಕೊಂಡಿಗಳನ್ನು ದೇಹದಿಂದ ಚಿಮ್ಮಟ ಹಾಕಿ ಕಿತ್ತು, ಒಟ್ಟು 87 ಕೊಂಡಿಗಳನ್ನು ತೆಗೆದರು. ಸಾವು ಬದುಕಿನ ನಡುವೆ ಹೋರಾಟ ಮಾಡಿ, ಗೆದ್ದು ಬಂದೆ' ಎಂದು, ಹುಲಿ ಕಡ್ಜುಳದಿಂದ ಕಚ್ಚಿಸಿಕೊಂಡವರು ತಮ್ಮ ಅನುಭವವನ್ನು ತೋಡಿಕೊಂಡಿದ್ದರು. ಫೇಸ್‌ಬುಕ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದ ಹೆಚ್ಚಿನವರು ಆ ಗೂಡನ್ನು ಕೂಡಲೆ ತೆಗೆಸುವುದು ಒಳ್ಳೆಯದು, ಇಲ್ಲವಾದರೆ ಜೀವಕ್ಕೆ ಅಪಾಯವಿದೆ ಎಂದೇ ಬರೆದಿದ್ದರು.

ಈ ಕೀಟಗಳ ಕುರಿತು ಇಂಟರ್‌ನೆಟ್‌ನಲ್ಲಿ ಹುಡುಕಿದೆ. ಜಪಾನ್‌ನಲ್ಲಿ ವರ್ಷಕ್ಕೆ ಸರಾಸರಿ 30 ಮಂದಿ ಇವುಗಳ ಕಡಿತದಿಂತ ಸಾಯುತ್ತಾರಂತೆ! ಚೀನಾದಲ್ಲೂ ವಾರ್ಷಿಕ ಸರಾಸರಿ 50 ಜನ ಇವು ಗಳಿಂದ ಸಾಯುತ್ತಾರೆ. ಒಂದು ಗೂಡಿನಲ್ಲಿ 500ಕ್ಕೂ ಹೆಚ್ಚಿನ ಕೀಟಗಳಿರುತ್ತವೆ. ಅವುಗಳ ಗೂಡಿಗೆ ತೊಂದರೆಯಾದರೆ, ಸಿಕ್ಕ ಸಿಕ್ಕವರಿಗೆ ಕಚ್ಚುವುದು ಅವುಗಳ ಗುಣ.

ಮನೆ ಎದುರಿನ ಅಡಿಕೆ ಮರದಲ್ಲಿ ಹಬ್ಬಿದ್ದ ಕಾಳುಮೆಣಸಿನ ಬಳ್ಳಿಗೆ ತಮ್ಮ ಗೂಡನ್ನು ಅಂಟಿಸಿದ್ದ ಆ ಹುಲಿಕಡ್ಜುಳಗಳ ಹಾರಾಟವನ್ನು ಗಮನಿಸತೊಡಗಿದೆ. ಮರದ ತೊಗಟೆಯನ್ನು, ತಮ್ಮ ಎಂಜಲಿನಿಂದ ಅಂಟಿಸುತ್ತಾ, ಗೂಡಿನ ಗಾತ್ರವನ್ನು ನಿಧಾನವಾಗಿ ವೃದ್ಧಿ ಮಾಡುವುದರಲ್ಲಿ ಮಗ್ನವಾಗಿದ್ದವು. ಹತ್ತಿರ ನಿಂತು ನೋಡುವುದರಲ್ಲಿ ಯಾವ ಅಪಾಯವೂ ಇಲ್ಲ. ಅವಷ್ಟಕ್ಕೆ ಅವು ಹಾರಾಡಿಕೊಂಡು, ಸುತ್ತಲಿನ ಪರಿಸರದಲ್ಲಿ ಒಂದಾಗಿ, ತಮ್ಮ ಜೀವನ ಚಕ್ರವನ್ನು ಮುಂದುವರಿಸಿಕೊಂಡು ಬರುತ್ತಿರುವ ಪುಟಾಣಿ ಕೀಟಗಳು. ಅಕಸ್ಮಾತ್ ರೊಚ್ಚಿಗೆದ್ದು, ಹತ್ತಿರ ಸುಳಿದ ಮನುಷ್ಯ ಅಥವಾ ಪ್ರಾಣಿಗಳಿಗೆ ಕಚ್ಚಿದರೆ ಮಾತ್ರ ಅಪಾಯ ಸಂಭಾವ್ಯತೆ.

ಈ ಮಧ್ಯೆ ಚಿನ್ನಪ್ಪ ಫೋನ್ ಮಾಡಿದ್ದ. ನಾಲ್ಕಾರು ದಿನ ಅಕೇಶಿಯಾ ತೋಪು ಕಡಿಯುವ ಕೆಲಸಕ್ಕೆ ಹೋಗ್ತಿದೀನಿ, ಪುರಸೊತ್ತು ಮಾಡಿಕೊಂಡು, ಮನೆ ಹತ್ತಿರ ಬರ್ತೀನಿ, ಕತ್ತಲಾದ ಮೇಲೆಯೇ ಹುಲಿ ಕಡ್ಜುಳದ ಗೂಡು ತೆಗೆಯಲು ಸಾಧ್ಯ ಅಂದ. ಪ್ರತಿ ದಿನ ಈ ರೀತಿ ಅಕೇಶಿಯಾ ಮರ ಕಡಿಯುವ್ಯದರಿಂದ ಅವನಿಗೆ ಒಳ್ಳೆಯ ಸಂಬಳ ದೊರಕುತ್ತಿತ್ತು; ಹಲವರು ಬೈಕ್ ಏರಿ, ಅಕೇಶಿಯಾ ತೋಪಿನ ಜಾಗಕ್ಕೆ ಹೋಗಿ, ಅದನ್ನು ಕಡಿಯುವುದನ್ನು ಉದ್ಯೋಗ ಮಾಡಿಕೊಂಡಿದ್ದರು. ಅಕೇಶಿಯಾ ಮರ ಕಡಿಯುವುದು ನಮ್ಮ ಕಡೆ ಕೆಲವು ಕೃಷಿಕರಿಗೆ, ಈಗ ಒಂದು ಪ್ರಮುಖ ಮೂಲವಾಗಿಬಿಟ್ಟಿದೆ.

ಒಂದೆರಡು ದಿನಗಳಲ್ಲಿ, ನಾನು ತುರ್ತಾಗಿ ಬೆಂಗಳೂರಿಗೆ ಹೊರಡಬೇಕಾಯ್ತು. ರಾತ್ರಿ ಬಸ್ ಏರಿ ಬೆಂಗಳೂರಿಗೆ ಬಂದೆ. ಅಗತ್ಯ ಕೆಲಸದಲ್ಲಿ ಮುಳುಗಿಹೋದೆ; ಹುಲಿ ಕಡ್ಜುಳಗಳ ಗೂಡಿನ ವಿಚಾರ ಮರೆತೇ ಹೋಗಿತ್ತು. ಒಂದು ಸಂಜೆ ಎಂಟು ಗಂಟೆಯ ಸಮಯ. ಮೊಬೈಲ್ ಗಂಟೆ ಬಾರಿಸಿತು. ಚಿನ್ನಪ್ಪ ಫೋನ್ ಮಾಡಿದ್ದ. 'ಹ್ವಾಯ್, ಅಯ್ಯ, ಇವತ್ ನಿಮ್ಮ ಮನೆ ಹತ್ರ ಬಂದಿದ್ದೆ. ಕತ್ತಲಾಗಿತ್ತು. ನೀವು ಇರಲಿಲ್ಲ. ನೀವು ಹೇಳಿದ್ರಲ್ಲ, ಆ ಕಡ್ಜುಳನ ಗೂಡಿನ ವಿಚಾರ. ಅರ್ಧ ಲೀಟರ್ ಡೀಸಲ್ ತಂದು, ಬಟ್ಟೆಯನ್ನು ಅದ್ದಿ, ಒಂದು ಕೋಲಿನ ತುದಿಗೆ ಆ ಬಟ್ಟೆ ಕಟ್ಟಿ, ಗೂಡಿಗೆ ಬೆಂಕಿ ತಾಗಿಸಿದೆ. ಬರ್ ಅಂತ ಉರಿದು ಹೋಯ್ತು. ಇನ್ ಅದರ ಹೆದರಿಕೆ ಇಲ್ಲ.' ಏನೆಂದು ಉತ್ತರಿಸುವುದು ಎಂದು ತಕ್ಷಣ ಹೊಳೆಯದೇ, ಅವನ ಮಾತುಗಳನ್ನು ಪೂರ್ತಿ ಕೇಳಿಸಿಕೊಂಡು, ಫೋನ್ ಡಿಸ್‌ಕನೆಕ್ಟ್ ಮಾಡಿದೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚಳಿ ಬಿಡಿಸಿದ ಲೇಖನ !

ವಿಶ್ವವಾಣಿಯ 'ಸಂ.ಗಮ' ದಲ್ಲಿ (20.11.25) ಹರೀಶ್‌ಕೇರ ಅವರ 'ಮಧ್ಯ ರಾತ್ರಿ ಚಂದ್ರ ಚಳಿಯ ತುಂಬುತಿರುವುದು' ಅಂಕಣ ತುಂಬಾ ಚೆನ್ನಾಗಿ ಮೂಡಿಬಂದಿದೆ. ಒಂದು ಸುಂದರ ಕಾವ್ಯವನ್ನು ಓದಿದಂತೆ ಮನಸ್ಸು ಮುದದಲ್ಲಿ ತೇಲುತ್ತಿತ್ತು. ಕೊರೆಯಲು ಹತ್ತಿದ ಸಂಜೆಯ ಚಳಿ ಕೂಡ ನನ್ನ ಆನಂದಕ್ಕೆ ಭಗ್ನವುಂಟು ಮಾಡಲು ಇಷ್ಟವಿಲ್ಲದೆ ಒಂದಿಷ್ಟು ದೂರ ನಿಂತು ಓದು ಮುಗಿಯುವವರೆಗೆ ಕಾಯುತ್ತಲೇ ಇತ್ತು ಮಾರಾಯ್ರೆ. ಚಂದದ ಬರಹ ಓದಿಸಿದ್ದಕ್ಕೆ ವಿಶ್ವವಾಣಿಗೆ ಧನ್ಯವಾದಗಳು.

ದಿವಸ್ಪತಿ ಭಟ್ ಓಡಲಮನೆ, ಶಿರಸಿ

ಅಜ್ಜಿಯರ ಒಡಲಲ್ಲಿನ ಕಥೆಗಳು, ಮಲೆನಾಡ ಚಿತ್ರಣ, ಬೆಂಗಳೂರಿನ ಚಳಿಗಾಲ, ಎಲ್ಲವನ್ನು ತುಂಬಿಕೊಂಡ ಸಂಪೂರ್ಣ ಲೇಖನ ಇದಾಗಿತ್ತು. ಚಳಿಯ ನಿಯಂತ್ರಣಕ್ಕೆ ಹಲವು ಮುಖಗಳನ್ನು ಲೇಖನ ತೆರೆದಿರಿಸಿತು. ಚಳಿಯ ನಿಭಾಯಿಸಲು ಕೈಗೊಂಡ ಹಲವು ಮಾರ್ಗಗಳ ದರ್ಶನ ಮಾಡಿಸಿತು . ಒಟ್ಟಿನಲ್ಲಿ ಕಾಡುವ ಕೀಟಲೆಯ ಚಳಿಯ ಚಿತ್ರ, ಲೇಖನ ಮನಸ್ಸಿಗೆ ತುಂಬಾ ಹಿಡಿಸಿತು.

– ನಿಂಗಮ್ಮ ಭಾವಿಕಟ್ಟಿ ಹುನಗುಂದ

ಸೈಬರ್ ವಂಚನೆ ಆತಂಕಕಾರಿ

ವಂಚಕರ ಚಾಲಾಕಿತನಕ್ಕೆ ಮದ್ದರೆಯುವವರಾರು (19/11/25) ಲೋಕೇಶ್ ಕಾಯರ್ಗ ಅವರ ಲೋಕಮತ ಅಂಕಣ ಎಲ್ಲರೂ ಓದಲೇಬೇಕಾದ ಮಹತ್ವದ ಸುತ್ತೋಲೆಯಂತಿದೆ. ಪ್ರತಿ ದಿನ ಹಣ ಕಳೆದುಕೊಳ್ಳುವವರ ಸಂಖ್ಯೆ ಏರುತ್ತಲೆ ಇದೆ. ಈ ಸಮಸ್ಯೆಗೆ ಪರಿಹಾರವೆ ಕಾಣಿಸುತ್ತಿಲ್ಲ. ಡಿಜಟಲೀಕರಣದಿಂದ ಎಷ್ಟು ಉಪಯೋಗವೋ, ಅಷ್ಟೇ ಅಪಾಯವೂ ಇದೆ. ರಾಜ್ಯದಲ್ಲಿ 60 ಸಾವಿರಕ್ಕೂ ಹೆಚ್ಚು ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ ಎಂದರೆ ಎಷ್ಟೊಂದು ಅಮಾಯಕರು ಬಲಿಯಾಗಿದ್ದಾರೆ ? ಮೊಬೈಲ್ ನಲ್ಲಿ ಪ್ರತಿ ಬಾರಿ ಕರೆ ಮಾಡಿದಾಗಲು ಎಚ್ಚರಿಕೆಯ ಮಾತುಗಳು ಕೇಳಿಸುತ್ತಿರುತ್ತದೆ. ಬ್ಯಾಂಕಿನವರು ಜಾಗೃತಿ ಸಂದೇಶಗಳನ್ನು ಕಳಿಸುತ್ತಲೇ ಇರುತ್ತಾರೆ. ಅದರೂ ಮುಂಜಾಗ್ರತೆ ವಹಿಸದೆ ಸೈಬರ್ ವಂಚನೆಗೆ ಬಲಿಯಾಗುತ್ತಿದ್ದೇವೆ. ಕಳೆದುಕೊಂಡ ಹಣ ಮರಳಿ ಬರುವುದಿಲ್ಲವೆಂದು ತಿಳಿದು ಎಚ್ಚೆತ್ತುಕೊಂಡು ಜಾಗೃತವಾಗುವುದೊಂದೇ ಇದಕ್ಕೆ ಪರಿಹಾರ.

ಮಾಲಿನಿ ಆರ್.ಪಿ.
ಜುಡಿಶಿಯಲ್ ಬಡಾವಣೆ, ಕನಕಪುರ

ಸರ್ಕಾರದ ದ್ವಂದ್ವ ನಡೆ?

ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ ಮತ್ತು ಕಲಬುರ್ಗಿ ಜಿಲ್ಲೆಗಳು ನಿಗದಿತ ಮಟ್ಟಕ್ಕಿಂತ ಹೆಚ್ಚಿನ ಮಾಲಿನ್ಯ ಹೊಂದಿರುವುದು ಆತಂಕಕಾರಿ. ನಮ್ಮ ರಾಜ್ಯವನ್ನು ವಾಸಯೋಗ್ಯವನ್ನಾಗಿಸಲು ಜನರೆಲ್ಲರೂ ಪರಿಸರದ ಬಗ್ಗೆ ಕಾಳಜಿ ಬೆಳೆಸಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ವರದಿಯಾಗಿದೆ. ಸರಕಾರಗಳು ಕಟ್ಟಡಗಳನ್ನು ಕಟ್ಟಲು, ರಸ್ತೆ ಅಗಲೀಕರಣ ಸೇರಿದಂತೆ ನಾನಾ ಅಭಿವೃದ್ಧಿ ಉದ್ದೇಶಗಳಿಗೆ ಮರಗಳ ಮಾರಣಹೋಮ ನಡೆಸುತ್ತದೆ. ಕೆರೆಗಳನ್ನು ಮುಚ್ಚಿಸುತ್ತದೆ. ಕೈಗಾರಿಕೆಗಳಿಗೆ ಹಾಗೂ ಮನುಜರ ವಾಸಕ್ಕೆ ಎಂದು ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುತ್ತದೆ. ಪ್ರಭಾವಿಗಳ ಅರಣ್ಯದ ಒತ್ತುವರಿ ಗೊತ್ತಿದ್ದರೂ ಕಣ್ಣು ಮುಚ್ಚಿಕೊಂಡಿರುತ್ತದೆ. ಗಣಿ ಮುಂತಾದ ಚಟುವಟಿಕೆಗಳಿಗೆ ಪರವಾನಗಿ ನೀಡುತ್ತದೆ. ಹೊಸ ವಾಹನಗಳಿಗೆ ಯದ್ವಾತದ್ವಾ ಅನುಮತಿ ನೀಡುತ್ತಲೇ ಇದೆ. ಇಷ್ಟೆಲ್ಲಾ ಮಾಡಿ ಮಾಲಿನ್ಯ ಹೆಚ್ಚಾಗಿದೆ ಎಂದು ಆತಂಕಪಡುತ್ತದೆ. ಜನರಿಗೆ ಕಾಳಜಿ ಬೆಳೆಸಿಕೊಳ್ಳಿ ಎನ್ನುತ್ತದೆ. ಇದು ದ್ವಂದ್ವ ನೀತಿ ಅಲ್ಲವೇ? ಸರಕಾರ ಮೊದಲು ಕಾಳಜಿ ವ್ಯಕ್ತಪಡಿಸಿದರೆ ಜನರೂ ಸಹ ಎಚ್ಚರವಾಗಿರುತ್ತಾರೆ. ಇಲ್ಲದಿದ್ದರೆ ಯಥಾ ರಾಜ ತಥಾ ಪ್ರಜಾ ಎಂಬಂತಾಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಶಾಸಕರಿಗೆ ವಿನಾಯಿತಿ, ಅಧಿಕಾರಿಗಳಿಗೆ ನಿಯಮ: ಏಕೀ ತಾರತಮ್ಯ?

2021ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳಡಿ ಸರಕಾರಿ ನೌಕರರು ಸ್ಥಿರಾಸ್ತಿ ವಹಿವಾಟುಗಳಿಗೆ ಪೂರ್ವಾನುಮತಿ ಪಡೆಯುವುದು, ₹50,000 ಕ್ಕಿಂತ ಹೆಚ್ಚಿನ ಚರ ಆಸ್ತಿಗಳನ್ನು ವರದಿ ಮಾಡುವುದು ಕಡ್ಡಾಯ. ಯಾವುದೇ ಆಸ್ತಿ ಖರೀದಿಸುವ ಅಥವಾ ಮಾರಾಟ ಮಾಡುವ ಮೊದಲು ಕಡ್ಡಾಯವಾಗಿ ಸರಕಾರದ ಪೂರ್ವಾನುಮತಿಯನ್ನು ಪಡೆಯಬೇಕು ಇದಕ್ಕೆ ವ್ಯತಿರಿಕ್ತವಾಗಿ, 1984ರ ಕರ್ನಾಟಕ ಲೋಕಾಯುಕ್ತ ಕಾಯಿದೆಯು ಜನಪ್ರತಿನಿಧಿಗಳಿಂದ ಕೇವಲ ವಾರ್ಷಿಕ ಆಸ್ತಿ ಘೋಷಣೆಯನ್ನು ಮಾತ್ರ ಬಯಸುತ್ತದೆ.

ಕೆ.ವಿ.ಚಂದ್ರ ಮೌಳಿ
ಪ್ರಚಲಿತ
vveditoped@gmail.com

ಕರ್ನಾಟಕ ಲೋಕಾಯುಕ್ತ ಕಾಯಿದೆ, 1984ರ ಸೆಕ್ಷನ್ 22 (1) ರ ಪ್ರಕಾರ , ಶಾಸಕರು ಮತ್ತು ಇತರ ಸಾರ್ವಜನಿಕ ಸೇವಕರು ಪ್ರತಿ ವರ್ಷ ಜೂನ್ 30ರೊಳಗೆ ಕುಟುಂಬ ಸದಸ್ಯರು ಸೇರಿದಂತೆ ಆಸ್ತಿ ಮತ್ತು ಹೊಣೆಗಾರಿಕೆಗಳ ವಾರ್ಷಿಕ ಹೇಳಿಕೆಯನ್ನು ಸಲ್ಲಿಸಬೇಕು. ಆದರೆ ಗಮನಾರ್ಹ ಸಂಖ್ಯೆಯ ಶಾಸಕರು ಈ ಕಾನೂನನ್ನು ಪಾಲಿಸುತ್ತಿಲ್ಲ. ಲೋಕಾಯುಕ್ತ ಕಾಯಿದೆಯ ಈ ವಿಧಿ ಸಾಂಕೇತಿಕವೇನಲ್ಲ. ಇದು ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಸಂಪಾದನೆ ವಿರುದ್ಧ ನೈತಿಕ ಮತ್ತು ಕಾನೂನು ತಪಾಸಣೆಯ ಉದ್ದೇಶವನ್ನು ಹೊಂದಿದೆ. ಆದರೆ 2024-25ರ ಸಾಲಿನಲ್ಲೂ ಆರು ಸಚಿವರು, 66 ಶಾಸಕರು ಮತ್ತು 28 ಎಂಎಲ್ಸಿಗಳು ಸೇರಿದಂತೆ ಸುಮಾರು 200 ಶಾಸಕರು ತಮ್ಮ ಆಸ್ತಿ ಮತ್ತು ಋಣ ಬಾಧ್ಯತೆ ಪಟ್ಟಿಯನ್ನು ಸಲ್ಲಿಸಿಲ್ಲ. ಸಚಿವರು ಮತ್ತು ಶಾಸಕರ ಈ ಬೇಜವಾಬ್ದಾರಿ ನಡೆ ಜನಪ್ರತಿನಿಧಿಗಳ ಹೊಣೆಗಾರಿಕೆ, ಪಾರದರ್ಶಕತೆ ಮತ್ತು ಕಾನೂನಿನ ಮೇಲಿನ ಗೌರವವನ್ನು ದುರ್ಬಲಗೊಳಿಸುತ್ತದೆ.

ಲೋಕಾಯುಕ್ತ ಕಾನೂನಿನ ಅಧಿನಿಯಮ 22 (2) ಮತ್ತು 22 (3) ಅಡಿಯಲ್ಲಿ, ಆಸ್ತಿ ಮತ್ತು ಋಣ ಪಟ್ಟಿಯನ್ನು ಸಲ್ಲಿಸದ ಶಾಸಕರಿಂದ ವಿವರಣೆ ಕೇಳಲು ಲೋಕಾಯುಕ್ತರಿಗೆ ಅಧಿಕಾರವಿದೆ. ಅಗತ್ಯ ಬಿದ್ದರೆ ಇವರ ವಿರುದ್ಧ ಶಿಸ್ತುಕ್ರಮಕ್ಕೆ ಸಕ್ಷಮ ಪ್ರಾಧಿಕಾರಗಳಾದ ಸ್ಪೀಕರ್ ಅಥವಾ ಸಭಾಪತಿ ಇಲ್ಲವೇ ರಾಜ್ಯಪಾಲರಿಗೆ ವರದಿ ಮಾಡಬಹುದು. ಆಸ್ತಿ ವಿವರ ಸಲ್ಲಿಸದ ಲೋಪವು ಉದ್ದೇಶಪೂರ್ವಕವೆಂದು ಅಥವಾ ದುರ್ನಡತೆಯೆಂದು ಕಂಡುಬಂದರೆ ಲೋಕಾ ಕಾಯಿದೆ ಅಧಿನಿಯಮ 12(3)ರನ್ವಯ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಬಹುದು. ಆದರೆ ಈ ಕಾಯಿದೆಯು ತಪ್ಪಿತಸ್ಥರಿಗೆ ದಂಡ ವಿಧಿಸಲು ಇಲ್ಲವೇ ಅನರ್ಹಗೊಳಿಸಲು ಲೋಕಾಯುಕ್ತಕ್ಕೆ ಅಧಿಕಾರ ನೀಡಿಲ್ಲ. ಲೋಕಾ ಕಾನೂನಿನ ಜಾರಿಯು ಸಂಪೂರ್ಣವಾಗಿ ಇತರರ ರಾಜಕೀಯ ಅಥವಾ ಆಡಳಿತಾತ್ಮಕ ಇಚ್ಛಾಶಕ್ತಿಯನ್ನು ಅವಲಂಬಿಸಿದೆ. ಶಿಕ್ಷೆ ಇಲ್ಲ ಎಂಬ ಖಾತರಿಯಿಂದಲೇ ಹೆಚ್ಚಿನ ಶಾಸಕರು ಆಸ್ತಿ ವಿವರ ನೀಡುವ ಗೋಜಿಗೆ ಹೋಗುವುದಿಲ್ಲ. ಒಟ್ಟಾರೆ ಕಾನೂನಿನ ಈ ಲೋಪ ಲೋಕಾಯುಕ್ತರ ಪಾತ್ರವನ್ನು ದಂಡನೆಗೆ ಅಧಿಕಾರವಿಲ್ಲದ, ನೈತಿಕ ಕಾವಲುಗಾರನ ಮಟ್ಟಕ್ಕೆ ಇಳಿಸಿದೆ.

ಇದೇ ನಿಯಮವು ಸರಕಾರಿ ನೌಕರರ ವಿಚಾರಕ್ಕೆ ಬಂದಾಗ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಸಂವಿಧಾನದ 309 ನೇ ವಿಧಿಯ ಅಡಿಯಲ್ಲಿ ರಚಿಸಲಾದ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 2021ರ ನಿಯಮ 24 ರ ಪ್ರಕಾರ, ಎಲ್ಲಾ ನೌಕರರು ತಾವು ಸೇವೆಗೆ ಸೇರಿದ ಮೂರು ತಿಂಗಳೊಳಗೆ ಮತ್ತು ನಂತರ ವಾರ್ಷಿಕವಾಗಿ ಡಿಸೆಂಬರ್ 31 ರೊಳಗೆ, ತಮ್ಮ ಮತ್ತು ತಮ್ಮ ಕುಟುಂಬ ಸದಸ್ಯರ ಚರ ಮತ್ತು ಸ್ಥಿರಾಸ್ತಿ, ಋಣಬಾಧ್ಯತೆಗಳ ವಿವರವಾದ ವರದಿಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು. ಇದಕ್ಕೆ ವಿಫಲನಾದ ಸರಕಾರಿ ನೌಕರನ ವಿರುದ್ಧ ಸದರಿ ನಿಯಮದ 3(1) (ಜಿಜಿಜಿ) ರ ಅಡಿಯಲ್ಲಿ ನಡವಳಿಕೆಯ ಉಲ್ಲಂಘನೆ ಮತ್ತು ಸರಕಾರಿ ಸೇವಕನಿಗೆ ಉಚಿತವಲ್ಲದ ವರ್ತನೆ ಎಂದು ಪರಿಗಣಿಸಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ-1957 ರ ನಿಯಮ 11 ರ ಅಡಿಯಲ್ಲಿ ಶಿಸ್ತು ಕ್ರಮವನ್ನು ಜರುಗಿಸಲು ಅವಕಾಶವಿದೆ.

ಆಸ್ತಿ ವಿವರ ಸಲ್ಲಿಸದ ನೌಕರರ ಅಪರಾಧದ ತೀವ್ರತೆಯನ್ನು ಅವಲಂಬಿಸಿ, ದಂಡ, ವಾಗ್ದಂಡನೆ, ವೇತನ ಹೆಚ್ಚಳ ಅಥವಾ ಬಡ್ತಿ ತಡೆ, ನಷ್ಟ ವಸೂಲಾತಿ ಅಥವಾ ಶ್ರೇಣಿ ಅಥವಾ ವೇತನದಲ್ಲಿ ಕಡಿತ, ಕಡ್ಡಾಯ ನಿವೃತ್ತಿ ಅಥವಾ ವಜಾ ಸೇರಿದಂತೆ ಕಠಿಣ ಕ್ರಮ ಜರುಗಿಸಲು ಅವಕಾಶವಿದೆ. ಹೆಚ್ಚುವರಿಯಾಗಿ, ಡಿಪಿಎಆರ್ ಸುತ್ತೋಲೆಗಳ ಪ್ರಕಾರ, ಆಸ್ತಿ ವಿವರಗಳನ್ನು ತಡವಾಗಿ ಸಲ್ಲಿಸಿದ ಅಥವಾ ಸಲ್ಲಿಸದ, ವಿಚಕ್ಷಣೆಗೆ ಅನುಮತಿ ನಿರಾಕರಿಸಿದ ನೌಕರರ ಸೇವಾ ದಾಖಲೆಯಲ್ಲಿ ಪ್ರತಿಕೂಲ ನಮೂದು ದಾಖಲಿಸಲು ಅವಕಾಶವಿದೆ. ಇಂಥವರ ಬಡ್ತಿ ಅಥವಾ ವರ್ಗಾವಣೆಯನ್ನು ನಿರ್ಬಂಧಿಸಬಹುದು.

2021ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳಡಿ ಸರಕಾರಿ ನೌಕರರು ಸ್ಥಿರಾಸ್ತಿ ವಹಿವಾಟುಗಳಿಗೆ ಪೂರ್ವಾನುಮತಿ ಪಡೆಯುವುದು, ₹50,000 ಕ್ಕಿಂತ ಹೆಚ್ಚಿನ ಚರ ಆಸ್ತಿಗಳನ್ನು ವರದಿ ಮಾಡುವುದು ಕಡ್ಡಾಯ. ಯಾವುದೇ ಆಸ್ತಿ ಖರೀದಿಸುವ ಅಥವಾ ಮಾರಾಟ ಮಾಡುವ ಮೊದಲು ಕಡ್ಡಾಯವಾಗಿ ಸರಕಾರದ ಪೂರ್ವಾನುಮತಿಯನ್ನು ಪಡೆಯಬೇಕು.

ಸಾರ್ವಜನಿಕ ಸೇವೆ ಎನ್ನುವುದು ನಂಬಿಕೆಯೇ ಹೊರತು ಸವಲತ್ತಲ್ಲ. ಆದ್ದರಿಂದ, ವಾರ್ಷಿಕ ಆಸ್ತಿ ಬಹಿರಂಗಪಡಿಸುವಿಕೆಯು ಕೇವಲ ಅಧಿಕಾರಶಾಹಿ ಬಾಧ್ಯತೆಯಲ್ಲ, ಆದರೆ ನೈತಿಕ ಜವಾಬ್ದಾರಿಯಾಗಿದೆ. ಈ ತತ್ವವನ್ನು ಗೌರವಿಸುವ ಸರಕಾರಿ ನೌಕರನು ಆಡಳಿತದ ವಿಶ್ವಾಸಾರ್ಹತೆಯನ್ನು ಬಲಪಡಿಸುತ್ತಾನೆ, ಇದನ್ನು ನಿರ್ಲಕ್ಷಿಸುವವರು ನೈತಿಕ ಆಡಳಿತದ ಅಡಿಪಾಯವನ್ನು ದುರ್ಬಲಗೊಳಿಸುತ್ತಾರೆ. ಪ್ರತಿಯೊಬ್ಬ ಸರಕಾರಿ ಸೇವಕನ ಮೇಲೆ ಜನರ ಹಣ, ಅಧಿಕಾರ ಮತ್ತು ವಿಶ್ವಾಸವನ್ನು ವಹಿಸಲಾಗಿದೆ. ಆದ್ದರಿಂದ ಅವರು ಕಚೇರಿಯಲ್ಲಿ ಮತ್ತು ಖಾಸಗಿ ಜೀವನದಲ್ಲಿ ಅವರ ನಡವಳಿಕೆಗೆ ಜವಾಬ್ದಾರರಾಗಿರಬೇಕು. ಈ ಹೊಣೆಗಾರಿಕೆಯನ್ನು ಎತ್ತಿಹಿಡಿಯಲು

ಪ್ರಮುಖ ಕಾರ್ಯವಿಧಾನವೆಂದರೆ, ವಿಶೇಷವಾಗಿ ಸರಕಾರಿ ನೌಕರರಿಂದ, ಆಸ್ತಿ ಮತ್ತು ಹೊಣೆಗಾರಿಕೆಗಳ ವಾರ್ಷಿಕ ಘೋಷಣೆ ಮಾಡಬೇಕಾಗಿರುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, 1984ರ ಕರ್ನಾಟಕ ಲೋಕಾಯುಕ್ತ ಕಾಯಿದೆಯು ಜನಪ್ರತಿನಿಧಿಗಳಿಂದ ಕೇವಲ ವಾರ್ಷಿಕ ಆಸ್ತಿ ಘೋಷಣೆಯನ್ನು ಮಾತ್ರ ಬಯಸುತ್ತದೆ. ಇವರು ಯಾವುದೇ ಸ್ಥಿರ, ಚರ ಆಸ್ತಿ ವಹಿವಾಟಿಗೆ ಪೂರ್ವಾನುಮತಿ ಪಡೆಯಬೇಕಿಲ್ಲ. ಅಂದರೆ ಕರ್ನಾಟಕದ ಶಾಸಕರು ಯಾವುದೇ ಕಡ್ಡಾಯ ಶಾಸನಬದ್ಧ ನಿಯಮಗಳಿಗೆ ಒಳಪಟ್ಟಿರುವುದಿಲ್ಲ. ಅವರ ನಡವಳಿಕೆಯು ಕೇವಲ ಶಾಸಕಾಂಗದ ಕಾರ್ಯವಿಧಾನ ಮತ್ತು ವ್ಯವಹಾರ ನಿರ್ವಹಣೆ ನಿಯಮಗಳಿಂದ ನಿರ್ದೇಶಿತವಾಗಿದೆ. ಶಾಸನಬದ್ಧವಲ್ಲದ ಈ ನಿಯಮಗಳು ನೀತಿ ಸಂಹಿತೆ ಮಾದರಿಯಲ್ಲಿದ್ದು ಅನುಷ್ಠಾನ ದೂರದ ಮಾತು.

ಇದರಿಂದಾಗಿ ಎರಡು ವಿಭಿನ್ನ ಕಾನೂನುಗಳು ಚುನಾಯಿತ ಪ್ರತಿನಿಧಿಗಳು ಮತ್ತು ಸರಕಾರಿ ನೌಕರರ ನಡುವೆ ಸ್ಪಷ್ಟವಾದ ಹೊಣೆಗಾರಿಕೆಯ ಅಂತರವನ್ನು (accountability gap) ಸೃಷ್ಟಿಸುತ್ತವೆ. ಶಾಸಕರು ಮತ್ತು ಸರಕಾರಿ ನೌಕರರ ನಡುವಿನ ವ್ಯತ್ಯಾಸವು ದ್ವಂದ್ವ ನೀತಿಯನ್ನು (double standard) ಎತ್ತಿ ತೋರಿಸುತ್ತದೆ. ಸರಕಾರಿ ನೌಕರರಿಂದ ಸಮಗ್ರತೆ ಮತ್ತು ಪಾರದರ್ಶಕತೆಯನ್ನು ಬಯಸುವ ಶಾಸಕರು, ತಾವೇ ಅವುಗಳನ್ನು ಅನುಸರಿಸಲು ಹಿಂಜರಿಯುತ್ತಾರೆ. ರಾಜಕೀಯ ಸ್ವಹಿತಾಸಕ್ತಿ ಮತ್ತು ಹಿತಾಸಕ್ತಿ ಸಂಘರ್ಷಗಳು ತಮ್ಮದೇ ಶ್ರೇಣಿಯವರ ಮೇಲೆ ಕಠಿಣ ದಂಡ ವಿಧಿಸದಂತೆ ತಡೆಯುತ್ತವೆ.

ಜನಪ್ರತಿನಿಧಿಗಳು ಕಾನೂನಿನ ವಿನಾಯಿತಿ ಮತ್ತು ರಿಯಾಯಿತಿಗಳನ್ನು ತಮ್ಮ ಸವಲತ್ತು ಎಂದು ಭಾವಿಸುತ್ತಾರೆ. ವಾರ್ಷಿಕ ಆಸ್ತಿ ವಿವರ ಘೋಷಣೆಯಂತಹ ನಿಯಮಗಳನ್ನು ಇವರು ತಮ್ಮ ಕಡ್ಡಾಯ ಬಾಧ್ಯತೆ ಎಂದು ಪರಿಗಣಿಸದೆ ಕೇವಲ ಔಪಚಾರಿಕತೆ (formality) ಎಂದು ಪರಿಗಣಿಸುತ್ತಾರೆ. ನೈತಿಕವಾಗಿ ಮತ್ತು ಸಹಜ ಕಾನೂನು ತತ್ವದಡಿ ಇದು ಸಮರ್ಥನೀಯವಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಅಪಾರವಾದ ಸಾರ್ವಜನಿಕ ಅಧಿಕಾರ ಮತ್ತು ಸಂಪನ್ಮೂಲಗಳನ್ನು ವಹಿಸಿಕೊಡಲಾಗಿರುತ್ತದೆ. ಇವರ ಪ್ರಾಮಾಣಿಕತೆಗೆ ಮಾನದಂಡವನ್ನು ನಿಗದಿಪಡಿಸುವಲ್ಲಿ ವಿಫಲವಾದರೆ ಸಾರ್ವಜನಿಕರ ನಂಬಿಕೆ ಕುಸಿಯುತ್ತದೆ. ಇದು ಪ್ರಜಾಸತ್ತೆಯ ಆಡಳಿತವನ್ನು ದುರ್ಬಲಗೊಳಿಸುತ್ತದೆ.

ಕಾನೂನುಗಳ ಈ ದ್ವಂದ್ವ ಸಾರ್ವಜನಿಕ ಕಚೇರಿಯಲ್ಲಿ ಸಮಾನ ಹೊಣೆಗಾರಿಕೆಯ ತತ್ವವನ್ನು ದುರ್ಬಲಗೊಳಿಸುತ್ತದೆ. ಪಾರದರ್ಶಕತೆ ಕಾರ್ಯವಿಧಾನಗಳ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕಡಿಮೆ ಮಾಡುತ್ತದೆ. ನಾಗರಿಕರಿಂದ ಮತ್ತು ಅಧಿಕಾರಿಗಳಿಂದ ಪ್ರಾಮಾಣಿಕತೆಯನ್ನು ನಿರೀಕ್ಷಿಸುವ ಶಾಸಕರು, ಇದೇ ಅಥವಾ ಇದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಪಾರದರ್ಶಕತೆ ಮತ್ತು ಸಮಗ್ರತೆಯ ಮಾನದಂಡಗಳಿಗೆ ಬದ್ಧರಾಗಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರದರ್ಶಕತೆ ಅತಿ ಮುಖ್ಯ. ಈ ತತ್ವದ ಉಲ್ಲಂಘನೆಗಳು ಪರಿಣಾಮಗಳನ್ನು ಎದುರಿಸಬೇಕು. ಕರ್ನಾಟಕದ ಶಾಸಕರು ಕಾನೂನಿಗೆ ತಾವು ಹೊಣೆಗಾರರು ಎಂಬುದನ್ನು ತೋರಿಸಬೇಕು. ಈ ಮೂಲಕ ಕಾನೂನಿನ ಸಮಾನತೆಯನ್ನು ಎತ್ತಿ ಹಿಡಿಯಬೇಕು.

ರಾಜ್ಯದಲ್ಲಿ ಸ್ವಚ್ಛ ಆಡಳಿತದಲ್ಲಿ ನಂಬಿಕೆಯನ್ನು ಮರುಸ್ಥಾಪಿಸಬೇಕಾದರೆ ಲೋಕಾಯುಕ್ತ ಕಾಯಿದೆಯ ಸೆಕ್ಷನ್ 22(1) ಅನ್ನು ತಿದ್ದುಪಡಿ ಮಾಡಿ, ಅಗತ್ಯವಿರುವ ದಾಖಲೆಗಳು ಅಥವಾ ಮಾಹಿತಿಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸಲು ವಿಫಲರಾದ ಸಾರ್ವಜನಿಕ ಸೇವಕರಿಗೆ ಸೂಕ್ತ ದಂಡನೆ ನಿಗದಿ ಮಾಡಬೇಕು. ಸರಕಾರಿ ಅಧಿಕಾರಿಗಳಂತೆ ಸಂಬಳ, ಪಿಂಚಣಿ ಪಡೆಯುವ ಜನಪ್ರತಿನಿಧಿಗಳಿಗೆ ನಾಗರಿಕ ಸೇವೆಯ ಎಲ್ಲ ಕಾನೂನು ಮಾಪನಗಳು ಅನ್ವಯವಾಗಬೇಕು. ವಾರ್ಷಿಕ ಆಸ್ತಿ ವಿವರ ಘೋಷಿಸದ, ಆಸ್ತಿ ಖರೀದಿ/ಮಾರಾಟದಂತಹ ವಿಚಾರದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದ ಶಾಸಕರನ್ನು ನಿರ್ದಿಷ್ಟ ಅವಧಿಗೆ ಅಮಾನತುಗೊಳಿಸುವುದು, ತಪ್ಪಿತಸ್ಥರ ಹೆಸರನ್ನು ಸಾರ್ವಜನಿಕವಾಗಿ ಪ್ರಕಟಿಸುವುದು, ಅಥವಾ ಭವಿಷ್ಯದಲ್ಲಿ ಯಾವುದೇ ಚುನಾವಣೆಗೆ ಸ್ಪರ್ಧಿಸದಂತೆ ತಡೆಯುವುದು, ಯಾವುದೇ ಹುದ್ದೆ ಅಥವಾ ಕಚೇರಿಯನ್ನು ಹೊಂದಲು ಅನರ್ಹರೆಂದು ಘೋಷಿಸುವುದು ಅವಶ್ಯ.

ಜನಪ್ರತಿನಿಧಿಗಳ ಹೊಣೆಗಾರಿಕೆ ವಿಚಾರದಲ್ಲಿ ಲೋಕಾಯುಕ್ತರು ಕೇವಲ ವರದಿ ಮಾಡುವುದರ ಮೇಲೆ ಅವಲಂಬಿತರಾಗದೆ, ನೇರವಾಗಿ ಕಾನೂನು ಕ್ರಮ ಜಾರಿಗೊಳಿಸುವ ಅಧಿಕಾರ ಹೊಂದಿರಬೇಕು. ಜನಪ್ರತಿನಿಧಿಗಳ ಆಸ್ತಿ ಘೋಷಣೆಗಳು ಲೋಕಾಯುಕ್ತರ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಲಭ್ಯವಿರಬೇಕು, ನಾಗರಿಕರ ಪರಿಶೀಲನೆ ಮತ್ತು ಮಾಧ್ಯಮಗಳ ಮೇಲ್ವಿಚಾರಣೆಗೆ ಅವಕಾಶ ನೀಡಬೇಕು. ಶಾಸಕರು ಮತ್ತು ಅಧಿಕಾರಿಗಳು ಕರ್ತವ್ಯ ಲೋಪ ಎಸಗಿದಲ್ಲಿ ಸ್ವಯಂಚಾಲಿತ ಪರಿಣಾಮಗಳನ್ನು ಎದುರಿಸಬೇಕಾದ ಕಟ್ಟುನಿಟ್ಟಾದ ಕಾಲಮಿತಿಯನ್ನು ನಿಗದಿ ಮಾಡಬೇಕು.

ಕಟ್ಟುನಿಟ್ಟಾದ ಜಾರಿ ಮತ್ತು ಸ್ಪಷ್ಟತೆಯಿಲ್ಲದ ಕಾನೂನುಗಳು, ನಿಯಮಗಳು ಕಡತಕ್ಕಷ್ಟೇ ಸೀಮಿತವಾಗುತ್ತವೆ. ನಿಯಮಗಳ ಅನುಸರಣೆಯ ಕೊರತೆಯು ದಂಡಮುಕ್ತ ಸಂಸ್ಕೃತಿಯನ್ನು ಬೆಳೆಸುತ್ತದೆ, ಸಾರ್ವಜನಿಕರ ನಂಬಿಕೆಯನ್ನು ಹಾಳುಮಾಡುತ್ತದೆ. ಪ್ರಜಾಪ್ರಭುತ್ವ ಸಂಸ್ಥೆಗಳ ಸಮಗ್ರತೆ (integrity) ಯನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ, ದೃಢವಾದ ಆಡಳಿತಕ್ಕಾಗಿ (robust governance) ಬಹಿರಂಗ ಘೋಷಣೆಯ ಕಾನೂನುಗಳನ್ನು (disclosure laws) ಮತ್ತು ದಂಡ (penalties) ಗಳನ್ನು ಬಲಪಡಿಸುವುದು ಅತ್ಯಗತ್ಯ.

ಆಸ್ತಿ ಬಹಿರಂಗಪಡಿಸದ ಶಾಸಕರ ಬಗ್ಗೆ ಮಾಧ್ಯಮಗಳ ಮೌನವು ಸಮಾಜದ ನೈತಿಕ ಮತ್ತು ಪ್ರಜಾಪ್ರಭುತ್ವದ ವೈಫಲ್ಯವಾಗಿದೆ, ಇದು ಭ್ರಷ್ಟಾಚಾರ ಹುಲುಸಾಗಿ ಬೆಳೆಯಲು ಮತ್ತು ಸಾರ್ವಜನಿಕರ ನಂಬಿಕೆ ನಶಿಸಲು ಅವಕಾಶ ನೀಡುತ್ತದೆ. ಜಾಗೃತ ಕಾವಲುಗಾರರಂತೆ ಮಾಧ್ಯಮಗಳು ಪಾರದರ್ಶಕತೆಯ ಲೋಪಗಳನ್ನು ಎತ್ತಿ ತೋರಿಸಬೇಕು. ಸಚಿವರೂ ಸೇರಿದಂತೆ ರಾಜಕೀಯ ಗಣ್ಯರನ್ನು ಹೊಣೆಗಾರರನ್ನಾಗಿ ಮಾಡಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಲೋಕಾಯುಕ್ತರ ಜಾರಿ ಅಧಿಕಾರಗಳನ್ನು ಸರಕಾರಿ ನೌಕರರಿಗೆ ಅನ್ವಯವಾಗುವ ಅಧಿಕಾರಗಳೊಂದಿಗೆ ಜೋಡಿಸುವ ಮೂಲಕ, ಕರ್ನಾಟಕವು ಎಲ್ಲಾ ಹಂತದ ಸಾರ್ವಜನಿಕ ಕಚೇರಿಗಳಲ್ಲಿ ಸ್ಥಿರವಾದ ಹೊಣೆಗಾರಿಕೆ, ಸಮಗ್ರತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಬಹುದು.

ಬಾಯ್ಲರ್‌ಗಳ ಉಪ ನಿರ್ದೇಶಕರು (ನಿವೃತ್ತ)
ಮೈಸೂರು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 199

ಸಮಾಚಾರ ಸಣ್ಣದಲ್ಲ

ಒಕ್ಕೂಟ ಸಾಂಗತ್ಯಕ್ಕೆ ರಾಹುಲ್ ವಿದಾಯ

ದೆಹಲಿ: ಬಿಹಾರ ವಿಧಾನಸಭಾ ಚುನಾವಣೆಯ ಹೀನಾಯ ಸೋಲಿನ ಬಳಿಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಒಕ್ಕೂಟ'ವಾಗಿ ಚುನಾವಣೆಗಳನ್ನು ಎದುರಿಸುವ ವಿಚಾರದಲ್ಲಿ ಆಸಕ್ತಿ ಕಳೆದುಕೊಂಡಿದ್ದಾರೆ. ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ಪಕ್ಷವನ್ನು ಏಕಾಂಗಿಯಾಗಿಯೇ ಕಣಕ್ಕಿಳಿಸಲು ನಿರ್ಧರಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. 'ಇಂಡಿಯ' ಒಕ್ಕೂಟದಿಂದಲೂ ಹೊರಬರಲು ಕಾಂಗ್ರೆಸ್ ಚಿಂತಿಸುತ್ತಿದೆ. ರಾಹುಲ್ ಗಾಂಧಿ ಅವರೂ 'ಇಂಡಿ' ಒಕ್ಕೂಟಕ್ಕೆ ಅಂತ್ಯ ಹಾಡಲು ಒಪ್ಪಿದ್ದಾರೆ ಎಂದು ಹೇಳಲಾಗಿದೆ. ರಾಷ್ಟ್ರಮಟ್ಟದಲ್ಲಿ 'ಇಂಡಿ' ಒಕ್ಕೂಟದ ಅಗತ್ಯವಿಲ್ಲ. ಅಗತ್ಯ ಬಿದ್ದರೆ ರಾಜ್ಯ ಮಟ್ಟದಲ್ಲಿ ಒಕ್ಕೂಟದ ಜತೆ ಹೋಗುವುದು. ಇಲ್ಲವಾದರೆ ಮುಂಬರುವ ಚುನಾವಣೆಗಳಲ್ಲಿ ಏಕಾಂಗಿ ಸ್ಪರ್ಧೆಗೆ ಕಾಂಗ್ರೆಸ್ ಮುಂದಾಗಲಿದೆ ಎಂದು ಹೇಳಿದ್ದಾರೆಂದು ತಿಳಿದುಬಂದಿದೆ.

ಕಾಶ್ಮೀರ ಟೈಮ್ಸ್ ಕಚೇರಿ: ಪಿಸ್ತೂಲ್-ಗುಂಡು ಪತ್ತೆ

ಶ್ರೀನಗರ: ಜಮ್ಮು-ಕಾಶ್ಮೀರದ ತನಿಖಾ ಸಂಸ್ಥೆ 'ಎಸ್‌ಐಎ' ಗುರುವಾರ ನಸುಕಿನ 6 ಗಂಟೆಗೇ ಜಮ್ಮು ಭಾಗದ ಪ್ರಮುಖ ದಿನಪತ್ರಿಕೆ, ಪತ್ರಕರ್ತ ವೇದ್ ಭಾಸಿನ್ 1954ರಲ್ಲಿ ಸ್ಥಾಪಿಸಿದ 'ಕಾಶ್ಮೀರ ಟೈಮ್ಸ್'ನ ಪ್ರಧಾನ ಕಚೇರಿಗೆ ಹಠಾತ್ ದಾಳಿ ಮಾಡಿದೆ.

ಪತ್ರಿಕೆಯ ಜಮ್ಮು ವ್ಯವಸ್ಥಾಪಕ ಸಂಜೀವ್ ಕೆರ್ನಿ ಮನೆಗೆ ತೆರಳಿ ಅವರನ್ನು ಕರೆದೊಯ್ದು ಕಚೇರಿ ಬೀಗ ತೆಗೆಸಲಾಗಿದೆ. ಕಚೇರಿ ಶೋಧ ವೇಳೆ 1 ಪಿಸ್ತೂಲ್ ಮತ್ತು ಗುಂಡುಗಳು, ಎಕೆ-47 ರೈಫಲ್‌ನಲ್ಲಿ ಬಳಸುವ ಗುಂಡುಗಳ ರಾಶಿ, ಗ್ರನೇಡ್ ಲಿವರ್‌ಗಳು, ಸ್ಫೋಟಕ ಸಾಮಗ್ರಿಗಳು ಪತ್ತೆಯಾಗಿವೆ. ಇತರೆ ಶಸ್ತ್ರ ಸಂಬಂಧಿತ ವಸ್ತುಗಳನ್ನೂ ವಶಪಡಿಸಿಕೊಳ್ಳಲಾಗಿದೆ. 'ಎಸ್‌ಐಎ' ಅಧಿಕಾರಿಗಳ ಪ್ರಕಾರ, ರಾಷ್ಟ್ರ ವಿರೋಧಿ ಚಟುವಟಿಕೆಗಳು, ಭಯೋತ್ಪಾದಕ ಸಿದ್ಧಾಂತಗಳನ್ನು ಬೆಂಬಲಿಸುವುದು ಮತ್ತು ದೇಶವಿರೋಧಿ ಪ್ರಚಾರ ನಡೆಸುತ್ತಿದ್ದ ಆರೋಪ ಕೇಳಿಬಂದಿದ್ದರಿಂದ ಪತ್ರಿಕೆ ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಕೆಲ ದಿನಗಳ ಹಿಂದೆಯೂ ಪತ್ರಿಕೆ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು ಎಂದು ಮೂಲಗಳು ತಿಳಿಸಿವೆ. ಸದ್ಯ ಪತ್ರಿಕೆಯನ್ನು ವೇದ್ ಅವರ ಪುತ್ರಿ ಅನುರಾಧಾ ಭಾಸಿನ್(ವ್ಯವಸ್ಥಾಪಕ ಸಂಪಾದಕಿ) ಮತ್ತು ಅಳಿಯ ಪ್ರಬೋಧ್ ಜಮ್ವಾಲ್ (ಸಂಪಾದಕ) ನಡೆಸುತ್ತಿದ್ದಾರೆ. 2019ರಲ್ಲಿ ವಿಧಿ 370 ರದ್ದು ಬಳಿಕ ಇಬ್ಬರೂ ಅಮೆರಿಕದಲ್ಲಿ ನೆಲೆಸಿದ್ದಾರೆ. ಸದ್ಯ ಮುದ್ರಣ ಆವೃತ್ತಿ ಸ್ಥಗಿತವಾಗಿದ್ದು, ಆನ್‌ಲೈನ್ ಆವೃತ್ತಿ ಪ್ರಕಟವಾಗುತ್ತಿದೆ.

ತಲಾಖ್ ಎ ಹಸನ್‌ಗೆ ನಿಷೇಧ: ಸುಪ್ರೀಂ ಇಂಗಿತ

ದೆಹಲಿ: ಮುಸ್ಲಿಂ ಪತಿಯು ತಿಂಗಳಿಗೆ ಒಂದು ಸಲದಂತೆ ಮೂರು ತಿಂಗಳ ಕಾಲ ತಲಾಖ್ ಹೇಳುವ ಮೂಲಕ ಪತ್ನಿಗೆ ವಿಚ್ಛೇದನ ನೀಡುವ 'ತಲಾಖ್ ಎ ಹಸನ್' ಪದ್ಧತಿ ರದ್ದುಗೊಳ್ಳಬೇಕಿದೆ ಎಂಬ ಇಂಗಿತವನ್ನು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದೆ.

ಈ ವಿಷಯವನ್ನು ಐವರು ನ್ಯಾಯಾಧೀಶರ ಸಂವಿಧಾನ ಪೀಠಕ್ಕೆ ಉಲ್ಲೇಖಿಸಲು ಗಂಭೀರ ಚಿಂತನೆ ನಡೆಸಲಾಗುತ್ತಿದೆ ಎಂದು ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಉಜ್ವಲ್ ಭುಯಾನ್ ಮತ್ತು ನ್ಯಾ.ಎನ್.ಕೆ.ಸಿಂಗ್ ಅವರನ್ನೊಳಗೊಂಡ ತ್ರಿಸದಸ್ಯ ಪೀಠ ಬುಧವಾರ ಹೇಳಿದೆ. ತಲಾಖ್ ಎ ಹಸನ್ ಪದ್ಧತಿ ನಿಷೇಧ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ತ್ರಿಸದಸ್ಯ ಪೀಠ, ಈ ಪದ್ಧತಿ ಮುಸ್ಲಿಂ ಮಹಿಳೆಯರಿಗೆ ಸಂಕಷ್ಟಕಾರಿಯಾಗಿದೆ. ಸಮಾಜದ ಮೇಲೆ ನಕಾರಾತ್ಮಕ ಪರಿಣಾಮ ಬೀರುವಂತಹುದಾಗಿದೆ. ಈ ಪದ್ಧತಿ ಆಧುನಿಕ ಸಮಾಜಕ್ಕೆ ತಕ್ಕದಾಗಿಲ್ಲ. ಹಾಗಾಗಿ, ನ್ಯಾಯಾಂಗದ ಹಸ್ತಕ್ಷೇಪ ಅಗತ್ಯವಾಗಿದೆ. ನಾಗರಿಕ ಸಮಾಜವೊಂದು ಮಹಿಳೆಯರ ಘನತೆಯನ್ನು ಹೀಗೆ ಹಾಳು ಮಾಡುವ ಪದ್ಧತಿಗಳನ್ನು ಅನುಸರಿಸಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ. 'ತಲಾಕ್ ಎ ಬಿದ್ದತ್'ಗಿಂತ ತಲಾಕ್ ಎ ಹಸನ್ ಪದ್ಧತಿ ಬಹಳ ಭಿನ್ನವಾಗಿದೆ. ಒಮ್ಮೆಲೇ 3 ಬಾರಿ ತಲಾಖ್ ಹೇಳಿ ಮುಸ್ಲಿಂ ಪತ್ನಿಗೆ ವಿಚ್ಛೇದನ ನೀಡುವ 'ತ್ರಿವಳಿ ತಲಾಖ್' ಪದ್ಧತಿಯನ್ನು ಭಾರತ ಸರಕಾರ ಈಗಾಗಲೇ ನಿಷೇಧಿಸಿ 2019ರಲ್ಲಿ ಹೊಸ ಕಾಯಿದೆ ರಚಿಸಿದೆ.

ತರೂರ್‌ಗೆ ಬಿಜೆಪಿಗೇ ಹೋಗಿ ಎಂದ 'ಕೈ'

ದೆಹಲಿ: ತಿರುವನಂತಪುರಂ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸದಸ್ಯ ಶಶಿತರೂರ್, ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪದೇ ಪದೇ ಪ್ರಶಂಸೆ ಮಾಡುತ್ತಿರುವುದಕ್ಕೆ ಕಾಂಗ್ರೆಸ್ ನಾಯಕರು ಸಿಟ್ಟಿಗೆದ್ದಿದ್ದಾರೆ.

ಶಶಿತರೂರ್

ಇತ್ತೀಚೆಗೆ ರಾಮನಾಥ್ ಗೋಯೆಂಕಾ ಉಪನ್ಯಾಸ ಕಾರ್ಯಕ್ರಮದಲ್ಲಿ ಮೋದಿ ಭಾಷಣವನ್ನು ಶಶಿತರೂರ್ ಶ್ಲಾಘಿಸಿರುವುದಕ್ಕೆ ಕೈ ನಾಯಕರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಪ್ರಧಾನಿ ಮೋದಿ ಆಲೋಚನೆಗಳು ಶ್ಲಾಘನೀಯ ಎನ್ನುವುದಾದರೆ ನೀವು ಕಾಂಗ್ರೆಸ್ ಪಕ್ಷದಲ್ಲೇಕೆ ಇದ್ದೀರಿ? ಬಿಜೆಪಿಗೇ ಹೋಗಿರಿ ಎಂದು ಕಾಂಗ್ರೆಸ್ ನಾಯಕ ಸಂದೀಪ್ ದೀಕ್ಷಿತ್ ತರಾಟೆಗೆ ತೆಗೆದುಕೊಂಡಿದ್ದಾರೆ. ಮೋದಿ ಅವರ ಉಪನ್ಯಾಸದಲ್ಲಿ ಪ್ರಶಂಸನೀಯ ಎನ್ನುವಂತಹದ್ದು ಏನೂ ಇರಲಿಲ್ಲ, ಶಶಿತರೂರ್ ವೃಥಾ ಪ್ರಶಂಸೆ ಮಾಡಿದ್ದಾರೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾಥೆ ವ್ಯಂಗ್ಯವಾಡಿದ್ದಾರೆ.

ಬಗೆಬಗೆ ಶಸ್ತ್ರಾಸ್ತ್ರಗಳ ರವಾನೆಗೆ ಪೈಪೋಟಿ ಮೇಲೆ ಸಿದ್ಧವಾಗಿರುವ ಅಮೆರಿಕ, ರಷ್ಯಾ | ಅಮೆರಿಕದಿಂದ ಕ್ಷಿಪಣಿ ಉಡಾವಣೆ ಸಾಧನ ಜಾವೆಲಿನ್ ಮಿಸೈಲ್ ಸಿಸ್ಟಮ್ ಮಾರಾಟ | ರಷ್ಯಾದಿಂದ 5ನೇ ತಲೆಮಾರಿನ ಸುಖೋಯ್ ಎಸ್‌ಯು-57 ಯುದ್ಧ ವಿಮಾನ, ತಂತ್ರಜ್ಞಾನ

ಭಾರತದ ಬತ್ತಳಿಕೆಗೆ ಮತ್ತಷ್ಟು ಯುದ್ಧಾಸ್ತ್ರ

ಭಾರತಕ್ಕೆ ಮಾರಾಟವಾಗುತ್ತಿರುವ ಅಮೆರಿಕದ ರಕ್ಷಣಾ ವಲಯದ ವಿಶಿಷ್ಟ ಬಲಿಷ್ಠ ಶಸ್ತ್ರ ಎನಿಸಿಕೊಂಡಿರುವ 'ಜಾವೆಲಿನ್ ಎಫ್‌ಜಿಎಂ-148' ಕ್ಷಿಪಣಿ ಮತ್ತು ಉಡಾವಣಾ ಸಾಧನ.

ವಾಷಿಂಗ್ಟನ್: ಅಮೆರಿಕ ಸರಕಾರವು 822.68 ಕೋಟಿ ರು. ಬೆಲೆಯ ವಿಶಿಷ್ಟ ಕ್ಷಿಪಣಿ ಉಡಾವಣಾ ವ್ಯವಸ್ಥೆಯಾದ 'ಜಾವೆಲಿನ್ ಮಿಸೈಲ್ ಸಿಸ್ಟಂ' ಮತ್ತು 'ಎಕ್ಸ್‌ಕ್ಯಾಲಿಬರ್ ಪ್ರಾಜೆಕ್ಟೀಸ್' ಹಾಗೂ ಸಂಬಂಧಿತ ಉಪಕರಣಗಳನ್ನು ಭಾರತಕ್ಕೆ ಮಾರಾಟ ಮಾಡಲು ಅನುಮೋದನೆ ನೀಡಿದೆ.

ಅಮೆರಿಕದ ಸಂಸತ್ತು ಈ ವಿಶಿಷ್ಟ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಸಂಬಂಧಿಸಿದ ಅಗತ್ಯ ಪ್ರಮಾಣಪತ್ರಗಳಿಗೆ ಅಂಕಿತ ಹಾಕಿದೆ ಎಂದು ಅಮೆರಿಕದ 'ಡಿಫೆನ್ಸ್ ಸೆಕ್ಯುರಿಟಿ ಕೋ ಆಪರೇಷನ್ ಏಜೆನ್ಸಿ'(ಡಿಎಸ್‌ಸಿಎ) ಬುಧವಾರ 2 ಪ್ರಕಟಣೆಗಳನ್ನು ಹೊರಡಿಸಿದೆ.

ಭಾರತ-ಅಮೆರಿಕದ ನಡುವಿನ ಪಾಲುದಾರಿಕೆ ಸಂಬಂಧವನ್ನು ಇನ್ನಷ್ಟು ಸದೃಢಗೊಳಿಸಲು ಈ ವಿಶಿಷ್ಟ ಶಸ್ತ್ರಾಸ್ತ್ರಗಳ ಮಾರಾಟ ಅವಕಾಶ ಮಾಡಿಕೊಡಲಿದೆ. ಅಲ್ಲದೇ, ಇದು ಅಮೆರಿಕದ ವಿದೇಶಾಂಗ ನೀತಿ ಮತ್ತು ರಾಷ್ಟ್ರೀಯ ಭದ್ರತೆ ವಿಚಾರಗಳಿಗೂ ಸಕಾರಾತ್ಮಕ ಕ್ರಮವಾಗಿದೆ ಎಂದೂ ಡಿಎಸ್‌ಸಿಎ ಪ್ರಕಟಣೆಯಲ್ಲಿ ಹೇಳಲಾಗಿದೆ.

ಭಾರತಕ್ಕೆ ಸದ್ಯದಲ್ಲೇ ರವಾನೆ ಆಗಲಿರುವ ಮೊದಲ ಮಾರಾಟದ ಪ್ಯಾಕೇಜ್‌ನಲ್ಲಿ 4.57 ಕೋಟಿ ಡಾಲರ್(405 ಕೋಟಿ ರು.) ಮೌಲ್ಯದ ಜಾವೆಲಿನ್ ಎಫ್‌ಜಿಎಂ-148 ಕ್ಷಿಪಣಿ, ಫ್ಲೈಟು ಬೈ, 25 ಜಾವೆಲಿನ್ ಲೈಟ್‌ವೇಯ್ಟ್ ಕಮಾಂಡ್ ಲಾಂಚ್ ಯುನಿಟ್(ಜಾವೆಲಿನ್ ಬ್ಲಾಕ್ ಕಮಾಂಡ್ ಲಾಂಚ್ ಯುನಿಟ್-ಸಿಎಲ್‌ಯು) ಒಳಗೊಂಡಿರಲಿದೆ. ಜತೆಗೆ 'ಜಾವೆಲಿನ್ ಸಿಎಲ್‌ಯು'ನ ಬಳಕೆ ಬಗ್ಗೆ ತರಬೇತಿ ನೀಡುವುದಕ್ಕೆ ತರಬೇತುದಾರರು, ಮಿಸೈಲ್ ಸಿಮ್ಯುಲೇಷನ್ ರೌಂಡ್ಸ್, ಬ್ಯಾಟರಿ ಕೂಲಂಟ್ ಘಟಕ, ಇಂಟರ್‌ಆ್ಯಕ್ಟೀವ್ ಎಲೆಕ್ಟ್ರಾನಿಕ್ ಟೆಕ್ನಿಕಲ್ ಮ್ಯಾನುವಲ್, ಜಾವೆಲಿನ್ ಆಪರೇಟರ್ ಮ್ಯಾನುವಲ್, ಜೀವ ರಕ್ಷಕ ಸಾಧನಗಳು, ಬಿಡಿಭಾಗಗಳನ್ನೂ ಕಳುಹಿಸಿಕೊಡಲಾಗುತ್ತದೆ ಎಂದು ಡಿಎಸ್‌ಸಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎರಡನೇ ಮಾರಾಟದ ಪ್ಯಾಕೇಜ್‌ನಲ್ಲಿ 4.71 ಕೋಟಿ ಡಾಲರ್(418 ಕೋಟಿ ರು.) ಮೌಲ್ಯದ 'ಎಕ್ಸ್‌ಕ್ಯಾಲಿಬರ್ ಟ್ಯಾಕ್ಟಿಕಲ್ ಪ್ರಾಜೆಕ್ಟಿಲೆಸ್' ಉಪಕರಣಗಳು ಮತ್ತು ಬಿಡಿಭಾಗಗಳು ಸೇರಿರುತ್ತವೆ. ವಾಸ್ತವದಲ್ಲಿ ಭಾರತ ಒಟ್ಟು 216 'ಎಕ್ಸ್‌ಕ್ಯಾಲಿಬರ್ ಟ್ಯಾಕ್ಟಿಕಲ್ ಪ್ರಾಜೆಕ್ಟಿಲೆಸ್-ಎಂ982ಎ1' ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಸಲ್ಲಿಸಿದೆ ಎಂದು 'ಡಿಎಸ್‌ಸಿಎ' ತಿಳಿಸಿದೆ.

ದಕ್ಷಿಣ ಏಷ್ಯಾ ವಲಯ ಮತ್ತು ಇಂಡೊ ಪೆಸಿಫಿಕ್ ಭಾಗದಲ್ಲಿ ರಾಜಕೀಯವಾಗಿ, ಭೌಗೋಳಿಕವಾಗಿ, ಆರ್ಥಿಕವಾಗಿ ಸವಾಲುಗಳನ್ನು ಎದುರಿಸಬೇಕಿರುವ ಭಾರತ ದೇಶಕ್ಕೆ ಸ್ಥಿರತೆ, ಶಾಂತಿ ಕಾಯ್ದುಕೊಳ್ಳುವುದಕ್ಕೆ ಈ ಶಸ್ತ್ರಾಸ್ತ್ರಗಳ ಖರೀದಿಯಿಂದ ಅನುಕೂಲವಾಗಲಿದೆ. ಅದರಲ್ಲೂ ದೇಶದ ರಕ್ಷಣೆಗೆ ಹೆಚ್ಚಿನ ಶಕ್ತಿ ದೊರೆತಂತಾಗಲಿದೆ. ಭಾರತದ ಸದ್ಯದ ಹಾಗೂ ಭವಿಷ್ಯದಲ್ಲಿನ ರಕ್ಷಣಾ ಸಾಮರ್ಥ್ಯ ಈ ಕ್ರಮಗಳಿಂದ ಇನ್ನಷ್ಟು ಹೆಚ್ಚಲಿದೆ ಎಂದು ಡಿಎಸ್‌ಸಿಎ ಪ್ರಕಟಣೆಯಲ್ಲಿ ವಿಶ್ಲೇಷಿಸಲಾಗಿದೆ.

ಭಾರತ ಯಾವುದೇ ಶಸ್ತ್ರ, ವಿಮಾನ ಕೇಳಿದರೂ ಕೊಡಲು ರಷ್ಯಾ ಸಿದ್ಧ: ಸೆರ್ಗೆಯ್ ಕೆಮೆಝೋವ್

ಮಾಸ್ಕೊ: ಭಾರತದ ಪರಮಾಪ್ತ ಮಿತ್ರ ರಾಷ್ಟ್ರ ರಷ್ಯಾ ಕೂಡಾ ತನ್ನ ಬಲು ಶಕ್ತಿಶಾಲಿಯಾದ 'ಸುಖೋಯ್ ಎಸ್‌ಯು-57ಇ' ಯುದ್ಧ ವಿಮಾನವನ್ನು ಮತ್ತು ಅದಕ್ಕೆ ಸಂಬಂಧಿಸಿದ ತಂತ್ರಜ್ಞಾನವನ್ನೂ ಭಾರತಕ್ಕೆ ಕೊಡಲು ಸಿದ್ಧವಾಗಿದೆ.

ಭಾರತವೂ ತನ್ನ ವಾಯುಪಡೆಯ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಸಲುವಾಗಿ ರಷ್ಯಾ ದೇಶದ ಈ 5ನೇ ತಲೆಮಾರಿನ ಯುದ್ಧ ವಿಮಾನ 'ಸುಖೋಯ್ ಎಸ್‌ಯು-57ಇ' ಖರೀದಿಸಲು ದೀರ್ಘ ಸಮಯದಿಂದ ಕಾಯುತ್ತಿತ್ತು.

ಭಾರತವೇನಾದರೂ ಮತ್ತಷ್ಟು 'ಎಸ್-400 ಸಿಸ್ಟಂ' ಅಥವಾ ಎಸ್‌ಯು-57 ಯುದ್ಧ ವಿಮಾನವನ್ನು ಕೇಳಿದರೆ ಕೊಡಲು ರಷ್ಯಾ ಸಿದ್ಧವಿದೆಯೇ? ಎಂಬ ಸುದ್ದಿಗಾರರ ಪ್ರಶ್ನೆಗೆ, ರಷ್ಯಾ ಸರಕಾರದ ಮಾಲೀಕತ್ವದ ರಕ್ಷಣಾ ಕ್ಷೇತ್ರದ ಕಂಪನಿ 'ರೋಸ್‌ಟೆಕ್', ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಒ) ಸೆರ್ಗೆಯ್ ಕೆಮೆಝೋವ್, 'ಭಾರತ ರಷ್ಯಾಕ್ಕೆ ಪರಮಾಪ್ತ ಮಿತ್ರ ರಾಷ್ಟ್ರವಾಗಿದೆ. ಅದರ ರಕ್ಷಣಾ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸುವ ದಿಶೆಯಲ್ಲಿ ಭಾರತ ಯಾವುದೇ ಶಸ್ತ್ರಾಸ್ತ್ರ ಕೋರಿದರೂ ಕೊಡಲು ರಷ್ಯಾ ಸಿದ್ಧವಿದೆ. ಅಷ್ಟೇ ಅಲ್ಲದೇ, ಭಾರತದ ಕೋರಿಕೆಯಂತೆ ಯುದ್ಧ ವಿಮಾನದ ಒಂದು ತಯಾರಿಕಾ ಘಟಕವನ್ನು ಭಾರತದಲ್ಲೇ ಆರಂಭಿಸಲೂ ಸಿದ್ಧವಾಗಿದೆ' ಎಂದು ಉತ್ತರಿಸಿದ್ದಾರೆ.

ಭಾರತದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಲಾಗಿದ್ದ ಕಾಲದಲ್ಲಿಯೂ ರಷ್ಯಾ ಭಾರತಕ್ಕೆ ಅತ್ಯಗತ್ಯವಾಗಿದ್ದ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದೆ. ಮಿತ್ರ ರಾಷ್ಟ್ರ ಭಾರತ ಸುರಕ್ಷಿತವಾಗಿರಬೇಕು ಎಂಬುದೇ ರಷ್ಯಾ ಇಚ್ಛೆಯಾಗಿದೆ. ಹಾಗಾಗಿ ಭಾರತ ಏನೇ ಕೇಳಿದರೂ ಕೊಡಲು ರಷ್ಯಾ ಸಿದ್ಧವಾಗಿದೆ ಎಂದು ಸೆರ್ಗೆಯ್ ಹೇಳಿದ್ದಾರೆ.

'ಎಸ್‌ಯು-57' ಯುದ್ಧ ವಿಮಾನವನ್ನು ಭಾರತಕ್ಕೆ ಮಾರಾಟ ಮಾಡುವುದು ಪ್ರಸ್ತಾವನೆಯ ಮೊದಲ ಭಾಗವಾಗಿದೆ. ಆ ಬಳಿಕ ಮಾತುಕತೆಗಳು ಪೂರ್ಣಗೊಂಡರೆ ಎಸ್‌ಯು ಯುದ್ಧ ವಿಮಾನಗಳ ತಯಾರಿಕಾ ಘಟಕವೊಂದನ್ನು ಭಾರತದಲ್ಲಿ ಹಂತ ಹಂತವಾಗಿ ನೆಲೆಗೊಳಿಸುವ ಸಾಧ್ಯತೆಯೂ ಇದೆ. ಬೇರಾವುದೇ ದೇಶವೂ ಹೀಗೆ ಯುದ್ಧ ವಿಮಾನದ ಜತೆಗೆ ಪೂರ್ಣ ತಂತ್ರಜ್ಞಾನವನ್ನು ಖರೀದಿ ದೇಶದ ಜತೆಗೆ ಹಂಚಿಕೊಳ್ಳುವುದಿಲ್ಲ. ಆದರೆ, 5ನೇ ತಲೆಮಾರಿನ ವಿಮಾನದ ಎಂಜಿನ್ ತಯಾರಿಕೆ, ಸೆನ್ಸರ್‌ಗಳು, ಶತ್ರು ದೇಶಗಳ ರಾಡಾರ್ ಗ್ರಹಿಕೆ ಸಿಗದಂತೆ ಮಾಡುವ ತಂತ್ರಜ್ಞಾನ ಸೇರಿದಂತೆ ವಿಮಾನ ತಯಾರಿಕೆ ಅಷ್ಟೂ ತಂತ್ರಜ್ಞಾನವನ್ನು ಭಾರತಕ್ಕೆ ಹಸ್ತಾಂತರಿಸಲು ರಷ್ಯಾ ಸಿದ್ಧವಿದೆ. ಅಂಥ ಅವಕಾಶವನ್ನು ನೀಡುತ್ತಿದೆ. ಭಾರತ ಸಮ್ಮತಿಸಿದರೆ ಭಾರತ ಸ್ವಂತವಾಗಿಯೇ ತನಗೆ ಬೇಕಾದಷ್ಟು ಯುದ್ಧ ವಿಮಾನಗಳನ್ನು ತಯಾರಿಸಿಕೊಳ್ಳಬಹುದು. ಯುದ್ಧ ವಿಮಾನಗಳಿಗಾಗಿ ಪಶ್ಚಿಮ ದೇಶಗಳತ್ತ ಮುಖ ಮಾಡಬೇಕಾಗಿ ಬರುವುದೇ ಇಲ್ಲ ಎಂದಿದ್ದಾರೆ.

ಶತ್ರು ದೇಶಗಳ ರಾಡಾರ್‌ಗಳಿಗೆ ಗೋಚರವಾಗದಂತೆ ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುವ ಎಸ್‌ಯು-75 ಚೆಕ್‌ಮೇಟ್ ಏಕ ಎಂಜಿನ್ ಯುದ್ಧ ವಿಮಾನವನ್ನೂ ಭಾರತ ಮಾರಾಟ ಮಾಡಲು ರಷ್ಯಾ ಸರಕಾರ ಸಿದ್ಧವಾಗಿದೆ ಎಂದೂ ವರದಿಯಾಗಿದೆ.

ರಷ್ಯಾದ 5ನೇ ತಲೆಮಾರಿನ ಯುದ್ಧ ವಿಮಾನ ಸುಖೋಯ್ ಎಸ್‌ಯು-57.

ಎಸ್‌ಯು-57 ತಯಾರಿಕಾ ಘಟಕ ಭಾರತಕ್ಕೆ?

ರಷ್ಯಾದ ರಕ್ಷಣಾ ವಲಯವು ಎಸ್‌ಯು-57 ಯುದ್ಧ ವಿಮಾನ ತಯಾರಿಕಾ ಘಟಕವನ್ನು ಪಾಲುದಾರ ದೇಶವೊಂದರಲ್ಲಿ ಸ್ಥಾಪನೆ ಮಾಡಲು ಬಯಸಿದೆ. ಅದಕ್ಕೆ ಭಾರತವನ್ನು ರಷ್ಯಾ ಪರಿಗಣಿಸಬಹುದಾಗಿದೆ.

ಭಾರತ ದೇಶವೂ ಯುದ್ಧ ವಿಮಾನ ತಯಾರಿಕಾ ಘಟಕಕ್ಕೆ ಸೂಕ್ತ ಸ್ಥಳವಾಗಿದೆ ಎಂದು ಭಾರತೀಯ ವಾಯುಪಡೆಯ ನಿವೃತ್ತ ಸ್ಕ್ವಾಡ್ರನ್ ಲೀಡರ್ ಹಾಗೂ ರಕ್ಷಣಾ ಕ್ಷೇತ್ರದ ವಿಶ್ಲೇಷಣಾಕಾರ ವಿಜಯಿಂದರ್ ಕೆ.ಠಾಕೂರ್ ಹೇಳಿದ್ದಾರೆ. ಒಂದೊಮ್ಮೆ ಭಾರತದಲ್ಲೇನಾದರೂ ಎಸ್‌ಯು-57 ತಯಾರಿಕಾ ಘಟಕ ಸ್ಥಾಪನೆಯಾದರೆ ಭಾರತ ರಕ್ಷಣಾ ವಹಿವಾಟು ಸಾಮರ್ಥ್ಯ ಮತ್ತಷ್ಟು ಹಿಗ್ಗುತ್ತದೆ. ಸದ್ಯ ಬ್ರಹ್ಮೋಸ್ ಕ್ಷಿಪಣಿ ಮಾರಾಟದ ಮೂಲಕ ಅಂತಾರಾಷ್ಟ್ರೀಯ ಮಟ್ಟದ ರಕ್ಷಣಾ ಮಾರುಕಟ್ಟೆಗಳಲ್ಲಿ ದೊಡ್ಡ ಹೆಜ್ಜೆ ಇರಿಸಿರುವ ಭಾರತಕ್ಕೆ ಮಾರುಕಟ್ಟೆ ವಿಸ್ತರಿಸಿಕೊಳ್ಳಲು ಭಾರೀ ಅವಕಾಶವಾಗಲಿದೆ ಎಂದು ಠಾಕೂರ್ ಹೇಳಿದ್ದಾರೆ.

ಮುಂದಿನ ತಿಂಗಳೇ ಭಾರತಕ್ಕೆ ಪುಟಿನ್

ಮಾಸ್ಕೊ: ಪ್ರಧಾನಿ ನರೇಂದ್ರ ಮೋದಿ ಅವರ ಪರಮಾಪ್ತ ಮಿತ್ರ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮುಂದಿನ ತಿಂಗಳು ಭಾರತಕ್ಕೆ ಆಗಮಿಸಲಿದ್ದಾರೆ. ಇದು ಪುಟಿನ್ ಅವರು 4 ವರ್ಷಗಳ ನಂತರದ ಭಾರತ ಭೇಟಿ ಎನಿಸಿಕೊಳ್ಳಲಿದೆ. ಈ ಹಿಂದೆ 2021ರ ಡಿಸೆಂಬರ್‌ನಲ್ಲಿ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಭಾರತ-ರಷ್ಯಾ ನಡುವಿನ 23ನೇ ಶೃಂಗಸಭೆ ಡಿಸೆಂಬರ್‌ನಲ್ಲಿ ಆಯೋಜಿತವಾಗಿದೆ.

ನಿತೀಶ್ ಸಂಪುಟದಲ್ಲಿ ಜಾತಿವಾರು ಪ್ರಾತಿನಿಧ್ಯ

ದಲಿತ 5, ರಜಪೂತ 4, ಭೂಮಿಹಾರ 2, ಮುಸ್ಲಿಂ 1 | 3 ಮಹಿಳೆಯರಿಗೂ ಅವಕಾಶ

ಜಾತಿವಾರು ಸಚಿವರ ಪಟ್ಟಿ	
ದಲಿತ	5
ರಜಪೂತ	4
ಕುಶ್ವಾಹ	3
ಭೂಮಿಹಾರ್	2
ಕುರ್ಮಿ	2
ವೈಶ್ಯ/ಬನಿಯಾ	2
ಯಾದವ್	2
ನಾವಿಕ/ನಿಶಾದ	2
ಬ್ರಾಹ್ಮಣ	1
ಕಾಯಸ್ಥ	1
ಒಬಿಸಿ	1
ಮುಸ್ಲಿಂ	1

ಪಟನಾ: ಬಿಹಾರದಲ್ಲಿ ಮತ್ತೊಂದು ಅವಧಿಗೆ ಬಿಜೆಪಿ-ಜೆಡಿಯು ನೇತೃತ್ವದಲ್ಲಿ 'ಎನ್‌ಡಿಎ' ಮೈತ್ರಿಕೂಟ ಸರಕಾರದ ರಚನೆಯಾಗಿದೆ. 10ನೇ ಬಾರಿ ಮುಖ್ಯಮಂತ್ರಿಯಾಗಿ ಜೆಡಿಯು ವರಿಷ್ಠ ನಿತೀಶ್ ಕುಮಾರ್ ಪ್ರಮಾಣ ವಚನ ಸ್ವೀಕರಿದರೆ, ಬಿಜೆಪಿಯಿಂದ ಇಬ್ಬರು ಉಪ ಮುಖ್ಯಮಂತ್ರಿಗಳಾಗಿ ಸಂಪುಟ ಸೇರಿದರು. ಉಳಿದಂತೆ 24 ಶಾಸಕರು ಸಚಿವರಾದರು.

ಹೊಸ ಸಚಿವ ಸಂಪುಟಕ್ಕೆ ಎಲ್ಲಾ ಜಾತಿ-ವರ್ಗದವರಿಗೂ ಪ್ರಾತಿನಿಧ್ಯ ನೀಡಲು ನಿತೀಶ್ ಕುಮಾರ್ ಮತ್ತು ಬಿಜೆಪಿ ವರಿಷ್ಠರು ಬಹಳ ಪ್ರಯತ್ನ ಮಾಡಿದ್ದಾರೆ ಎಂಬುದು ಸಚಿವರ ಪಟ್ಟಿಯಿಂದ ತಿಳಿದುಬರುತ್ತದೆ. ದಲಿತ ಸಮುದಾಯ, ರಜಪೂತ, ಭೂಮಿಹಾರ್ ಸಮುದಾಯಕ್ಕೆ ಆದ್ಯತೆ ನೀಡಲಾಗಿದೆ.

ವೈಶ್ಯ ಸಮುದಾಯಕ್ಕೆ ಸೇರಿದ ದಿಲೀಪ್ ಕುಮಾರ್ ಜೈಸ್ವಾಲ್ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಸಾಂಪ್ರದಾಯಿಕವಾಗಿ ವೈಶ್ಯ ಸಮುದಾಯ ಬಿಜೆಪಿಯ ಪ್ರಬಲ ಬೆಂಬಲಿಗರು ಎಂದೇ ಪರಿಗಣಿತವಾಗಿದೆ. ಹಾಗಾಗಿ, ಆ ಸಮುದಾಯಕ್ಕೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲೆಂದೇ ಪರಿಷತ್ ಸದಸ್ಯರನ್ನು ಸೇರಿಸಿಕೊಳ್ಳಲಾಗಿದೆ.

ಮುಸಾಹರ್ ಜಾತಿಯ ಶಾಸಕ ಸಂತೋಷ್ ಸುಮನ್ ದಲಿತ ಸಮುದಾಯವನ್ನು ಪ್ರತಿನಿಧಿಸುತ್ತಿದ್ದಾರೆ. ನಳಂದ ಕ್ಷೇತ್ರದ ಶಾಸಕ, ಹಿರಿಯ ಜೆಡಿಯು ನಾಯಕ ಶ್ರವಣ್ ಕುಮಾರ್ 'ಕುರ್ಮಿ' ಸಮುದಾಯಕ್ಕೆ ಸೇರಿದವರು. ನಿತೀಶ್ ಕುಮಾರ್ ಅವರ ಅತಿ ಹಳೆಯ ಸಹಚರ. ಕಾಯಸ್ಥ ಸಮುದಾಯದ ಪ್ರಬಲ ನಾಯಕ ನಿತಿನ್ ನಬಿನ್‌ಗೂ ಅವಕಾಶ ಮಾಡಿಕೊಡಲಾಗಿದೆ.

ಮೂವರು ಮಹಿಳೆಯರು: ಧಮ್ದಾಹ ಕ್ಷೇತ್ರದ ಶಾಸಕಿ ಲೇಸಿ ಸಿಂಗ್, ಕೋಸಿ ಪ್ರದೇಶದ ಮಹಿಳೆಯರಲ್ಲಿ ಹೆಚ್ಚಿನ ಅನುಯಾಯಿಗಳನ್ನು ಹೊಂದಿದವರು. ಮದನ್ ಸಾಹ್ನಿ ಹಿಂದುಳಿದ ವರ್ಗಗಳ ಪ್ರಮುಖ ನಾಯಕಿ. ಶ್ರೇಯಸಿ ಸಿಂಗ್, ನಿತೀಶ್ ಕುಮಾರ್ ನೂತನ ಸಂಪುಟದಲ್ಲಿನ ಮೂರನೇ ಸಚಿವೆ.

ಪಟನಾದ ಗಾಂಧಿ ಮೈದಾನದಲ್ಲಿ ಗುರುವಾರ 'ಎನ್‌ಡಿಎ' ನೂತನ ಸರಕಾರದ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ನೂತನ ಮುಖ್ಯಮಂತ್ರಿ ನಿತೀಶ್ ಕುಮಾರ್ ಮೈತ್ರಿಯ ಸಂಕೇತವಾಗಿ ಕೈಕೈ ಜೋಡಿಸಿ ಸಭೆಗೆ ಒಗ್ಗಟ್ಟು ಪ್ರದರ್ಶಿಸಿದರು.

ಸಚಿವ ಸಂಪುಟದ ಪೂರ್ಣ ಪಟ್ಟಿ

• ನಿತೀಶ್ ಕುಮಾರ್ ಸಿಎಂ
• ಸಾಮ್ರಾಟ್ ಚೌಧರಿ ಡಿಸಿಎಂ
• ವಿಜಯ್ ಕುಮಾರ್ ಸಿನ್ಹಾ ಡಿಸಿಎಂ
• ವಿಜಯ್ ಕುಮಾರ್ ಚೌಧರಿ
• ಬಿಜೇಂದ್ರ ಪ್ರಸಾದ್ ಯಾದವ್
• ಶ್ರವಣ್ ಕುಮಾರ್ • ಮಂಗಲ್ ಪಾಂಡೆ • ಡಾ. ದಿಲೀಪ್ ಕುಮಾರ್ ಜೈಸ್ವಾಲ್ • ಅಶೋಕ್ ಚೌಧರಿ
• ಲೇಸಿ ಸಿಂಗ್ • ಮದನ್ ಸಾಹ್ನಿ
• ನಿತಿನ್ ನವೀನ್ • ರಾಮ್ ಕೃಪಾಲ್ ಯಾದವ್ • ಸಂತೋಷ್ ಕುಮಾರ್ ಸುಮನ್ • ಸುನಿಲ್ ಕುಮಾರ್
• ಮೊಹಮ್ಮದ್ ಜಾಮಾ ಖಾನ್
• ಸಂಜಯ್ ಸಿಂಗ್ ಟೈಗರ್
• ಅರುಣ್ ಶಂಕರ್ ಪ್ರಸಾದ್ • ಸುರೇಂದ್ರ ಮೆಹ್ತಾ • ನಾರಾಯಣ್ ಪ್ರಸಾದ್ • ರಾಮ ನಿಷಾದ್ • ಲಖೇಂದ್ರ ಕುಮಾರ್ ಚೌಹಾಣ್ • ಶ್ರೇಯಸಿ ಸಿಂಗ್
• ಪ್ರಮೋದ್ ಕುಮಾರ್ • ಸಂಜಯ್ ಕುಮಾರ್ • ಸಂಜಯ್ ಕುಮಾರ್ ಸಿಂಗ್

ಭಾರತದಲ್ಲಿ ಜನಿಸಿದ ಚೀತಾ ಮುಖಿಗೆ ಐದು ಮರಿ ಜನನ

ಕುನೋ: ಮಧ್ಯಪ್ರದೇಶ ರಾಜ್ಯದ ಕುನೋ ರಾಷ್ಟ್ರೀಯ ಉದ್ಯಾನದಲ್ಲಿ ಈಗ ಸಂಭ್ರಮ ಮನೆಮಾಡಿದೆ. ಆಫ್ರಿಕಾ ಖಂಡದಿಂದ ಆಮದು ಮಾಡಿಕೊಳ್ಳಲಾಗಿದ್ದ ವಿಶಿಷ್ಟ ಚೀತಾ ತಳಿಗಳ 3ನೇ ಸಂತತಿಯ ಜನನವಾಗಿದೆ.

ಆಫ್ರಿಕಾ ಖಂಡದಿಂದ ಆಮದು ಮಾಡಿಕೊಳ್ಳಲಾಗಿದ್ದ ಹೆಣ್ಣು ಚೀತಾಗೆ 'ಕುನೋ ರಾಷ್ಟ್ರೀಯ ಉದ್ಯಾನ'ದಲ್ಲಿಯೇ ಜನಿಸಿದ ಮೊದಲ ಹೆಣ್ಣುಮರಿ 'ಮುಖಿ'ಯೂ ಈಗ ಬೆಳೆದು ದೊಡ್ಡವಳಾಗಿ ಎರಡೂ ಮುಕ್ಕಾಲು ವರ್ಷ ವಯಸ್ಸಿಗೇ ಐದು ಮರಿಗಳಿಗೆ ತಾಯಿಯಾಗಿದ್ದಾಳೆ. ಇದರಿಂದಾಗಿ ಸದ್ಯ ಆಫ್ರಿಕಾ ಖಂಡದಲ್ಲಷ್ಟೇ ಕಾಣಸಿಗುತ್ತಿರುವ ಚುಕ್ಕೆ ಚರ್ಮದ, ಅತಿವೇಗದ ಚೀತಾಗಳನ್ನು ಭಾರತಕ್ಕೆ ಮರುಪರಿಚಯಿಸಿ, ಸಾಕಿ ಸಲಹಿ ಸಂತತಿ ವೃದ್ಧಿಸುವ ಯೋಜನೆಯಲ್ಲಿ ಒಂದು ಪ್ರಮುಖ ಮೈಲುಗಲ್ಲನ್ನು ಸಾಧಿಸಿದಂತಾಗಿದೆ.

ವಯಸ್ಸು 33 ತಿಂಗಳಷ್ಟೇ ತುಂಬಿರುವ 'ಮುಖಿ' ಚೀತಾ ಭಾರತದಲ್ಲಿ ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ಸ್ಥಳಾಂತರಗೊಂಡ ನಮೀಬಿಯಾ ದೇಶದ ಹೆಣ್ಣು ಚೀತಾಗೆ ಭಾರತದಲ್ಲಿ ಜನಿಸಿತ್ತು.

'ಇದೊಂದು ಐತಿಹಾಸಿಕ ಮೈಲಿಗಲ್ಲು. ಭಾರತದಲ್ಲಿ ಜನಿಸಿದ ಆಫ್ರಿಕಾ ಖಂಡದ ಚೀತಾ ಮುಖಿ 5 ಮರಿಗಳಿಗೆ ಜನ್ಮ ನೀಡಿದೆ. ಭಾರತಕ್ಕೆ ಚೀತಾಗಳನ್ನು ಮರುಪರಿಚಯ ಉಪಕ್ರಮದಲ್ಲಿ ಒಂದು ಸಂತೋಷಕರ ಪ್ರಗತಿ' ಎಂದು ಕೇಂದ್ರ ಪರಿಸರ-ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ 'ಎಕ್ಸ್' ಖಾತೆಯಲ್ಲಿ ಬುಧವಾರ ಸಂಭ್ರಮಿಸಿದ್ದಾರೆ.

'ಭಾರತದಲ್ಲೇ ಜನಿಸಿ ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಳೆಯುತ್ತಿರುವ ಚೀತಾ 'ಮುಖಿ' ಐದು ಮರಿಗಳಿಗೆ ಜನ್ಮ ನೀಡಿರುವುದು ಹೊಸ ಮೈಲುಗಲ್ಲು. ತಾಯಿ 'ಮುಖಿ' ಮತ್ತು ಐದೂ ಪುಟ್ಟ ಮರಿಗಳು ಆರೋಗ್ಯದಿಂದಿವೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.

ನೇಪಾಳದಲ್ಲಿ ಸಿಪಿಎನ್ ಪಾರ್ಟಿ, ಜೆನ್‌ಝಡ್ ಸಂಘರ್ಷ; ಕರ್ಫ್ಯೂ

ಕಠ್ಮಂಡು: ನೇಪಾಳದಲ್ಲಿ ಮತ್ತೆ ಗಲಭೆ ಶುರುವಾಗಿದೆ. ನೇಪಾಳಿ ಯುವಜನರ(ಜೆನ್ ಝಡ್) ಗುಂಪು, ಈ ಹಿಂದಿನ ಆಡಳಿತಾರೂಢ ಪಕ್ಷದ ಬೆಂಬಲಿಗರ ಜತೆ ಸಂಘರ್ಷಕ್ಕಿಳಿದಿದೆ. ಪರಿಣಾಮ, ಬಾರಾ ಜಿಲ್ಲೆಯ ಕೆಲವೆಡೆ ಕರ್ಫ್ಯೂ ಜಾರಿಗೊಳಿಸಲಾಗಿದೆ.

ವಿಮಾನ ನಿಲ್ದಾಣ ಸಮೀಪದ ಪಟ್ಟಣ 'ಸಿಮಾರಾ'ದಲ್ಲಿ ಬುಧವಾರ ಜೆನ್ ಝಡ್ ಚಳವಳಿಗಾರರು ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ-ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್-ಯುಎಂಎಲ್) ನಡುವೆ ಬುಧವಾರ ಭಾರೀ ಸಂಘರ್ಷವಾಯಿತು.

ಸಿಪಿಎನ್-ಯುಎಂಎಲ್ ಪಕ್ಷದ ಯುವ ಜಾಗೃತಿ ಅಭಿಯಾನಕ್ಕೆ ಆಗಮಿಸುತ್ತಿದ್ದ ನಾಯಕರ ವಿರುದ್ಧ 'ಜೆನ್ ಝಡ್' ಗುಂಪು ಪ್ರತಿಭಟನೆ ನಡೆಸಿತು. ಈ ವೇಳೆ ಎರಡೂ ಗುಂಪುಗಳ

ಕಾದಾಟಕ್ಕಿಳಿದಿದ್ದರಿಂದ ಉದ್ವಿಗ್ನತೆ ಉಂಟಾಯಿತು. ಕಲ್ಲು ತೂರಾಟವಾಗಿ ಹಲವರು ಗಾಯಗೊಂಡರು.

ಸಿಪಿಎನ್-ಯುಎಂಎಲ್ ಕಾರ್ಯಕರ್ತರೇ ಮೊದಲಾಗಿ ದಾಳಿ ಮಾಡಿದರು ಎಂದು ಜೆನ್ ಝಡ್ ಗುಂಪು ಆರೋಪಿಸಿದರೆ, ಯುಎಂಎಲ್ ಪ್ರತ್ಯಾರೋಪ ಮಾಡಿತು. ಜೆನ್ ಝಡ್ ಯೋಜಿತ ರೀತಿ ಗೂಂಡಾಗಿರಿ ನಡೆಸುತ್ತಿದೆ ಎಂದಿತು. ನಂತರ ಪೊಲೀಸರು ಲಾಠಿ ಪ್ರಹಾರ ನಡೆಸಿ ಎರಡೂ ಗುಂಪುಗಳನ್ನು ಚದುರಿಸಿದರು.

ಈ ಹಿಂದೆ: ಸೆಪ್ಟೆಂಬರ್‌ನಲ್ಲಿ ಕೆ.ಪಿ.ಶರ್ಮಾ ಒಲಿ(73) ಸರಕಾರವನ್ನು ಜೆನ್ ಝಡ್ ಯುವ ಸಮೂಹದ ದಂಗೆ ಪತನಗೊಳಿಸಿತು. ಸೆ.8-9ರಂದು ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ 76 ಜನ ಸಾವಿಗೀಡಾದರು.

ಸರಕಾರದ ಕಟ್ಟಡಗಳು, ನ್ಯಾಯಾಲಯಗಳು ಮತ್ತು ಸಂಸತ್ ಕಟ್ಟಡಗಳನ್ನೂ ಜೆನ್ ಝಡ್ ಹೋರಾಟಗಾರರು ಬೆಂಕಿ ಹಚ್ಚಿ ಸುಟ್ಟರು. ಹಣಕಾಸು ಸಚಿವ ಸೇರಿದಂತೆ ಹಲವರನ್ನು ಬೀದಿಯಲ್ಲಿ ಅಟ್ಟಾಡಿಸಿ ಥಳಿಸಿದರು. ಆ ಬಳಿಕ ಸುಪ್ರೀಂ ಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕರ್ಕಿ ಅವರ ನೇತೃತ್ವದಲ್ಲಿ ಮಧ್ಯಂತರ ಸರಕಾರ ರಚನೆಯಾಗಿದೆ.

ಛತ್ತೀಸ್‌ಗಢದಲ್ಲಿ ನಕ್ಸಲರ ಗುಂಡಿಗೆ ಹಾಕ್‌ನ ಯುವ ಇನ್‌ಸ್ಪೆಕ್ಟರ್ ಬಲಿ

ಕಾಂಘುರಾ ಕಾಡಿನಲ್ಲಿ ನಕ್ಸಲ್ ದಮನ ಕಾರ್ಯಾಚರಣೆಯಲ್ಲಿ ಹುತಾತ್ಮ

ಕಾಂಘುರಾ: ಛತ್ತೀಸ್‌ಗಢ ರಾಜ್ಯದ ಕಾಂಘುರಾ ಕಾಡಿನಲ್ಲಿ ನಕ್ಸಲ್ ನಿಗ್ರಹ ಜಂಟಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಮಧ್ಯಪ್ರದೇಶದ ನಕ್ಸಲ್ ದಮನ ಪಡೆ 'ಹಾಕ್'ನ ಯುವ ಇನ್‌ಸ್ಪೆಕ್ಟರ್ ಆಶಿಶ್ ಶರ್ಮಾ, ನಕ್ಸಲರ ಕಡೆಯಿಂದ ತೂರಿಬಂದ ಗುಂಡು ತಗುಲಿ ಹುತಾತ್ಮರಾದರು.

ಬುಧವಾರ ಬೆಳಗ್ಗೆ 8.30ರಲ್ಲಿ ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢ ಗಡಿ ಭಾಗದಲ್ಲಿ ನಡೆಯುತ್ತಿದ್ದ ನಕ್ಸಲ್ ದಮನ ಕಾರ್ಯಾಚರಣೆಯಲ್ಲಿ ಗುಂಡೇಟು ತಗುಲಿ ತೀವ್ರವಾಗಿ ಗಾಯಗೊಂಡರು.

ಆಶಿಶ್ ಶರ್ಮಾಗೆ ಭುಜ, ಹೊಟ್ಟೆ, ತೊಡೆ ಮತ್ತು ಕೈಗಳಿಗೆ ಗುಂಡು ತಾಗಿದ್ದವು. ಹಾಗಿದ್ದರೂ ಅವರು ತಮ್ಮ ತಂಡವನ್ನು ಮುನ್ನಡೆಸಿದರು. ಗಾಯಗಳಿಂದ ರಕ್ತಸ್ರಾವ ತೀವ್ರವಾಗಿ ಕುಸಿದು ಬೀಳುವವರೆಗೂ ದಟ್ಟ ಕಾಡಿನಲ್ಲಿ ಅಡಗಿದ್ದ ನಕ್ಸಲರತ್ತ ಗುಂಡು ಹಾರಿಸುತ್ತಲೇ ಇದ್ದರು. ಬಳಿಕ ಅವರನ್ನು ಛತ್ತೀಸ್‌ಗಢದ ರಾಜನಂದಗಾಂವ್ ಜಿಲ್ಲೆಯ ಡೊಂಗರ್‌ಗಢ ಆಸ್ಪತ್ರೆಗೆ ಸೇರಿಸಲಾಯಿತು. ಆದರೆ, ಚಿಕಿತ್ಸೆ ಪ್ರಯೋಜನವಾಗಲಿಲ್ಲ. ಹೆಲಿಕಾಪ್ಟರ್ ಆಂಬ್ಯುಲೆನ್ಸ್ ಸಿದ್ಧಪಡಿಸಿದ್ದೆವು. ಆದರೆ ಅವರನ್ನು ಬದುಕಿಸಲು ಸಾಧ್ಯವಾಗಲಿಲ್ಲ ಎಂದು ನಕ್ಸಲ್ ವಿರೋಧಿ ವಿಶೇಷ ಕಾರ್ಯಾಚರಣೆಗಳ ಪೊಲೀಸ್ ಮಹಾ ನಿರ್ದೇಶಕ ಪಂಕಜ್ ಶ್ರೀವಾಸ್ತವ ತಿಳಿಸಿದ್ದಾರೆ.

ಆಶಿಶ್ ಶರ್ಮಾ ಮಧ್ಯಪ್ರದೇಶದ ನರಸಿಂಗಪುರ ಜಿಲ್ಲೆಯ ಗದರ್ವಾರಾ ಗ್ರಾಮದವರು. 9 ವರ್ಷಗಳ ಹಿಂದೆ ಮಧ್ಯಪ್ರದೇಶ ಪೊಲೀಸ್ ಇಲಾಖೆಗೆ ಸಬ್-ಇನ್‌ಸ್ಪೆಕ್ಟರ್ ಆಗಿ ಸೇರಿದ್ದರು. ಈ ವರ್ಷವಷ್ಟೇ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದಿದ್ದರು. ಮುಂದಿನ ವರ್ಷಾರಂಭದಲ್ಲಿ ಅವರ ವಿವಾಹ ನಡೆಯಲಿತ್ತು. ನಕ್ಸಲ್ ನಿಗ್ರಹದ ಅತ್ಯಂತ ನಿರ್ಣಾಯಕ ಕಾರ್ಯಾಚರಣೆಗಳಲ್ಲಿ ಆಶಿಶ್ ಕೇಂದ್ರಬಿಂದುವಾಗಿದ್ದರು. ಆಶಿಶ್ ಕೇಂದ್ರ ಸರಕಾರದಿಂದ ಎರಡು ಶೌರ್ಯ ಪದಕಗಳನ್ನು ಪಡೆದಿದ್ದರು. ಫೆ.19ರಂದು ಬಾಲಘಾಟ್ ಜಿಲ್ಲೆಯ ರೌಂಡಾ ಕಾಡಲ್ಲಿ 4 ಪ್ರಮುಖ ಮಹಿಳಾ ನಕ್ಸಲರನ್ನು ಹೊಡೆದುರುಳಿಸಿದ ಕಾರ್ಯಾಚರಣೆಯಲ್ಲಿ ಆಶಿಶ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಶ್ರೀವಾಸ್ತವ ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

6ನೇ ತರಗತಿ ಪ್ರವೇಶ ಪತ್ರಕ್ಕೆ ಅವಕಾಶ

ಹೊಸಪೇಟೆ: ಚಿಕ್ಕಜೋಗಿಹಳ್ಳಿಯ ಪಿಎಂಶ್ರೀ ಜವಾಹರ್‌ನವೋದಯ ವಿದ್ಯಾಲಯದ ಆರನೇ ತರಗತಿಯ ಪ್ರವೇಶಾತಿ ಪರೀಕ್ಷೆಗಳು ಡಿ.13 ರಂದು ನಡೆಯಲಿದ್ದು. ಈಗಾಗಲೇ ಪ್ರವೇಶಾತಿ ಪರೀಕ್ಷೆ ಬರೆಯಲು ನೋಂದಣಿ ಮಾಡಿರುವ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ವೆಬ್ಸೈಟ್ ಲಿಂಕ್ https://cbseitms.rcil.gov.in/nvs/admincard/admincard ಮೂಲಕ ಡೌನ್ಲೋಡ್ ಮಾಡಿಕೊಳ್ಳುವಂತೆ ಚಿಕ್ಕಜೋಗಿಹಳ್ಳಿ ಪಿಎಂಶ್ರೀ ಜವಾಹರ್‌ನವೋದಯ ವಿದ್ಯಾಲಯದ ಪ್ರಾಚಾರ್ಯ ಸುದೇಶ ಗೋಪಾಲ ಮಲಾಜುರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.25ಕ್ಕೆ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ

ಹೊಸಪೇಟೆ: ವಿಶ್ವ ವಿಶೇಷಚೇತನರ ದಿನಾಚರಣೆ ನಿಮಿತ್ತ ನ.25 ರಂದು ಬೆಳಗ್ಗೆ 11 ಗಂಟೆಗೆ, ಹೊಸಪೇಟೆ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ಸ್ಪರ್ಧಾಳುಗಳು ನೊಂದಾಯಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜಿನೇಯ ತಿಳಿಸಿದ್ದಾರೆ. ಡಿ.3ರಂದು ಆಚರಿಸುವ ವಿಶ್ವ ವಿಶೇಷಚೇತನರ ದಿನಾಚರಣೆ ಅಂಗವಾಗಿ ವಿಜಯನಗರ ಜಿಲ್ಲಾ ವ್ಯಾಪ್ತಿಯ ವಿಶೇಷಚೇತನರಿಗೆ ವಿಶೇಷವಾಗಿ ಕ್ರೀಡಾಕೂಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವೈಯಕ್ತಿಕ ಕ್ರೀಡೆಗಳು: ದೈಹಿಕ ಅಂಗವಿಕಲರಿಗೆ ಗುಂಡು ಎಸೆತ, ಜಾವಲಿನ್ ಥ್ರೋ ಮತ್ತು ಬಗಲುಗೋಲು ಓಟ. ದೃಷ್ಟಿದೋಷವುಳ್ಳವರಿಗೆ ಕೇನ್ ರೇಸ್ ಮತ್ತು ಗುಂಡು ಎಸೆತ. ಶ್ರವಣ ದೋಷವುಳ್ಳವರಿಗೆ 100 ಮೀ.ಓಟ, ಗುಂಡು ಎಸೆತ ಮತ್ತು ರಿಂಗ್ ಎಸೆತ. ಬುದ್ಧಿ ಮಾಂಧ್ಯರಿಗೆ ಮ್ಯೂಜಿಕಲ್ ಚೇರ್‌ಮತ್ತು ಚೆಂಡು ಎಸೆತ.

ಗುಂಪು ಕ್ರೀಡೆಗಳು: ವಿಶೇಷಚೇತನರ ಗುಂಪು ಕ್ರೀಡೆಗಳಲ್ಲಿ ಕ್ರಿಕೆಟ್ (ಸಿಟ್ಟಿಂಗ್), ಕ್ರಿಕೆಟ್ (ಸ್ಟಾಂಡಿಗ್) ಮತ್ತು ಕಬಡ್ಡಿ.

ಸಾಂಸ್ಕೃತಿಕ ಸ್ಪರ್ಧೆಗಳು: ದೈಹಿಕ ಅಂಗವಿಲಕರಿಗೆ ಮತ್ತು ದೃಷ್ಟಿದೋಷವುಳ್ಳವರಿಗೆ ಜಾನಪದ ಮತ್ತು ಭಾವಗೀತೆ. ಶ್ರವಣ ದೋಷವುಳ್ಳವರಿಗೆ ಚಿತ್ರಕಲಾ ಸ್ಪರ್ಧೆ, ಬುದ್ಧಿ ಮಾಂಧ್ಯರಿಗೆ ಫ್ಯಾನ್ಸಿ ಡ್ರೆಸ್ (ವೇಷ ಭೂಷಣ).

ನ.23ಕ್ಕೆ ಆಯುರ್ವೇದ ಉಚಿತ ಚಿಕಿತ್ಸಾ ಶಿಬಿರ

ಹೊಸಪೇಟೆ: ನಗರದ ರೈಲ್ವೇ ಸ್ಟೇಷನ್ ರಸ್ತೆಯ ರೋಟರಿ ಕ್ಲಬ್ನಲ್ಲಿ ನ.23 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನೋವು ನಿವಾರಣೆಗಾಗಿ ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಸರಕಾರಿ ಆಯುರ್ವೇದ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಪಿ.ಮುನಿವಾಸುದೇವ ರೆಡ್ಡಿ ತಿಳಿಸಿದ್ದಾರೆ. ಆಯುರ್ವೇದ ಚಿಕಿತ್ಸಾ ಶಿಬಿರದಲ್ಲಿ ದೀರ್ಘಕಾಲಿನ ನೋವುಗಳಾದ ಸೊಂಟ ನೋವು, ಕುತ್ತಿಗೆ ನೋವು, ಭುಜನೋವು, ಬೆನ್ನು ನೋವು, ಮಂಡಿ ನೋವು, ಸಂಧಿವಾತ, ಅಮವಾತ, ನರರೋಗಗಳು ಸೇರಿದಂತೆ ಎಲ್ಲ ವಿಧದ ತೀವ್ರ ನೋವುಗಳು ಮತ್ತು ಆರೋಗ್ಯ ಸಮಸ್ಯೆಗಳಿಗೆ ಪರಿಣಿತ ಮತ್ತು ತಜ್ಞ ಆಯುರ್ವೇದ ವೈದ್ಯರಿಂದ ಉಚಿತ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ಅಗ್ನಿಕರ್ಮ ಮತ್ತು ಮರ್ಮ ಚಿಕಿತ್ಸೆ ವೇದನಾ ನಿರ್ವಹಣೆಗೆ ಪರಿಣಾಮಕಾರಿ ವಿಧಾನಗಳನ್ನು ತಿಳಿಸಲಾಗುತ್ತದೆ. ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಯೋಗಾಸನಗಳ ಮಾರ್ಗದರ್ಶನ ಮತ್ತು ಉಚಿತ ಲಭ್ಯ ಆಯುರ್ವೇದ ಔಷಧಿಗಳನ್ನು ವಿತರಣೆ ಮಾಡಲಾಗುತ್ತದೆ. ಚಿಕಿತ್ಸೆಗೆ ಬರುವವರು ಹಳೆಯ ವೈದ್ಯಕೀಯ ವರದಿಗಳು (ಎಕ್ಸರೇ ಮತ್ತು ಎಂಆರ್‌ಐ) ತರಬೇಕು ಹಾಗೂ ಈಗಾಗಲೇ ಬಳಸುತ್ತಿರುವ ಔಷಧಿಗಳ ವಿವರಗಳನ್ನು ತರಬೇಕು. ಹೆಚ್ಚಿನ ಮಾಹಿತಿಗಾಗಿ ಮತ್ತು ಮುಂಗಡ ನೊಂದಣಿಗಾಗಿ ಮೊ: ಸಂ.9535981085 ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಅಮೋಘ ಪರ್ವೋತ್ಸವ ಸಂಪನ್ನ

ಮುದಗಲ್: ಸಮೀಪದ ಕನ್ನಾಪೂರಹಟ್ಟಿ ಗ್ರಾಮದ ಹೊರಭಾಗದಲ್ಲಿರುವ ಶ್ರೀ ಅಮೋಘಸಿದ್ದೇಶ್ವರ ದೇವಸ್ಥಾನದಲ್ಲಿ ಪರ್ವೋತ್ಸವ ಆಚರಣೆ ಮಾಡಲಾಯಿತು. ಛಟ್ಟಿ ಅಮವಾಸ್ಯೆಯ ದಿನ ವಿಜಯಪುರ ಜಿಲ್ಲೆಯ ಅರಕೇರಿ ಮುಮ್ಮುಟ್ಟಿಗುಡ್ಡದ ಶ್ರೀ ಅಮೋಘ ಸಿದ್ದೇಶ್ವರ ಜಾತ್ರಾ ಮಹೋತ್ಸವ ಜರುಗಲಿದೆ. ಈ ಹಿನ್ನೆಲೆಯಲ್ಲಿ ಕನ್ನಾಪೂರಹಟ್ಟಿ ಗ್ರಾಮದಲ್ಲಿನ ಶ್ರೀ ಅಮೋಘ ಸಿದ್ದೇಶ್ವರ ದೇವಸ್ಥಾನಕ್ಕೆ ಗುರುವಾರ ಬೆಳಗ್ಗೆ ಶಂಕ್ರಯ್ಯ ಒಡೆಯರ್‌ನೇತೃತ್ವದಲ್ಲಿ ಕಳಶಾರೋಹಣ, ಮೂರ್ತಿಗೆ ಅಭಿಷೇಕ, ಅರ್ಚನೆ ನೆರವೇರಿಸಲಾಯಿತು. ಅಲ್ಲದೆ ಒಡೆಯರ್‌ಮನೆತನ ದವರ ನೇತೃತ್ವದಲ್ಲಿ ಭಕ್ತರಿಗೆ ಸಿಹಿ ಕರಿಗಡುಬು, ತುಪ್ಪ, ಸಂಡಿಗೆ ಸೇರಿ ವಿವಿಧ ಖಾದ್ಯಗಳ ಅನ್ನ ದಾಸೋಹ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಪರಮಯ್ಯ ಒಡೆಯರ್,ಶಿವಶಂಕರಯ್ಯ ಒಡೆಯರ್,ಶರಣಯ್ಯ ಒಡೆಯರ್,ಜ್ಯೋತೆಯ್ಯ, ಪರಮಯ್ಯ, ನಿರುಪಾದಿ ಲಿಂಗಸುಗೂರು, ಬಸಪ್ಪ ಜಾಲಿಹಾಳ, ಶಂಕ್ರಪ್ಪ ಮೇಗೂರು, ಸಿದ್ದಯ್ಯ ಭಕ್ತರು ಇದ್ದರು.

{ಕೆ.ಎನ್.ರಾಜಣ್ಣ} ಶಾಸಕ

ಸಿದ್ದರಾಮಯ್ಯ ಇಲ್ಲಾಂದ್ರೆ ಕಾಂಗ್ರೆಸ್ ಇಲ್ಲಾ, ನೋ ದೇವೇಗೌಡ– ನೋ ಜೆಡಿಎಸ್, ನೋ ಯಡಿಯೂರಪ್ಪ– ನೋ ಬಿಜೆಪಿ ಅದೇ ರೀತಿ ನೋ ಸಿದ್ದರಾಮಯ್ಯ– ನೋ ಕಾಂಗ್ರೆಸ್. ಬಿಜೆಪಿಗೆ ಯಡಿಯೂರಪ್ಪ ಹೇಗೆ ಮುಖ್ಯವೋ, ದೇವೇಗೌಡ ಹಾಗೂ ಮಕ್ಕಳು ಜೆಡಿಎಸ್ ಗೆ ಹೇಗೆ ಮುಖ್ಯವೋ ಅದೇ ರೀತಿ ಕಾಂಗ್ರೆಸ್ ಗೆ ಸಿದ್ದರಾಮಯ್ಯ ಅನಿವಾರ್ಯ. ನಮ್ಮಲ್ಲಿ ಸಿಎಂ ಕುರ್ಚಿ ಖಾಲಿಯಿಲ್ಲ. ಹಾಗಾಗಿ ಬದಲಾವಣೆ ಮಾತು ಹೇಗೆ ಬರಲಿದೆ ?.

ಜಿಲ್ಲಾಡಳಿತದಿಂದ ನಡೆದ ಏಕತಾ ನಡಿಗೆ ಯಶಸ್ವಿ: ಎಂಎಲ್‌ಸಿ ವೈ.ಎಂ.ಸತೀಶ್

ಭೇದ ಭಾವ ಮರೆತು ಭಾರತದ ಐಕ್ಯತೆಗೆ ಶ್ರಮಿಸಿ

ಬಳ್ಳಾರಿ: ಮೊದಲು ನಾವು ಭಾರತೀಯರು. ಜಾತಿ, ಮತ, ಪಂಥ, ಭೇದಭಾವ ಮರೆತು ನಾವೆಲ್ಲರೂ ಭಾರತದ ಐಕ್ಯತೆಗಾಗಿ ಶ್ರಮಿಸುವ ಮೂಲಕ ದೇಶಪ್ರೇಮ ಹೊಂದಬೇಕು ಎಂದು ವಿಧಾನಪರಿಷತ್ ಸದಸ್ಯ ವೈ.ಎಂ.ಸತೀಶ್ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೇಂದ್ರ ಸರಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯದಡಿಯ ಮೇರಾ ಯುವ ಭಾರತ್ ಕೇಂದ್ರ, ಮಹಾನಗರ ಪಾಲಿಕೆ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ರಾಷ್ಟ್ರೀಯ ಯೋಜನಾ ಘಟಕ, ಜಿಲ್ಲೆಯ ಎಲ್ಲ ಪದವಿಪೂರ್ವ ಕಾಲೇಜುಗಳು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಇವರ ಸಂಯುಕ್ತಾಶ್ರಯದಲ್ಲಿ ಉಕ್ಕಿನ ಮನುಷ್ಯ ಮತ್ತು ರಾಷ್ಟ್ರೀಯ ಏಕತೆಯ ಪ್ರತಿಪಾದಕ ಸರ್ದಾರ್ ವಲ್ಲಭಭಾಯಿ ಅವರ 150 ನೇ ಜನ್ಮ ದಿನಾಚರಣೆ ಅಂಗವಾಗಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಏರ್ಪಡಿಸಿದ್ದ ಏಕತಾ ನಡಿಗೆಯ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದರು.

ಮಾಜಿ ಶಾಸಕ ಜಿ.ಸೋಮಶೇಖರ ರೆಡ್ಡಿ ಮಾತನಾಡಿ, ಹಲವು ತ್ಯಾಗ-ಬಲಿದಾನಗಳಿಂದ ನಮಗೆ ಸ್ವಾತಂತ್ರ್ಯ ಲಭಿಸಿದ್ದು, ಅದನ್ನು ಉಳಿಸಿಕೊಳ್ಳುವ ಮತ್ತು ಬೆಳೆಸುವ ಕೆಲಸವಾಗಬೇಕು. ಇಂದಿನ ಯುವ ಪೀಳಿಗೆ ಉನ್ನತ ಮಟ್ಟದ ಸ್ಥಾನ ಹೊಂದುವ ಮೂಲಕ ಸ್ವ-ದೇಶದಲ್ಲಿಯೇ ದುಡಿಯಬೇಕು. ದೇಶದ ಜಿಡಿಪಿ ಹೆಚ್ಚಳಕ್ಕೆ ಕಾರಣೀಭೂತರಾಗಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಏರ್ಪಡಿಸಿದ್ದ ಏಕತಾ ನಡಿಗೆಯ ವೇದಿಕೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ವೈ.ಎಂ.ಸತೀಶ್ ಮಾತನಾಡಿದರು.

ಏಕತಾ ನಡಿಗೆಯ ರಾಜ್ಯ ಸಂಚಾಲಕ ಮಂಜುನಾಥ ಬಾಳೆಕಾಯಿ ಮಾತನಾಡಿ, ಪ್ರಪಂಚದಲ್ಲಿಯೇ ಸದೃಢ ಹೊಂದಿದ ದೇಶ ನಮ್ಮದು. ನಮ್ಮ ದೇಶದ ಸೈನಿಕರ ಉಸಿರಿನಿಂದ ದೇಶದಲ್ಲಿ ತ್ರಿವರ್ಣ ಧ್ವಜ ಹಾರಾಡುತ್ತಿದೆ. ಚಂದ್ರನ ಮೇಲೆ ಮತ್ತು ಮುಂದಿನ ದಿನಗಳಲ್ಲಿ ಮಂಗಳನ ಅಂಗಳದಲ್ಲಿ ನಮ್ಮ ದೇಶದ ತ್ರಿವರ್ಣ ಧ್ವಜ ಹಾರಾಡಲಿದೆ ಎಂದು ಸೇನೆಯ ಕರ್ತವ್ಯವನ್ನು ಬಣ್ಣಿಸಿದರು.

ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೊಳಿಸುವ, ದೇಶದ ರಕ್ಷಣೆಯ ವ್ಯವಸ್ಥೆಯನ್ನು ರೂಪಿಸುವ ಹಾಗೂ ಭಾರತವನ್ನು ಒಗ್ಗಟ್ಟಾದ ದೇಶವನ್ನಾಗಿ ಕಟ್ಟುವ ಮಹತ್ತರ ಜವಾಬ್ದಾರಿಯನ್ನು ಸರ್ದಾರ್‌ವಲ್ಲಭಭಾಯಿ ಪಟೇಲರು ನಿರ್ವಹಿಸಿದ್ದರು ಎಂದು ತಿಳಿಸಿದರು.

> **ಭಾರತದ ಮೊದಲ ಉಪಪ್ರಧಾನ ಮಂತ್ರಿ ಹಾಗೂ ಗೃಹ ಸಚಿವರಾಗಿದ್ದ ಸರ್ದಾರ್‌ವಲ್ಲಭಭಾಯಿ ಪಟೇಲ್ ಅವರು ಭಾರತದ 'ಉಕ್ಕಿನ ಮನುಷ್ಯ' ಎಂದೇ ಪ್ರಖ್ಯಾತರಾಗಿದ್ದರು. ಭಾರತದ 550ಕ್ಕೂ ಹೆಚ್ಚು ರಾಜಪ್ರಭುತ್ವದ ರಾಜ್ಯಗಳನ್ನು ಭಾರತಕ್ಕೆ ಸೇರಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದರು.**
> – ವೈ.ಎಂ.ಸತೀಶ್, ವಿಧಾನಪರಿಷತ್ ಸದಸ್ಯ

2018ರ ಅ.31 ರಂದು ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಗುಜರಾತ್ನ ನರ್ಮದಾ ನದಿಯ ದಡದಲ್ಲಿ ಪಟೇಲ್ ಅವರ 182 ಮೀ. ಎತ್ತರದ ಏಕತಾ ಪ್ರತಿಮೆಯನ್ನು ಉದ್ಘಾಟಿಸಿದರು ಎಂದರು.

ಕಾರ್ಯಕ್ರಮದಲ್ಲಿ ಆತ್ಮ ನಿರ್ಭರ ಭಾರತ್ ಕುರಿತಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಏಕತಾ ನಡಿಗೆಯಲ್ಲಿ ವಿವಿಧ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಒಳಗೊಂಡಂತೆ ಸಹಸ್ರಾರು ಜನ ಭಾಗವಹಿಸಿದ್ದು ವಿಶೇಷವಾಗಿತ್ತು.

ನಡಿಗೆಗೆ ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್‌ಪಿ.ಗಾದೆಪ್ಪ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ನಡಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರ್ಕಾರಿ (ಮಾ.ಪು) ಪದವಿಪೂರ್ವ ಕಾಲೇಜು ಮೈದಾನದಿಂದ ಆರಂಭಗೊಂಡು ಗಡಿಗಿ ಚೆನ್ನಪ್ಪ ವೃತ್ತ– ಬೆಂಗಳೂರು ರಸ್ತೆ– ಹಳೆಯ ಬ್ರೂಸ್ ಪೇಟೆ ಪೊಲೀಸ್ ಠಾಣೆಯ ಮುಂಭಾಗ– ಎಚ್. ಆರ್.ಗವಿಯಪ್ಪ ವೃತ್ತ– ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ನಡೆಯಿತು.

> **ಪ್ರಮುಖ ಬೀದಿಗಳಲ್ಲಿ ನಡಿಗೆ**
> **ಕಾರ್ಯಕ್ರಮಕ್ಕೂ ಮುನ್ನ ಸರ್ದಾರ್‌ವಲ್ಲಭಭಾಯಿ ಪಟೇಲ್ ಅವರ 150 ನೇ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಪ್ರಮುಖ ಬೀದಿಗಳಲ್ಲಿ ಜರುಗಿದ ಏಕತಾ ನಡಿಗೆ ಜನರ ಗಮನಸೆಳೆಯಿತು.**

ಈ ವೇಳೆ ಮೇರಾ ಯುವ ಭಾರತ್ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಸಂಜೀವ್ ಬೊಕ್ಕೆ, ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯ ಎನ್ ಎಸ್‌ಎಸ್ ಘಟಕದ ಯೋಜನಾಧಿಕಾರಿ ಡಾ. ಕುಮಾರ್, ಮಹಾನಗರ ಪಾಲಿಕೆ ಸದಸ್ಯರಾದ ಶ್ರೀನಿವಾಸ್ ಮೋತ್ಕಾರ್,ಸುರೇಖಾ ಮಲ್ಲನಗೌಡ, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಚ್.ಹನುಮಂತಪ್ಪ, ಜಿಲ್ಲಾ ಸಂಚಾಲಕರಾದ ಅನೀಲ್ ಕುಮಾರ್‌ಮೋಕಾ, ಹುಲುಗಮ್ಮ, ಎಂ.ಎಸ್.ಸುಂಕಪ್ಪ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸ್ವಯಂ–ಸೇವಕರು, ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಗ್ರಂಥಾಲಯ ಬೌದ್ಧಿಕ ಬೆಳವಣಿಗೆಗೆ ಪೂರಕ

ಸಂಡೂರು: ಪಟ್ಟಣದ ತಹಸೀಲ್ ಕಚೇರಿಯ ಆವರಣದಲ್ಲಿ ಸಂಡೂರು ಸಾರ್ವಜನಿಕ ಗ್ರಂಥಾಲಯದಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಸಮಾರೋಪ ಸಮಾರಂಭವು ಸಂಪನ್ನಗೊಂಡಿತು.

ಶಿರಸ್ತೇದಾರ ಕೆ.ಎಂ.ಶಿವಕುಮಾರ ಮಾತನಾಡಿ, ನಿರಂತರ ಓದುವಿಕೆಯಿಂದ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ ಹಾಗೂ ಇದು ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿದೆ. ಪ್ರತಿಯೊಬ್ಬರೂ ಓದುವದನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು ಎಂದು ಹೇಳಿದರು.

ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿದ್ದಣ್ಣ ಯಾಳವಾರ ಮಾತನಾಡಿ, ಬಂಗಾರಕ್ಕಿಂತಲೂ ಪುಸ್ತಕಗಳಿಗೆ ಹೆಚ್ಚಿನ ಮೌಲ್ಯವಿದೆ. ಈ ಜ್ಞಾನ ಸಂಪತ್ತನ್ನು ದಿನನಿತ್ಯ ಎಲ್ಲರೂ ಪಡೆದುಕೊಳ್ಳಬೇಕು ಎಂದು ಪುಸ್ತಕಗಳ ಮಹತ್ವವನ್ನು ತಿಳಿಸಿದರು.

ಶಾಖಾ ಗ್ರಂಥಾಲಯ ಅಧಿಕಾರಿ ಮಲ್ಲಪ್ಪ ಗುಡ್ಲಾನೂರ್‌ಮಾತನಾಡಿ, ಸಾರ್ವಜನಿಕ ಗ್ರಂಥಾಲಯವನ್ನು ಬಳಸಿ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳಬೇಕು ಮತ್ತು ಕಡ್ಡಾಯವಾಗಿ ಗ್ರಂಥಾಲಯದ ಸದಸ್ಯತ್ವ ಪಡೆಯಬೇಕು ಎಂದು ತಿಳಿಸಿದರು. ಗ್ರಂಥಪಾಲಕರಾದ ಹೆಚ್. ವೀರೇಶ್ ಗ್ರಂಥಾಲಯಗಳ ಉಪಯೋಗಗಳ ಬಗ್ಗೆ ಉಪನ್ಯಾಸ ನೀಡಿದರು.

ಸಂಡೂರು ಸಾರ್ವಜನಿಕ ಗ್ರಂಥಾಲಯದಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಸಮಾರೋಪ ಸಮಾರಂಭವು ಸಂಪನ್ನಗೊಂಡಿತು.

> **ಸಾರ್ವಜನಿಕ ಗ್ರಂಥಾಲಯಗಳಲ್ಲಿ ಅತ್ಯುತ್ತಮ ಗ್ರಂಥಗಳು, ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ಲಭ್ಯವಿದ್ದು, ಇವುಗಳನ್ನು ಸದ್ಬಳಕೆ ಮಾಡಿಕೊಂಡು ನೆಮ್ಮದಿಯ ಜೀವನ ರೂಪಿಸಿಕೊಳ್ಳುವಂತೆ ಸಲಹೆ.**
> – ಪ್ರಭು ದೇವಯ್ಯ ಎ.ಎಂ, ದೈಹಿಕ ಶಿಕ್ಷಣ ಪರಿವೀಕ್ಷಕ

ಈ ಸಂದರ್ಭದಲ್ಲಿ ಸಾರ್ವಜನಿಕ ಗ್ರಂಥಾಲಯದ ಮಹತ್ವ ಕುರಿತು ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಶ್ರೀಮತಿ ಲಕ್ಷ್ಮೀ ಎಸ್ ನಾನಾವಟೆ ಶಿಕ್ಷಣ ಮಹಾವಿದ್ಯಾಲಯದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಾದ ಅಕ್ಷತ ಪ್ರಥಮಸ್ಥಾನ, ವೀಣಾ ಎಂ ದ್ವಿತೀಯಸ್ಥಾನ, ಕೃಷ್ಣವೇಣಿ ತೃತೀಯಸ್ಥಾನ ಪಡೆದರು.ಎಲ್ಲ ವಿಜೇತರಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ಉತ್ತಮ ಓದುಗರಾದ ಎಸ್.ಎ.ಶ್ರೀಶೈಲಪ್ಪ ಮತ್ತು ವಾಣಿ ವೈ ಅವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ನೌಕರ ಭಾಸ್ಕರ, ಎಎಸ್. ಐ ಕುಮಾರಸ್ವಾಮಿ ಹಾಗೂ ವಿದ್ಯಾರ್ಥಿಗಳು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ವಿಜ್ಞಾನ ಶಿಕ್ಷಕ ಮಾರೇಶ ನಾಯಕ ನಿರೂಪಿಸಿದರು. ಪ್ರಿಯಾಂಕ ಮತ್ತು ಸಂಗಡಿಗರು ಪ್ರಾರ್ಥಿಸಿದರು, ಮನೋಹರ ಸ್ವಾಗತಿಸಿದರು, ಕಾವಡಿ ಮಂಜಪ್ಪ ವಂದಿಸಿದರು.

ಕೆಪಿಎಸ್ ಮ್ಯಾಗ್ನೇಟ್ ಶಾಲೆಗಳ ವಿಲೀನಕ್ಕೆ ವಿರೋಧ

ರಾಯಚೂರು: ಕೆಪಿಎಸ್ ಹಾಗೂ ಮ್ಯಾಗ್ನೇಟ್ ಶಾಲೆಗಳ ಗುರುತಿಸುವಿಕೆ, ವಿಲೀನ ಪ್ರಕ್ರಿಯೆ ತಕ್ಷಣವೇ ನಿಲ್ಲಿಸುವ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಿ ಸರಕಾರ ಶಾಲೆಗಳಲ್ಲಿ ಗುಣಮಟ್ಟದ ಜತೆಗೆ ಸರಕಾರಿ ಶಾಲೆಗಳ ಬಲವರ್ಧನೆಗೆ ಸರಕಾರ ಜನವರಿ ಮೊದಲ ವಾರದ ಒಳಗಡೆ ಕ್ರಮ ವಹಿಸಬೇಕು. ನಿರ್ಲಕ್ಷ್ಯ ವಹಿಸಿದರೆ, ಈ ಭಾಗದಲ್ಲಿ ಜ.25 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಸರಕಾರಿ ಶಾಲೆಗಳ ಅಭಿವೃದ್ಧಿ ವೇದಿಕೆ ಮುಖ್ಯಸ್ಥೆ ವಿದ್ಯಾ ಪಾಟೀಲ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎಸ್ ಹಾಗೂ ಮ್ಯಾಗ್ನೇಟ್ ಶಾಲೆಗಳ ಹೆಸರಲ್ಲಿ ಸರಕಾರಿ ಶಾಲೆಗಳನ್ನು ವಿಲೀನಗೊಳಿಸುವ ಹುನ್ನಾರ ರಾಜ್ಯ ಸರಕಾರ ನಡೆಸಿದೆ. ಕಲ್ಯಾಣ ಕರ್ನಾಟಕ ಮಂಡಳಿಯಿಂದ 200 ಕೆಪಿಎಸ್ ಶಾಲೆಗಳನ್ನು ಪ್ರಾರಂಭಕ್ಕೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಈಗಾಗಲೇ ಪ್ರಾಯೋಗಿಕವಾಗಿ ಚನ್ನಪಟ್ಟಣ, ಚಿಕ್ಕಬಳ್ಳಾಪೂರು ಜಿಲ್ಲೆಗಳಲ್ಲಿ ಕೆಪಿಎಸ್ ಶಾಲೆಗಳ ಪಕ್ಕದಲ್ಲಿರುವ ಶಾಲೆಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇದೇ ರೀತಿ ಇಡೀ ರಾಜ್ಯದಲ್ಲಿ ಗುರುತಿಸಿ ವಿಲೀನಗೊಳಿಸಿದರೇ ರಾಜ್ಯದಲ್ಲಿರುವ ಅರ್ಧ ಶಾಲೆಗಳು ಮುಚ್ಚುತ್ತವೆ. ಜನವರಿ ಮೊದಲನೇ ವಾರದೊಳಗಡೆ ಈ ಬೇಡಿಕೆಗಳು ಈಡೇರಿಕೆಯಾಗದಿದ್ದರೇ ಹೋರಾಟ ಅನಿವಾರ್ಯವಾಗುತ್ತದೆ. ಬೇಡಿಕೆ ಈಡೇರದೇ ಪಕ್ಷದಲ್ಲಿ ಬಸವ ಕಲ್ಯಾಣದಿಂದ ಗುಲ್ಬರ್ಗಾದವರೆಗೆ ಪಾದಯಾತ್ರೆ ಮೂಲಕ ಜ.25 ರಂದು ಅಹೋರಾತ್ರಿ ಧರಣೆ ಹಮ್ಮಿಕೊಳ್ಳಲಾಗುವುದು ಎಂದು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸೈಯದ್ ಅಫೀಜುಲ್ಲಾ, ಶಿವರಾಮರೆಡ್ಡಿ ಮತ್ತು ಮಾರೆಮ್ಮ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಸರಕಾರಿ ಶಾಲೆಗಳ ಅಭಿವೃದ್ಧಿ ವೇದಿಕೆ ಮುಖ್ಯಸ್ಥೆ ವಿದ್ಯಾ ಪಾಟೀಲ್ ಮಾತನಾಡಿದರು.

> **ರಾಜ್ಯ ಸರಕಾರ ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳಲ್ಲಿ 84 ಶಾಲೆಗಳನ್ನು ಮಂಜೂರು ಮಾಡಿ ಜಿಲ್ಲಾವಾರು ಶಾಲೆಗಳನ್ನು ಗುರುತಿಸಿದೆ. ಈಗಾಗಲೇ ರಾಜ್ಯದಲ್ಲಿ 700 ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲು ಸಜ್ಜುಗೊಂಡಿದೆ. ವಿಲೀನ ಪ್ರಕ್ರಿಯೆಗೆ ಒಳಪಟ್ಟರೇ 25 ಸಾವಿರ ದಿಂದ 26 ಸಾವಿರ ಶಾಲೆಗಳು ಮುಚ್ಚುವ ಭೀತಿಯಿದೆ.**
> –ವಿದ್ಯಾ ಪಾಟೀಲ್, ಮುಖ್ಯಸ್ಥೆ

ವಾರಸುದಾರರಿಗೆ ಮೊಬೈಲ್‌ಗಳು ಹಸ್ತಾಂತರ

ಹರಪನಹಳ್ಳಿ: ತಾಲೂಕಿನಾದ್ಯಂತ ಬಸ್ ನಿಲ್ದಾಣ, ಸಂತೆ ಮಾರುಕಟ್ಟೆ ಹಾಗೂ ಇತರೆಡೆಗಳಲ್ಲಿ ಕಳುವಾದ ಮೊಬೈಲ್ ಗಳಲ್ಲಿ ಒಟ್ಟು 35 ಮೊಬೈಲ್‌ಗಳ ಪತ್ತೆ ಹಚ್ಚಿ ಮೊಬೈಲ್ ಕಳೆದುಕೊಂಡ ಸಾರ್ವಜನಿಕರಿಗೆ ಡಿವೈಎಸ್ಪಿ ಸಂತೋಷ ಚವ್ಹಾಣ್ ಸಾರ್ವಜನಿಕರಿಗೆ ಮೊಬೈಲ್ ಹಿಂದಿರುಗಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೊಬೈಲ್ ಕಳೆದುಕೊಂಡ ಗ್ರಾಹಕರ ಮೊಬೈಲ್‌ಗಳನ್ನು ಹರಪನಹಳ್ಳಿ ಪೊಲೀಸ್ ಠಾಣೆಯ ಐಪಿಎಸ್, ಸಿಪಿಐ ಮತ್ತು ಇತರೆ ಸಿಬ್ಬಂದಿ ಪತ್ತೆ ಹಚ್ಚಿ ಗ್ರಾಹಕರಿಗೆ ಹಿಂದಿರುಗಿಸಲು ಕಾರಣಿಭೂತರಾದ ಪೊಲೀಸ್ ಸಿಬ್ಬಂದಿಗೆ ಮೆಚ್ಚುಗೆ ವ್ಯಕ್ತಪಡಿಸಿ ಬಳಿಕ ಮಾತನಾಡಿದ ಅವರು, ಪ್ರಸ್ತುತ ವರ್ಷದಲ್ಲಿ ಹರಪನಹಳ್ಳಿ ಪಟ್ಟಣದ ಬಸ್ ನಿಲ್ದಾಣದಲ್ಲಿ, ಸಂತೆ ಮಾರುಕಟ್ಟೆ ಹಾಗೂ ಇತರೆಡೆಗಳಲ್ಲಿ ಮೊಬೈಲ್ ಗಳನ್ನು ಕಳೆದುಕೊಂಡ ಬಗ್ಗೆ ಸಾರ್ವಜನಿಕರು ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ದಾಖಲಿಸಿದ್ದು, ಹರಪನಹಳ್ಳಿ ಪೊಲೀಸ್ ಠಾಣೆಯ. ಸಿ.ಪಿ.ಐ ಮಹಾಂತೇಶ ಸಜ್ಜನ್, ಹರಪನಹಳ್ಳಿ ಪಿ.ಎಸ್.ಐ ಶಂಭುಲಿಂಗ ಸಿ.ಹಿರೇಮಠ ರವರ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಪಿಎಸ್.ಐ ಮೀನಾಕ್ಷಿ ಸಿಬ್ಬಂದಿಯವರಾದ ಕೆ.ಎಂ.ಆನಂದ, ಯು. ನಾಗರಾಜ ಸಿ.ಪಿ.ಸಿ. ಠಾಣಾ ಬರಹಗಾರರಾದ ಕೆ.ಎಚ್.ಎಂ ರಾಜಶೇಖರ, ದಾದಾಪುರ ರವಿಕುಮಾರ್ ಹಾಗೂ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಸಿ.ಡಿ.ಆರ್‌ವಿಭಾಗದಲ್ಲಿ ಕೆಲಸ ಮಾಡುವ. ಕುಮಾರ ನಾಯ್ಕ ಅವರುಗಳು ಸಿ.ಇ.ಐ.ಆರ್‌ತಂತ್ರಾಂಶದ ಸಹಾಯದಿಂದ ಒಟ್ಟು 35 ಮೊಬೈಲ್ ಗಳು ಅಂದಾಜು ಬೆಲೆ 4,50,000ರು. ಪತ್ತೆ ಹಚ್ಚಿ ಸಾರ್ವಜನಿಕರಿಗೆ ಮೊಬೈಲ್ ಗಳನ್ನು ಒಪ್ಪಿಸಿದ್ದು, ಸದರಿ ಮೊಬೈಲ್ ಗಳನ್ನು ಪತ್ತೆಹಚ್ಚಲು ಶ್ರಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ವಿಜಯನಗರ, ಜಿಲ್ಲಾ ಎಸ್ ಪಿ.ಅವರು ಹರಪನಹಳ್ಳಿ ಪ್ರಶಂಸೆ ವ್ಯಕ್ತಪಡಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮೊಬೈಲ್ ಕಳೆದುಕೊಂಡ ಸಾರ್ವಜನಿಕರಿಗೆ ಡಿವೈಎಸ್ಪಿ ಸಂತೋಷ ಚಹ್ವಾಣ್ ಮೊಬೈಲ್ ಹಿಂದಿರುಗಿಸಿದರು.

ನೀರಿನ ಬರ ಎದುರಾಗದಂತೆ ಮುನ್ನೆಚ್ಚರಿಕೆ

ಮಸ್ಕಿ: ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಬೇಸಿಗೆ ಮುಂಚೆ ನೀರು ಸ್ಥಗಿತಗೊಳ್ಳುವ ಹಿನ್ನೆಲೆಯಲ್ಲಿ ಪಟ್ಟಣದ ಜನತೆಗೆ ಕುಡಿವ ನೀರಿನ ಬರ ಎದುರಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದು ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಪುರಸಭೆ ಕಚೇರಿ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಜನವರಿ ಮೊದಲ ವಾರದಲ್ಲಿ ಕಾಲುವೆ ನೀರು ಸ್ಥಗಿತಗೊಳ್ಳಲಿದೆ. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಿ ನೀರಿನ ಅಭಾವ ತಡೆಯಲು ಎಚ್ಚರ ವಹಿಸಬೇಕು ಎಂದರು.

ವಿವಿಧ ವಾರ್ಡಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಮೊದಲ ಆದ್ಯತೆ ನೀಡಬೇಕು ಎಂದು ಪುರಸಭೆ ಸದಸ್ಯರು ಒತ್ತಾಯಿಸಿದರು.

ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಮಾತನಾಡಿ, ಪುರಸಭೆಯ 23 ವಾರ್ಡಗಳಲ್ಲಿ ಅಭಿವೃದ್ಧಿ ಕಾರ್ಯ ಕೈ ಗೊಳ್ಳಲಾಗುವುದು ಇತ್ತೀಚಿಗೆ ಸುರಿದ ಮಳೆಗೆ ಕೆಲ ವಾರ್ಡಗಳ ರಸ್ತೆಗಳು ಹಾಳಾಗಿದ್ದು, ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಲು ಮುಖ್ಯಾಧಿಕಾರಿಗೆ ಸೂಚಿಸಿದರು.

ಪಟ್ಟಣದ ಹೊರವಲಯದಲ್ಲಿರು ಸರ್ವೆ ನಂ.238, 402, 402/3 251, 103, 97/1, 402/5 ಇತರ ಸರ್ವೆ ನಂ. ಗಳ ಭೂಮಿ ಬಿನ್ ಶೇತ್ಕಿ ಮಾಡಿ ಹೊಸ ಲೇಔಟ್ ನಿರ್ಮಾಣಕ್ಕೆ ಸಭೆ ಒಪ್ಪಿಗೆ ನೀಡಿತು. ಪಟ್ಟಣದ ಮುಖ್ಯ ವೃತ್ತಗಳ ಬಳಿ ಪುರಸಭೆ ಪರವಾನಿಗೆ ಪಡೆಯದೆ ಎಲ್ಲೆಂದರಲ್ಲಿ ಬ್ಯಾನರ್ ಅಳವಡಿಸಲಾಗುತ್ತಿದೆ ಎಂದು ಪುರಸಭೆ ಸದಸ್ಯರು ಸಭೆ ಗಮನಕ್ಕೆ ತಂದು ಬ್ಯಾನರ್ ಅಳವಡಿಕೆಗೆ ಬ್ರೇಕ್ ಹಾಕಲು ಒತ್ತಾಯಿಸಿದರು.

ಸಭೆಯಲ್ಲಿ ಪುರಸಭೆ ಉಪಾಧ್ಯಕ್ಷೆ ಗೀತಮ್ಮ ಶಿವರಾಜ ಬುಕ್ಕಣ್ಣ, ಸ್ಥಾಯಿ ಸಮಿತಿ ಅಧ್ಯಕ್ಷ ಚೇತನ್ ಪಾಟೀಲ್, ಮುಖ್ಯಾಧಿಕಾರಿ ನರಸರೆಡ್ಡಿ, ಪುರಸಭೆ ಸದಸ್ಯರು ಇದ್ದರು.

ಮಸ್ಕಿಯ ಪುರಸಭೆ ಕಚೇರಿ ಸಭಾಂಗಣದಲ್ಲಿ ಸಾಮಾನ್ಯ ಸಭೆ ಜರುಗಿತು.

> **ಹನುಮಮಾಲೆ ವಿಸರ್ಜನೆ ಕಾರ್ಯಕ್ರಮದ ಹಿನ್ನೆಲೆ ಸುಮಾರು 25 ಕಡೆ ಚೆಕ್ ಪೋಸ್ಟ್ ನಿರ್ಮಾಣ ಮಾಡಲಾಗಿದೆ. ಪಾರ್ಕಿಂಗ್ ಸ್ಥಳ ಮತ್ತು ಊಟದ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲು ಸೂಚಿಸಲಾಗಿದೆ. ಅಧಿಕಾರಿಗಳು ಸೇರಿ ಸುಮಾರು 1500 ಪೊಲೀಸ್ ಸಿಬ್ಬಂದಿ ಕಾರ್ಯಕ್ರಮಕ್ಕೆ ನಿಯೋಜನೆ ಮಾಡಲು ಯೋಜಿಸಲಾಗಿದೆ.**
> –ಡಾ.ರಾಮ್ ಎಲ್.ಅರಸಿದ್ಧಿ, ಎಸ್ಪಿ, ಕೊಪ್ಪಳ

ಅಂಜನಾದ್ರಿ ಬೆಟ್ಟಕ್ಕೆ ಡಿಸಿ ಡಾ.ಸುರೇಶ ಬಿ.ಇಟ್ನಾಳ ಭೇಟಿ | ಮೂಲ ಸೌಕರ್ಯ ಕಲ್ಪಿಸಲು ಸೂಚನೆ

ಹನುಮಮಾಲೆ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ

ಗಂಗಾವತಿ: ತಾಲೂಕಿನ ಪೌರಾಣಿಕ ಪ್ರಸಿದ್ಧ ಅಂಜನಾದ್ರಿ ಬೆಟ್ಟಕ್ಕೆ ಡಿ.2 ಮತ್ತು 3 ರಂದು ಹನುಮಮಾಲೆ ವಿಸರ್ಜನೆಗೆ ಬರುವ ಭಕ್ತರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ ಹೇಳಿದರು.

ತಾಲೂಕಿನ ಆನೆಗೊಂದಿ ಸಮೀಪದ ಅಂಜನಾದ್ರಿ ಬೆಟ್ಟಕ್ಕೆ ಭೇಟಿ ನೀಡಿ ಡಿ.2 ಮತ್ತು 3 ರಂದು ನಡೆಯಲಿರುವ ಹನುಮಮಾಲೆ ವಿಸರ್ಜನೆ ಕಾರ್ಯಕ್ರಮದ ಪೂರ್ವ ಸಿದ್ದತೆಯ ಸ್ಥಳ ಪರಿಶೀಲನೆ ನಡೆಸಿ ಗುರುವಾರ ಮಾತನಾಡಿದರು.

ಹನುಮಮಾಲೆ ವಿಸರ್ಜನೆ ಕಾರ್ಯಕ್ರಮದಲ್ಲಿ ಯಾವುದೇ ಸಮಸ್ಯೆಗಳಾಗದಂತೆ ವ್ಯವಸ್ಥೆ ಮಾಡಬೇಕಿದೆ. ಈ ಹಿನ್ನೆಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಪಂಚಾಯತ ಸಿಇಒ ಸೇರಿ ಇಡೀ ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಲಾಗಿದೆ. ವಾಹನಗಳ ಪಾರ್ಕಿಂಗ್, ಬ್ಯಾರಿಕೇಡ್ ವ್ಯವಸ್ಥೆ, ಬೆಟ್ಟಕ್ಕೆ ವಿದ್ಯುತ್ ಲೈಟ್ ಹಾಕುವುದಕ್ಕೆ ವ್ಯವಸ್ಥೆ ಆಗಬೇಕಿದೆ. ಕಾರ್ಯಕ್ರಮಕ್ಕೆ ಬರುವ ಭಕ್ತರಿಗೆ ಪ್ರಸಾದ ವ್ಯವಸ್ಥೆ, ಕುಡಿಯುವ ನೀರು, ಹಾಗೂ ಸಿಸಿ ಕ್ಯಾಮೆರಾ ಅಳವಡಿಕೆ ಸೇರಿ ಇತರೆ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಎಸ್ಪಿ ಡಾ.ರಾಮ್ ಎಲ್. ಅರಸಿದ್ಧಿ ಮಾತನಾಡಿ, ಬೆಟ್ಟಕ್ಕೆ ಬರುವ ಭಕ್ತರಿಗೆ ಅನೇಕ ಕಡೆ ಅವರ ವಾಹನ ಪಾರ್ಕ್ ಮಾಡಲು ವ್ಯವಸ್ಥೆ ಮಾಡಲಾಗಿದೆ. ಎಲ್ಲ ಕಡೆಯ ಪಾರ್ಕಿಂಗ್ ಸ್ಥಳಕ್ಕೆ ಭೇಟಿ ನೀಡಲಾಗಿದೆ. ಯಾವುದೇ ಸಮಸ್ಯೆ ಆಗದಂತೆ ಎಲ್ಲ ಕಡೆ ಭದ್ರತೆ ವ್ಯವಸ್ಥೆ ಮಾಡುವ ಮೂಲಕ ಹನುಮಮಾಲೆ ಕಾರ್ಯಕ್ರಮಕ್ಕೆ ಬರುವ ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದರು.

ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿ, ಗ್ರಾ.ಪಂ ನಿಂದ ಸ್ವಚ್ಛತೆ, ಕುಡಿವ ನೀರಿನ ವ್ಯವಸ್ಥೆ ಸರಿಯಾಗಿ ನಿರ್ವಹಣೆ ಮಾಡಲು ಗ್ರಾಮೀಣ ಕುಡಿವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಬರುವ ಭಕ್ತರಿಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದರು.

ಎಡಿಸಿ ಸಿದ್ರಾಮೇಶ್ವರ, ಎಎಸ್ಪಿ ಆರ್.ಹೇಮಂತ ಕುಮಾರ್,ಸಹಾಯಕ ಆಯುಕ್ತ ಮಹೇಶ ಮಾಲಗಿತ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ, ತಹಸೀಲ್ದಾರ್‌ಗಳಾದ ವಿಶ್ವನಾಥ, ವಿಠಲ್ ಚೌಗಲಾ ಇದ್ದರು.



ಅಂಜನಾದ್ರಿ ಬೆಟ್ಟಕ್ಕೆ ಡಿಸಿ ನೇತೃತ್ವದಲ್ಲಿ ಅಧಿಕಾರಿಗಳು ಗುರುವಾರ ಭೇಟಿ ನೀಡಿ, ಹನುಮಮಾಲೆ ವಿಸರ್ಜನೆ ಕಾರ್ಯಕ್ರಮದ ಹಿನ್ನೆಲೆ ಸ್ಥಳ ಪರಿಶೀಲಿಸಿದರು.

> **ಈ ಬಾರಿ ಹನುಮಮಾಲೆ ವಿಸರ್ಜನೆಗೆ ಒಂದೂವರೆಯಿಂದ ಎರಡು ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಈ ಕಾರ್ಯಕ್ರಮಕ್ಕೆ ಬರುವ ಭಕ್ತರಿಗೆ ತೊಂದರೆಯಾಗದಂತೆ ಡಿ.30ರ ಒಳಗೆ ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕಿದೆ. ಎಲ್ಲ ಅಧಿಕಾರಿಗಳು ತಮಗೆ ಒಪ್ಪಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಿದ್ದೇವೆ.**
> –ಡಾ.ಸುರೇಶ ಇಟ್ನಾಳ, ಜಿಲ್ಲಾಧಿಕಾರಿ

> **ವ್ಯವಸ್ಥೆ ಪರಿಶೀಲನೆ ಮಾಡಿದ ಜಿಲ್ಲಾಧಿಕಾರಿ**
> ಬೆಳ್ಳಂ ಬೆಳಗ್ಗೆಯೇ ಅಂಜನಾದ್ರಿ ಬೆಟ್ಟಕ್ಕೆ ಡಿಸಿ ಡಾ. ಸುರೇಶ ಇಟ್ನಾಳ ನೇತೃತ್ವದ ಅಧಿಕಾರಿಗಳ ತಂಡ ಅಂಜನಾದ್ರಿ ಬೆಟ್ಟಕ್ಕೆ ಭೇಟಿ ಮಾಡಿ ಪರಿಶೀಲಿಸಿತು. ಪಾರ್ಕಿಂಗ್ ವ್ಯವಸ್ಥೆ, ಬ್ಯಾರಿಕೇಡ್ ವ್ಯವಸ್ಥೆ, ಕಂಟ್ರೋಲ್ ರೂಮ್, ಮೆಡಿಕಲ್ ಟೀಂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ವೇದಪಾಠ ಶಾಲೆಯಲ್ಲಿ ಪ್ರಸಾದ ವಿತರಣೆ ಮಾಡುವ ವ್ಯವಸ್ಥೆ ನೋಡಿದರು. ಈ ವೇಳೆ ಜಿಲ್ಲಾಧಿಕಾರಿಗಳು, ಅಂಜನಾದ್ರಿ ಬೆಟ್ಟದ ತುದಿಯ ಸುತ್ತಲು ಬ್ಯಾರಿಕೇಡ್ ಅಳವಡಿಸಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಮಾಚಾರ ಸಣ್ಣದಲ್ಲ

ವಿಶ್ವ ಬಾಕ್ಸಿಂಗ್ ಕಪ್: ಆರುಂಧತಿಗೆ ಚಿನ್ನ

ನೊಯ್ಡಾ: ಭಾರತದ ಮಹಿಳಾ ಬಾಕ್ಸರ್ ಆರುಂಧತಿ ಚೌಧರಿ ಅವರು ಇಲ್ಲಿನ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಗುರುವಾರ ನಡೆದ ವಿಶ್ವ ಬಾಕ್ಸಿಂಗ್ ಕಪ್‌ನ ಫೈನಲ್‌ನಲ್ಲಿ ಚಿನ್ನದ ಪದಕವನ್ನು ಗೆದ್ದು ಕೊಂಡಿದ್ದಾರೆ. 70 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು, ಉಜ್ಬೇಕಿಸ್ತಾನದ ಝೋಕಿರೋವಾ ಅವರನ್ನು 5-0 ಅಂತರದ ಗೇಮ್‌ನಲ್ಲಿ ಸೋಲಿಸಿ ಪದಕ ಗೆದ್ದರು. ಆ ಮೂಲಕ ಗಾಯದಿಂದ ದೂರ ಉಳಿದಿದ್ದ ಅವರು ಒಂದೂವರೆ ವರ್ಷದ ಬಳಿಕ ಪದಕ ಗೆದ್ದು ಸಂಭ್ರಮಿಸಿದರು. ನವೆಂಬರ್ 18ರಂದು ನಡೆದ ಪಂದ್ಯದಲ್ಲಿ ತನ್ನ ಎದುರಾಳಿ ಜರ್ಮನಿಯ ಲೋನಿ ಮುಲ್ಲರ್ ಅವರನ್ನು ಸೋಲಿಸಿ ಆರುಂಧತಿ ಫೈನಲ್‌ಗೇರಿದ್ದರು. 2026ರ ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆಲ್ಲುವುದು ಇದೀಗ ತನ್ನ ಮುಂದಿರುವ ಗುರಿ ಎಂದು ಆರುಂಧತಿ ಪಂದ್ಯದ ಬಳಿಕ ಹೇಳಿದರು. ಕೋಚ್ ಅಶೋಕ್ ಗೌತಮ್ ಕೂಡ ಆರುಂಧತಿಯ ಯಶಸ್ಸಿಗೆ ಸಂತೋಷ ವ್ಯಕ್ತಪಡಿಸಿದ್ದಾರೆ.

ಫಿಫಾ ಫುಟ್ಬಾಲ್ ಭಾರತಕ್ಕೆ 142ನೇ ಸ್ಥಾನ

ದೆಹಲಿ: ಫಿಫಾ ರ್‍ಯಾಂಕಿಂಗ್ ಪಟ್ಟಿಯಲ್ಲಿ ಆರು ಸ್ಥಾನಗಳ ಹಿನ್ನಡೆ ಅನುಭವಿಸಿರುವ ಭಾರತೀಯ ಫುಟ್ಬಾಲ್ ತಂಡ ವಿಶ್ವ ಮಟ್ಟದಲ್ಲಿ 142ನೇ ಸ್ಥಾನಕ್ಕಿಳಿದಿದೆ. 2016ರ ಅಕ್ಟೋಬರ್ ಬಳಿಕ ಭಾರತದ ಕೆಟ್ಟ ಸಾಧನೆ ಇದಾಗಿದೆ, ಅಂದು 148ನೇ ಸ್ಥಾನ ಪಡೆದಿತ್ತು. 2023ರ ಡಿಸೆಂಬರ್‌ನಲ್ಲಿ 102ನೇ ಸ್ಥಾನದಲ್ಲಿದ್ದ ಭಾರತ ಆ ನಂತರ 40 ಸ್ಥಾನಗಳ ಕುಸಿತ ಕಂಡಿದೆ. 1996ರಲ್ಲಿ 94ನೇ ಸ್ಥಾನ ಪಡೆದಿರುವುದು ಭಾರತದ ಈ ವರೆಗಿನ ಶ್ರೇಷ್ಠ ಸಾಧನೆಯಾಗಿದೆ. ಏಷ್ಯಾ ರಾಷ್ಟ್ರಗಳ ಪೈಕಿ ಭಾರತ 27ನೇ ಸ್ಥಾನದಲ್ಲಿದೆ. ಏಷ್ಯಾ ಕಪ್ ಅರ್ಹತಾ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 0-1 ಗೋಲುಗಳ ಅಂತರದ ಸೋಲು ಭಾರತದ ಹೀನಾಯ ಸಾಧನೆಗೆ ಕಾರಣವಾಯಿತು. ಢಾಕಾದಲ್ಲಿ ಕೋಚ್ ಖಾಲಿದ್ ಜಮೀಲ್ ಮಾರ್ಗದರ್ಶನದಲ್ಲಿ ಬಾಂಗ್ಲಾ ವಿರುದ್ಧ ಕಣಕ್ಕಿಳಿದಿದ್ದ ಭಾರತವು ಸೋಲಿನೊಂದಿಗೆ ಮುಜುಗರಕ್ಕೀಡಾಗಿತ್ತು, ಇದು 2003ರ ಬಳಿಕ ಬಾಂಗ್ಲಾ ವಿರುದ್ಧ ಎದುರಾದ ಮೊದಲ ಸೋಲಾಗಿದೆ. ಕಳೆದ ತಿಂಗಳು ಗೋವಾದಲ್ಲಿ ಸಿಂಗಾಪುರ ವಿರುದ್ಧವೂ ಸೋಲನುಭವಿಸಿದ್ದ ಭಾರತ ತಂಡವು ಈಗಾಗಲೇ ಏಷ್ಯಾ ಕಪ್ ಟೂರ್ನಿಯಿಂದ ಹೊರ ಬಿದ್ದಿದೆ.

ಗುವಾಹಟಿ ಟೆಸ್ಟ್: ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಕ್ಕೆ ಗೆಲುವು ಅನಿವಾರ್ಯ

ಭಾರತಕ್ಕೆ 2ನೇ ಟೆಸ್ಟ್ ಮಹತ್ವ ನಿರ್ಣಾಯಕ

ಗುವಾಹಟಿ: ಶನಿವಾರದಿಂದ ಇಲ್ಲಿ ಆರಂಭವಾಗಲಿರುವ ಭಾರತ-ದಕ್ಷಿಣ ಆಫ್ರಿಕಾ ನಡುವಿನ ಎರಡನೇ ಮತ್ತು ಅಂತಿಮ ಟೆಸ್ಟ್ ಪಂದ್ಯ 2025-27 ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (ಡಬ್ಲ್ಯುಟಿಸಿ) ಫೈನಲ್ ಪ್ರವೇಶದ ದೃಷ್ಟಿಯಲ್ಲಿ ಭಾರತದ ಮಟ್ಟಿಗೆ ಭಾರೀ ಮಹತ್ವ ಪಡೆದುಕೊಂಡಿದೆ.

ಈಗಾಗಲೇ ಹರಿಣಗಳ ವಿರುದ್ಧ ಕೋಲ್ಕತ್ತಾದಲ್ಲಿ ಮೊದಲ ಟೆಸ್ಟ್‌ನಲ್ಲಿ ಸೋಲನ್ನು ಕಂಡಿರುವ ಟೀಮ್ ಇಂಡಿಯಾಕ್ಕೆ ಮುಂದಿನ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಹಾದಿ ಕಠಿಣವಾಗಿದೆ. ಈ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಋತುವಿನಲ್ಲಿ, ಟೀಮ್ ಇಂಡಿಯಾ ಈಗಾಗಲೇ ಆಡಿರುವ 8 ಟೆಸ್ಟ್ ಪಂದ್ಯಗಳಲ್ಲಿ ಕೇವಲ 4 ಪಂದ್ಯಗಳನ್ನಷ್ಟೇ ಗೆದ್ದುಕೊಂಡಿದ್ದು, ಮೂರು ಪಂದ್ಯಗಳನ್ನು ಸೋತಿದೆ, ಒಂದು ಪಂದ್ಯವನ್ನು ಮಾತ್ರ ಡ್ರಾ ಮಾಡಿಕೊಂಡಿದೆ.

ಇದೀಗ ಭಾರತ 2027ರಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ತಲುಪಬೇಕು ಎಂದರೆ ಭಾರತದ ಮುಂದೆ ಕಠಿಣ ಸವಾಲಿದೆ. ಪ್ರಸ್ತುತ ಟೀಮ್ ಇಂಡಿಯಾ 54 ಶೇಕಡಾವಾರು ಅಂಕಗಳನ್ನು ಹೊಂದಿದೆ. ಅರ್ಹತಾ ಮಿತಿ ಸಾಮಾನ್ಯವಾಗಿ 64ರಿಂದ 68 ಪ್ರತಿಶತದ ನಡುವೆ ಇರುತ್ತದೆ, ಹಾಗಾಗಿ ಭಾರತವು ಮೊದಲ ಎರಡು ಸ್ಥಾನಗಳನ್ನು ತಲುಪಲು ಇನ್ನು ಉಳಿದಿರುವ ಹೆಚ್ಚಿನ ಪಂದ್ಯಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ಹೊಂದಿದೆ. ಒಂದು ವೇಳೆ ತನ್ನ ಸವಾಲಿನಲ್ಲಿ ಎಡವಿದರೆ ಈ ಬಾರಿ ಹಿನ್ನಡೆ ಎದುರಿಸಬೇಕಾಗುತ್ತದೆ. ಒಂದು ವೇಳೆ ಭಾರತ ಇನ್ನು ಉಳಿದಿರುವ ಎಲ್ಲಾ 10 ಟೆಸ್ಟ್ ಪಂದ್ಯಗಳನ್ನು ಗೆದ್ದರೆ ಒಟ್ಟು ಅಂಕಗಳು 120ಕ್ಕೆ ತಲುಪಲಿದೆ, ಜತೆಗೆ ಶೇಕಡಾವಾರು ಅಂಕ 79.63% ಆಗಲಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ನೇರ ಅರ್ಹತೆ ಪಡೆಯಲು ಭಾರತವು ಉಳಿದ 10 ಪಂದ್ಯಗಳಲ್ಲಿ ಕನಿಷ್ಠ 8 ಪಂದ್ಯಗಳನ್ನು ಗೆಲ್ಲಲೇ ಬೇಕು. ಇದುವರೆಗಿನ ಮೂರು ಐಸಿಸಿ ಡಬ್ಲ್ಯುಟಿಸಿ ಫೈನಲ್ ಪಂದ್ಯಗಳಲ್ಲಿ ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಗೆಲುವು ಸಾಧಿಸಿವೆ.

ಪಂತ್ ದಾಖಲೆ ಸಾಧ್ಯತೆ: 2ನೇ ಟೆಸ್ಟ್ ಪಂದ್ಯದಲ್ಲಿ ರಿಷಭ್ ಪಂತ್ ಇನ್ನೂ 84 ರನ್ ಗಳಿಸಿ ಇತಿಹಾಸ ಸೃಷ್ಟಿಸಲು ಸಜ್ಜಾಗಿದ್ದಾರೆ. ಈ ಮೂಲಕ ರಿಷಭ್ ಪಂತ್ ಅವರು ಶುಭಮನ್ ಗಿಲ್ ಅವರನ್ನು ಹಿಂದಿಕ್ಕಿ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಇತಿಹಾಸದಲ್ಲಿ ಭಾರತದ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಲಿದ್ದಾರೆ. ಪಂತ್ ಭಾರತದ ಪರ 39 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಈ ಅವಧಿಯಲ್ಲಿ 69 ಇನ್ನಿಂಗ್ಸ್‌ಗಳಲ್ಲಿ 42.46 ಸರಾಸರಿಯಲ್ಲಿ 2760 ರನ್ ಗಳಿಸಿದ್ದಾರೆ. 6 ಶತಕ ಮತ್ತು 16 ಅರ್ಧಶತಕಗಳನ್ನು ಬಾರಿಸಿರುವ ಅವರ ಅತ್ಯಧಿಕ ಸ್ಕೋರ್ ರನ್‌ಗಳಾಗಿವೆ.

- **ಡಬ್ಲ್ಯುಟಿಸಿ: 2019-2021**
  ನ್ಯೂಜಿಲೆಂಡ್ (ಚಾಂಪಿಯನ್)
  ಭಾರತ (ರನ್ನರ್ ಅಪ್)
- **ಡಬ್ಲ್ಯುಟಿಸಿ: 2021-2023**
  ಆಸ್ಟ್ರೇಲಿಯಾ (ಚಾಂಪಿಯನ್)
  ಭಾರತ (ರನ್ನರ್ ಅಪ್)
- **ಡಬ್ಲ್ಯುಟಿಸಿ: 2023-2025**
  ದಕ್ಷಿಣ ಆಫ್ರಿಕಾ (ಚಾಂಪಿಯನ್)
  ಆಸ್ಟ್ರೇಲಿಯಾ (ರನ್ನರ್ ಅಪ್)

ಇದೇ 26ರಿಂದ ಅಹಮದಾಬಾದಿನಲ್ಲಿ ಟೂರ್ನಿಯ ಎಲೈಟ್-ಡಿ ಗುಂಪಿನ ಪಂದ್ಯ

ಸೈಯದ್ ಮುಸ್ತಾಕ್ ಅಲಿ ಟ್ರೋಫಿ: ರಾಜ್ಯ ತಂಡದಲ್ಲಿ ಪಡಿಕ್ಕಲ್, ಕರುಣ್

ಬೆಂಗಳೂರು: ಅನುಭವಿ ಆಟಗಾರರಾದ ದೇವದತ್ತ ಪಡಿಕ್ಕಲ್ ಮತ್ತು ಕರುಣ್ ನಾಯರ್ ಅವರನ್ನು ಸೈಯದ್ ಮುಸ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಅಹಮದಾಬಾದಿನಲ್ಲಿ ಇದೇ 26ರಿಂದ ಟೂರ್ನಿಯ ಎಲೈಟ್-ಡಿ ಗುಂಪಿನ ಪಂದ್ಯಗಳು ನಡೆಯಲಿವೆ. ಉತ್ತರಾಖಂಡ, ರಾಜಸ್ಥಾನ, ತಮಿಳುನಾಡು, ದೆಹಲಿ, ಸೌರಾಷ್ಟ್ರ ಮತ್ತು ತ್ರಿಪುರ ತಂಡಗಳು ಈ ಗುಂಪಿನಲ್ಲಿವೆ. ಟೂರ್ನಿಯಲ್ಲಿ ಕರ್ನಾಟಕವು ತನ್ನ ಮೊದಲ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಆಡಲಿದೆ.

ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಆಡುತ್ತಿರುವ ಭಾರತ ತಂಡದಲ್ಲಿ ದೇವದತ್ತ ಇದ್ದಾರೆ. ಕರುಣ್ ಅವರು ರಣಜಿ ಟ್ರೋಫಿ ಟೂರ್ನಿಯ ಮೊದಲ ಹಂತದ ಐದು ಪಂದ್ಯಗಳಲ್ಲಿ ಒಟ್ಟು 602 ರನ್ ಪೇರಿಸಿದ್ದು, 100.33 ಸರಾಸರಿಯಲ್ಲಿ ಅವರು ರನ್ ಗಳಿಸಿದ್ದಾರೆ. ಅದರಲ್ಲಿ ಒಟ್ಟು ಎರಡು ಶತಕಗಳೂ ಇವೆ. ಟಿ20 ತಂಡವನ್ನೂ ಮಯಂಕ್ ಅಗರವಾಲ್ ಮುನ್ನಡೆಸುವರು.

ಕರ್ನಾಟಕ ತಂಡ

ಮಯಂಕ್ ಅಗರ್ವಾಲ್ (ನಾಯಕ), ಮೆಕ್ನಿಲ್ ನೊರೋನಾ, ಕೆ.ಎಲ್. ಶ್ರೀಜಿತ್, ಕರುಣ್ ನಾಯರ್, ಆರ್. ಸ್ಮರಣ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ಶಿಖರ್ ಶೆಟ್ಟಿ, ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ, ಶ್ರೀವತ್ಸ ಆಚಾರ್ಯ, ಶುಭಾಂಗ್ ಹೆಗ್ಡೆ, ಪ್ರವೀಣ ದುಬೆ, ಬಿ.ಆರ್. ಶರತ್, ದೇವದತ್ತ ಪಡಿಕ್ಕಲ್.

4 ದಿನ ರಾಜಧಾನಿಯಲ್ಲಿ ನಡೆಯಲಿರುವ ಟೂರ್ನಿ

ಡಿ.17ರಿಂದ ವಿಶ್ವ ಟೆನಿಸ್ ಲೀಗ್

ಬೆಂಗಳೂರು: ಮೂರು ಋತುಗಳು ಯುಎಇಯಲ್ಲಿ ಪ್ರೇಕ್ಷಕರನ್ನು ರಂಜಿಸಿದ ನಂತರ, ಐಕಾನಿಕ್ ಸ್ಪೋರ್ಟ್ಸ್ ಆ್ಯಂಡ್ ಈವೆಂಟ್ ಲಿಮಿಟೆಡ್ ನಿರ್ವಹಿಸುವ ವರ್ಲ್ಡ್ ಟೆನಿಸ್ ಲೀಗ್ (ಡಬ್ಲ್ಯುಟಿಎಲ್) ಮುಂದಿನ ತಿಂಗಳು ಭಾರತದಲ್ಲಿ ಮೊದಲ ಬಾರಿ ನಡೆಯಲಿದೆ. ಡಿಸೆಂಬರ್ 17ರಿಂದ 20ರ ವರೆಗೆ ನಡೆಯಲಿರುವ ನಾಲ್ಕು ದಿನಗಳ ಟೂರ್ನಿಗೆ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಸೋಸಿಯೇಶನ್‌ನ ಎಸ್.ಎಂ.ಕೃಷ್ಣ ಟೆನಿಸ್ ಸ್ಟೇಡಿಯಂ ಸಿದ್ಧವಾಗಿದೆ.

ಈ ಆವೃತ್ತಿಯು ಡಬ್ಲ್ಯುಟಿಎಲ್‌ನಲ್ಲಿ ವಿಶ್ವದ ಖ್ಯಾತ ಟೆನಿಸ್ ಆಟಗಾರರಾದ ಡೇನಿಯಲ್ ಮೆಡ್ವೆಡೆವ್, ನಿಕ್ ಕಿರ್ಗಿಯೋಸ್, ಎಲೆನಾ ರೈಬಾಕಿನಾ, ಪೌಲಾ ಬಡೋಸಾ, ರೋಹನ್ ಬೋಪಣ್ಣ, ಗೇಲ್ ಮಾನ್ಫಿಲ್ಸ್, ಆರ್ಥರ್ ಫಿಲ್ಸ್, ಸುಮಿತ್ ನಗಲ್, ಮ್ಯಾಗ್ಡಾ ಲಿನೆಟ್ ಮತ್ತು ಮಾರ್ಟಾ ಕೋಸ್ಟ್ಯುಕ್ ಸೇರಿದಂತೆ ಪ್ರಬಲ ಆಟಗಾರರ ತಂಡವನ್ನು ಒಳಗೊಂಡಿದೆ. ದೇಶದಲ್ಲಿ ಟೆನಿಸ್ ಹೆಚ್ಚುತ್ತಿರುವಂತೆ ಡಬ್ಲ್ಯುಟಿಎಲ್ ಭಾರತದ ಅತ್ಯುತ್ತಮ ಪ್ರದರ್ಶನಕಾರರಾದ ಯೂಕಿ ಭಾಂಬ್ರಿ, ಅಂಕಿತಾ ರೈನಾ, ಶ್ರೀವಲ್ಲಿ ಭಾಮಿಡಿಪತಿ, ಮಾಯಾ ರೇವತಿ, ದಕ್ಷಿಣೇಶ್ವರ ಸುರೇಶ್ ಮತ್ತು ಶಿವಿಕಾ ಬರ್ಮನ್ ಅವರನ್ನೂ ಕೂಡ ಸೇರಿಸಿಕೊಂಡಿದೆ.

ಮೊದಲ ಬಾರಿ ಭಾರತಕ್ಕೆ ಬರುತ್ತಿರುವ ಬಗ್ಗೆ ಮಾತನಾಡಿದ ವರ್ಲ್ಡ್ ನಂ. 5 ಎಲೆನಾ ರೈಬಕಿನಾ, :ಭಾರತದ ಟೆನಿಸ್ ಸಂಸ್ಕೃತಿಯ ಬಗ್ಗೆ ನಾನು ಬಹಳಷ್ಟು ಕೇಳಿದ್ದೇನೆ. ಡಬ್ಲ್ಯುಟಿಎಲ್ ಮೂಲಕ ಇಲ್ಲಿ ನನ್ನ ಪ್ರವೇಶವಾಗುತ್ತಿರುವುದು ತುಂಬಾ ಸಂತಸ. ಈ ಲೀಗ್‌ನ ವಿನೂತನ ಸ್ವರೂಪ ಬಹಳ ರೋಚಕವಾಗಿದ್ದು, ನನ್ನ ತಂಡದೊಂದಿಗೆ ಕೋರ್ಟ್‌ನಲ್ಲಿ ಪ್ರತಿಯೊಂದು ಕ್ಷಣವನ್ನು ಆನಂದಿಸಲು ನಾನು ಎದುರು ನೋಡುತ್ತೇನೆ' ಎಂದಿದ್ದಾರೆ.

ಬಾಂಗ್ಲಾದ ಮುಷ್ಫಿಕರ್ ರಹೀಮ್ ಶತಕ ದಾಖಲೆ

ಢಾಕಾ: ಇಲ್ಲಿನ ನ್ಯಾಷನಲ್ ಸ್ಟೇಡಿಯಂನಲ್ಲಿ ಐರ್ಲೆಂಡ್ ವಿರುದ್ಧ ನಡೆಯುತ್ತಿರುವ 2ನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಬಾಂಗ್ಲಾದೇಶದ ಬ್ಯಾಟರ್ ಮುಷ್ಫಿಕರ್ ರಹೀಮ್ ಇತಿಹಾಸ ನಿರ್ಮಿಸಿದ್ದಾರೆ. ಅವರು ತನ್ನ 100ನೇ ಟೆಸ್ಟ್‌ನಲ್ಲಿ ಶತಕ ಸಿಡಿಸುತ್ತಿದ್ದಂತೆ ಈ ಸಾಧನೆ ಮಾಡಿದ 11ನೇ ಆಟಗಾರ ಎನಿಸಿಕೊಂಡರು.

ಈ ಹಿಂದೆ ಇಂಗ್ಲೆಂಡ್‌ನ ಕಾಲಿನ್ ಕೌಡ್ರೆ, ಪಾಕಿಸ್ತಾನದ ಜಾವೇದ್ ಮಿಯಾಂದಾದ್, ವೆಸ್ಟ್ ಇಂಡೀಸ್‌ನ ಗೋರ್ಡನ್ ಗ್ರೀನಿಡ್ಜ್, ಇಂಗ್ಲೆಂಡ್‌ನ ಅಲೆಕ್ ಸ್ಟೀವರ್ಟ್, ಪಾಕಿಸ್ತಾನದ ಇಂಜಮಮ್ ಉಲ್ ಹಕ್, ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್, ದ.ಆಫ್ರಿಕಾದ ಗ್ರೇಮ್ ಸ್ಮಿತ್ ಮತ್ತು ಹಾಶಿಮ್ ಆಮ್ಲಾ, ಇಂಗ್ಲೆಂಡ್‌ನ ಜೋ ರೂಟ್ ಮತ್ತು ಆಸ್ಟ್ರೇಲಿಯಾದ ಡೇವಿಡ್ ವಾರ್ನರ್‌ರಂತಹ ಖ್ಯಾತ ಬ್ಯಾಟರ್‌ಗಳು ಈ ಸಾಧನೆ ಮಾಡಿದ್ದರು. ಟೆಸ್ಟ್ ಪಂದ್ಯದ ಮೊದಲ ದಿನದಂದು 99 ರನ್ ಗಳಿಸಿ ಅಜೇಯರಾಗಿ ಹಿಂದಿರುಗಿದ ಮುಷ್ಫಿಕರ್ ರಹೀಮ್, ಎರಡನೇ ದಿನವಾದ ಗುರುವಾರ ಒಂದು ರನ್ ಗಳಿಸುವ ಮೂಲಕ ಈ ಸಾಧನೆ ಮಾಡಿದರು. ಆದರೆ ಮುಷ್ಫಿಕರ್ ಶತಕದ ಬಳಿಕ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲದೇ 106 ರನ್ ಗಳಿಸಿ ನಿರ್ಗಮಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ತಂಡವು ಮುಷ್ಫಿಕರ್ ರಹೀಮ್ ಮತ್ತು ಲಿಟನ್ ದಾಸ್ ಅವರ ಶತಕಗಳ ನೆರವಿನಿಂದ ಮೊದಲ ಇನ್ನಿಂಗ್ಸ್‌ನಲ್ಲಿ 476 ರನ್‌ಗಳಿಗೆ ಆಲೌಟ್ ಆಯಿತು. ಲಿಟನ್ ದಾಸ್ 8 ಬೌಂಡರಿ ಮತ್ತು 4 ಸಿಕ್ಸರ್‌ಗಳೊಂದಿಗೆ 128 ರನ್ ಗಳಿಸಿ ಅಗ್ರ ಸ್ಕೋರರ್ ಎನಿಸಿಕೊಂಡರೆ, ಮುಷ್ಫಿಕರ್ ರಹೀಮ್ 5 ಬೌಂಡರಿಗಳೊಂದಿಗೆ 106 ರನ್ ಗಳಿಸಿದರು. ಮೊದಲ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾ ಇನ್ನಿಂಗ್ಸ್ ಮತ್ತು 47 ರನ್‌ಗಳಿಂದ ಗೆದ್ದು ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ.

ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

8ರ ಘಟ್ಟಕ್ಕೆ ಶೆಟ್ಟಿ, ಲಕ್ಷ್ಯ

ಸಿಡ್ನಿ: ಯುವತಾರೆ ಆಯುಷ್ ಶೆಟ್ಟಿ ಮತ್ತು ಅನುಭವಿ ಲಕ್ಷ್ಯ ಸೇನ್ ಅವರು ಆಸ್ಟ್ರೇಲಿಯಾ ಓಪನ್ ಸೂಪರ್-500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ವಿಭಿನ್ನ ರೀತಿಯಲ್ಲಿ ಜಯಗಳಿಸಿ ಎಂಟರ ಘಟ್ಟ ತಲುಪಿ ಕ್ವಾರ್ಟರ್ ಫೈನಲ್ ಮುಖಾಮುಖಿಗೆ ಸಜ್ಜಾದರು.

ಈ ವರ್ಷದ ಆರಂಭದಲ್ಲಿ ಅಮೆರಿಕ ಓಪನ್ ಸೂಪರ್-300 ಟೂರ್ನಿಯ ವಿಜೇತರಾಗಿದ್ದ ಆಯುಷ್ 21-17, 21-16 ರಿಂದ ನಾಲ್ಕನೇ ಶ್ರೇಯಾಂಕದ ಕೊಡೈ ನರವೋಕಾ ಅವರನ್ನು ಸೋಲಿಸಿ ದರು. ಈ ಪಂದ್ಯ 68 ನಿಮಿಷಗಳ ವರೆಗೆ ನಡೆಯಿತು. 20 ವರ್ಷ ವಯಸ್ಸಿನ ಆಯುಷ್ ಶೆಟ್ಟಿ ಅವರಿಗೆ ಇದು ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ಜಪಾನ್ ಆಟಗಾರ ವಿರುದ್ಧ ಈ ವರ್ಷದ ಎರಡನೇ ಗೆಲುವಾಗಿದೆ.

ಏಳನೇ ಶ್ರೇಯಾಂಕದ ಲಕ್ಷ್ಯ ಸೇನ್ ಮತ್ತೊಂದು ಪಂದ್ಯದಲ್ಲಿ ಮೂರು ಗೇಮ್‌ಗಳನ್ನು ಕಂಡ 63 ನಿಮಿಷಗಳ ಪಂದ್ಯದಲ್ಲಿ ತೈವಾನ್‌ನ ಚಿ ಯು ಜೆನ್ ಅವರನ್ನು 21-17, 13-21, 21-13ರಿಂದ ಸೋಲಿಸಿದರು. ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರೂ ಸಹ ಎಂಟರ ಘಟ್ಟ ತಲುಪಿದರು. ಈ ಜೋಡಿ 21-18, 21-11ರಿಂದ ತೈವಾನ್‌ನ ಸು ಚಿಂಗ್ ಹೆಂಗ್-ವು ಗುವಾನ್ ಜೋಡಿ ಯನ್ನು 37 ನಿಮಿಷಗಳಲ್ಲಿ ಮಣಿಸಿತು. ಸಾತ್ವಿಕ್-ಚಿರಾಗ್ ಅವರು ಮುಂದಿನ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಫಜರ್ ಅಗ್ನಿಯಾನ್-ಮುಹಮ್ಮದ್ ಶೂಯಿಬುಲ್ ಫಿಕ್ರಿ (ಇಂಡೊನೇಷ್ಯಾ) ಜೋಡಿಯನ್ನು ಎದುರಿಸಲಿದೆ.

ದಶಾವತಾರಕ್ಕೆ ನಿತೀಶ್ ರೆಡಿ

← ಮೊದಲಪುಟದಿಂದ ಇನ್ನು ನಿತೀಶ್ ಹಿಂದಿನ ಸರಕಾರ ದಲ್ಲಿ ಮಂತ್ರಿಯಾಗಿದ್ದ ಜಮಾ ಖಾನ್ ಮತ್ತೆ ಸಚಿವರಾಗಿದ್ದಾರೆ. ನಿತೀಶ್ ಸಂಪುಟದಲ್ಲಿ ಮೂವರು ಮಹಿಳಾ ಸಚಿವರಿದ್ದಾರೆ. ಮಾಜಿ ಸಚಿವೆ ಲೇಶಿ ಸಿಂಗ್‌ಗೆ ಮತ್ತೆ ಅವಕಾಶ ಸಿಕ್ಕಿದೆ. ಮೊದಲ ಬಾರಿಗೆ ಶ್ರೇಯಸಿ ಸಿಂಗ್ ಸ್ಥಾನ ಪಡೆದಿದ್ದರೆ, ಮೊದಲ ಬಾರಿ ಶಾಸಕಿಯಾಗಿರುವ ರಮಾ ನಿಶಾದ್ ಕೂಡ ಮಂತ್ರಿಯಾಗುವ ಭಾಗ್ಯ ಪಡೆದಿದ್ದಾರೆ.

ಬಿಹಾರ ಚುನಾವಣೆಯಲ್ಲಿ 202 ಸ್ಥಾನಗಳನ್ನು ಗೆದ್ದು ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬಂದಿತ್ತು. ಬಿಜೆಪಿ 89, ಜೆಡಿ(ಯು) 85, ಎಲ್‌ಜೆಪಿ 19, ಎಚ್‌ಎಎಂ 5 ಮತ್ತು ಆರ್‌ಎಲ್‌ಎಂ 4 ಸ್ಥಾನ ಗಳನ್ನು ಗಳಿಸಿತು. 2000ದ ಚುನಾವಣೆಯ ನಂತರ ನಿತೀಶ್ ಕುಮಾರ್ ಮೊದಲು ಬಿಹಾರದ ಮುಖ್ಯಮಂತ್ರಿಯಾದರು. ಆದರೆ ಆ ಸರ್ಕಾರ ನಂತರ ಪತನಗೊಂಡಿತು. 2005ರಲ್ಲಿ, ನಿತೀಶ್ ಬಹುಮತದೊಂದಿಗೆ ಎರಡನೇ ಬಾರಿಗೆ ಎನ್‌ಡಿಎ ಸರ್ಕಾರದ ಮುಖ್ಯಸ್ಥರಾದರು. ಅವರು ಸತತ ಎಂಟು ವರ್ಷಗಳಿಗೂ ಹೆಚ್ಚು ಕಾಲ ಮುಖ್ಯ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

ಪುನಾರಚನೆಗೆ ಬ್ರೇಕ್, ನಿಲ್ಲದ ದೆಹಲಿ ಪೆರೇಡ್

← ಮೊದಲಪುಟದಿಂದ ಜನ ಸಮುದಾಯಕ್ಕೆ ನಾವು ನೀಡಿದ್ದ ಅರ್ಧಕ್ಕಿಂತಲೂ ಹೆಚ್ಚಿನ ಭರವಸೆಗಳನ್ನು ಈಡೇರಿಸಿದ್ದೇವೆ. ಗ್ಯಾರಂಟಿ ಹಾಗೂ ಕೆಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವ ಸಮಾಧಾನ ಇದೆ. ಸಚಿವ ಸಂಪುಟ ಪುನಾರಚನೆ ಕುರಿತಂತೆ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಕಾಂಗ್ರೆಸ್‌ನಲ್ಲಿ ಸಂಪುಟ ಪುನಾರಚನೆ ಸೇರಿದಂತೆ ಯಾವುದೇ ತೀರ್ಮಾನಗಳನ್ನಾದರೂ ಹೈಕಮಾಂಡ್ ತೆಗೆದುಕೊಳ್ಳಬೇಕಿದೆ. ಮುಖ್ಯಮಂತ್ರಿ ಬದಲಾವಣೆಯ ಬಗ್ಗೆ ಹೈಕಮಾಂಡ್ ನಾಯಕರು ಏನನ್ನೂ ಹೇಳಿಲ್ಲ. ನಮ್ಮಷ್ಟಕ್ಕೆ ನಾವೇ ಏನೋ ಹೇಳಿಕೊಂಡು ಹೋದರೆ ಅದಕ್ಕೆ ಮಹತ್ವ ಇಲ್ಲ. ನಾಯಕತ್ವ ಬದಲಾವಣೆ ಬಗ್ಗೆ ವರಿಷ್ಠರು ಹೇಳದ ಹೊರತು ಯಾವುದೇ ಚರ್ಚೆಗಳು ಅಪ್ರಸ್ತುತ ಎಂದರು.

> ಸರಕಾರದಲ್ಲಿ ಯಾವುದೇ ಗೊಂದಲಗಳಿಲ್ಲ. ಸರಕಾರ ಯಶಸ್ವಿಯಾಗಿ ಎರಡುವರೆ ವರ್ಷ ಪೂರೈಸಿದೆ. ನಾಯಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಗೊಂದಲಗಳಿಲ್ಲ. ನಾವು ಅಭಿವೃದ್ಧಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ನಮ್ಮ ಸರಕಾರ ಮುಂದಿನ ಎರಡೂವರೆ ವರ್ಷ ಸಂಪೂರ್ಣ ಮಾಡುತ್ತೆ. ಈ ವಿಷಯದಲ್ಲಿ ಅನಗತ್ಯ ಗೊಂದಲ ಬೇಡ.
>
> – ಎಚ್.ಸಿ. ಮಹದೇವಪ್ಪ, ಸಚಿವ

> ಸಿದ್ದರಾಮಯ್ಯ ಪಕ್ಷದ ಶಾಸಕರ ಬೆಂಬಲದಿಂದ ಆಡಳಿತ ನಡೆಸುತ್ತಿದ್ದಾರೆ. ಅವರು ಕೊಟ್ಟ ಮಾತಿಗೆ ತಪ್ಪಿಲ್ಲ. ಹಿಂದಿನ ಸರಕಾರದಲ್ಲಿ ಮಾತಿನ ಪ್ರಕಾರವೇ ನಡೆದಿದ್ದಾರೆ. ಈಗಿನ ಸರಕಾರದಲ್ಲಿಯೂ ಮಾತಿನಂತೆ ನಡೆದುಕೊಳ್ಳುತ್ತಿದ್ದಾರೆ. ಮುಂದೆಯೂ ಅದೇ ಪ್ರಕಾರ ನಡೆದುಕೊಳ್ಳುತ್ತಾರೆ. ನನ್ನಣ್ಣನಿಗೆ (ಡಿಕೆಶಿ) ಅದೃಷ್ಟವಿದ್ದರೆ ಮುಖ್ಯಮಂತ್ರಿ ಆಗುತ್ತಾನೆ.
>
> – ಡಿ.ಕೆ.ಸುರೇಶ್, ಬಮೂಲ್ ಅಧ್ಯಕ್ಷ

ಜೆಡಿಎಸ್‌ಗೆ ಬೆಳ್ಳಿಹಬ್ಬ

← ಮೊದಲಪುಟದಿಂದ ಈ ಕಾರ್ಯಕ್ರಮ ಪಕ್ಷದ ರಾಜ್ಯ ಕಚೇರಿ ಜೆ.ಪಿ ಭವನದಲ್ಲಿ ಸಂಜೆ ನಾಲ್ಕು ಗಂಟೆಗೆ ಧ್ವಜಾ ರೋಹಣ ನಡೆಸಲಾಗುವುದು. ಇದರಲ್ಲಿ ಸುಮಾರು 400 ಮಂದಿ ಭಾಗವಹಿಸುವ ಸಾಧ್ಯತೆಯಿದೆ. ನಂತರ ಸಂಜೆ 5 ಗಂಟೆಗೆ ಪಕ್ಷದ ರಜತ ಮಹೋ ತ್ಸವ ಆಚರಣೆ ಅಂಗವಾಗಿ ಪಕ್ಷ ನಡೆದು ಬಂದ ದಾರಿ ಹಾಗೂ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಸಾಧನೆ ಕುರಿತು ಪ್ರದರ್ಶನ ನಡೆಸಿ, ಉದ್ಘಾಟನೆ ನಡೆಸಲಾಗುತ್ತದೆ. ಸಂಜೆ 6:30ಕ್ಕೆ ಪಕ್ಷದ ರಾಜ್ಯ ಪರಿಷತ್, ರಾಷ್ಟ್ರೀಯ ಪರಿಷತ್ ವಿವಿಧ ರಾಜ್ಯಗಳಿಂದ ಬಂದಿರುವ ಪ್ರತಿನಿಧಿಗಳ ಜತೆ ದೇವೇಗೌಡರು ಹಾಗೂ ಕೇಂದ್ರ ಸಚಿವರಾದ ಎಚ್.ಡಿ.ಕುಮಾರ ಸ್ವಾಮಿ ಅವರ ನೇತೃತ್ವದಲ್ಲಿ ಸಭೆ ಏರ್ಪಡಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಈ ಸಭೆಯಲ್ಲಿ ಸಭೆಯಲ್ಲಿ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ ಕುಮಾರಸ್ವಾಮಿ, ಕೋರ್ ಕಮಿಟಿ ಸದಸ್ಯರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು ಭಾಗಿಯಾಗುತ್ತಾರೆ. ಈ ಸಭೆಯಲ್ಲಿ, ಮುಂದಿನ ದಿನದಲ್ಲಿ ಪಕ್ಷವನ್ನು ರೀತಿ ತೆಗೆದುಕೊಂಡು ಹೋಗಬೇಕು? ಮುಂದಿರುವ ಸವಾಲುಗಳಿಗೆ ಸಂಬಂಧಿಸಿದಂತೆ ಚರ್ಚೆಯಾಗುವ ಸಾಧ್ಯತೆಯಿದೆ.

ರಾಷ್ಟ್ರಪತಿ, ರಾಜ್ಯಪಾಲಗೆ ಗಡುವು ನಿಗದಿ ಮಾಡಲಾಗದು: ಸುಪ್ರೀಂ

← ಮೊದಲಪುಟದಿಂದ ಆದರೇ, ಏಕಪಕ್ಷೀಯವಾಗಿ ಮಸೂದೆಗಳಿಗೆ ಒಪ್ಪಿಗೆ ನೀಡದೇ ತಡೆ ಹಿಡಿಯುವುದು ಒಕ್ಕೂಟ ವ್ಯವಸ್ಥೆಯ ಉಲ್ಲಂಘನೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್, ರಾಜ್ಯಪಾಲರನ್ನು ಎಚ್ಚರಿಸಿದೆ. ಸುಪ್ರೀಂ ಕೋರ್ಟ್ ಕಾನೂನು ರೂಪಿಸುವ ಶಾಸಕಾಂಗದ ಜವಾಬ್ದಾರಿಯನ್ನು ನಿರ್ವಹಿಸಲಾಗಲ್ಲ. ಆದರೆ ಯಾವುದೇ ವಿವರಣೆ ನೀಡದೇ ಅನಿರ್ದಿಷ್ಟಾವಧಿ ವಿಳಂಬದ ಸಂದರ್ಭದಲ್ಲಿ ನ್ಯಾಯಾಂಗವು ಮಧ್ಯಪ್ರವೇಶ ಮಾಡಬಹುದು ಎಂದು ಸುಪ್ರೀಂ ಕೋರ್ಟ್ ಇಂದಿನ ತೀರ್ಪಿನಲ್ಲಿ ಹೇಳಿದೆ. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹಿರಿಯ ವಕೀಲ ಕಪಿಲ್ ಸಿಬಲ್ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದ್ದಾರೆ.

ತೀರ್ಪಿನ ಹಿನ್ನೆಲೆಯೇನು?

← ಮೊದಲಪುಟದಿಂದ ಮಾತ್ರವಲ್ಲ ರಾಜ್ಯಪಾಲರಿಗೆ ಮಸೂದೆಗಳಿಗೆ ಸಹಿ ಹಾಕಲು ಕಾಲಮಿತಿಯನ್ನು ನಿಗದಿಪಡಿಸಿತ್ತು. ರಾಜ್ಯಪಾಲರು ಮಸೂದೆಗಳಿಗೆ ಒಪ್ಪಿಗೆ ನೀಡದೇ, ರಾಷ್ಟ್ರಪತಿಗಳಿಗೆ ಕಳಿಸಲು ಒಂದು ತಿಂಗಳು, ಮಸೂದೆ ಸಹಿಹಾಕದೇ ತಡೆ ಹಿಡಿಯಲು 3 ತಿಂಗಳು, ಸರಕಾರಗಳು ಮರಳಿ ಕಳಿಸಿದ ಮಸೂದೆಗೆ ಸಹಿ ಹಾಕಲು 1 ತಿಂಗಳು ಸಮಯಾವಕಾಶ ನೀಡಿತ್ತು. ತಮಿಳುನಾಡಿನ 10 ಮಸೂದೆಗಳಿಗೆ ಸಹಿ ಹಾಕದೇ ರಾಜ್ಯಪಾಲ ರವಿ ವಿಳಂಬ ಮಾಡಿದ ಪ್ರಕರಣದಲ್ಲಿ, ಈ ಮಸೂದೆಗಳಿಗೆ ಒಪ್ಪಿಗೆ ಸಿಕ್ಕಿದೆ ಎಂದೇ ಪರಿಗಣಿಸಬೇಕು, ಇದಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗಳ ಯಾವುದೇ ಕ್ರಮಕ್ಕೆ ಮಾನ್ಯತೆಯಿಲ್ಲ ಎಂದೇ ಹೇಳಿತ್ತು. ಇದನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಸರ್ವೋಚ್ಚ ಪೀಠದಲ್ಲಿ ವಿಧಿ 143 (1)ರಡಿ ಪ್ರಶ್ನಿಸಿ, ಈ ರೀತಿ ಕಾಲ ಮಿತಿಯನ್ನು ಹೇರಲು ಸಾಧ್ಯವೇ ಎಂದು ಅಭಿಪ್ರಾಯ ಕೇಳಿದ್ದರು. ಈ ಹಿನ್ನೆಲೆಯಲ್ಲಿ ಪಂಚ ಸದಸ್ಯರ ಸರ್ವೋಚ್ಚ ಪೀಠ ಗುರುವಾರ ತೀರ್ಪು ನೀಡಿದೆ.

ಪರಿಷೆಯಲ್ಲಿ ಈ ಬಾರಿ 4,500ಕ್ಕೂ ಹೆಚ್ಚು ಮಳಿಗೆ | ಗಮನ ಸೆಳೆಯುತ್ತಿರುವ ದೀಪಾಲಂಕಾರ

ಕಡಲೆಕಾಯಿ ಪರಿಷೆಗೆ 4 ದಿನದಲ್ಲಿ 8 ಲಕ್ಷ ಜನ ಭೇಟಿ

ಬೆಂಗಳೂರು: ನಗರದ ಬಸವನಗುಡಿಯ ಕಡಲೆಕಾಯಿ ಪರಿಷೆಯಲ್ಲಿ ಜನಜಂಗುಳಿ ಕಂಡು ಬಂದಿದ್ದು, ನಾಲ್ಕು ದಿನದಲ್ಲಿ ಎಂಟು ಲಕ್ಷಕ್ಕೂ ಅಧಿಕ ಜನ ಪರಿಷೆಗೆ ಭೇಟಿ ನೀಡಿದ್ದಾರೆ.

ಈ ಬಾರಿ ಧಾರ್ಮಿಕ ಪರಿಷತ್ ಅಧಿಕೃತವಾಗಿ ಕಡಲೆಕಾಯಿ ಪರಿಷತ್‌ನ್ನು ಆಯೋಜಿಸಿದ್ದು, ನ.17ರಿಂದ ಆರಂಭವಾಗಿದ್ದು, ಭಾರೀ ಜನರಿಂದ ತುಂಬಿ ಹೋಗಿತ್ತು. ಬಸವನಗುಡಿಯ ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನಕ್ಕೆ ಜನರು ಮುಗಿಬಿದ್ದಿದ್ದು, ಸೋಮವಾರದಿಂದ ಗುರುವಾರದವರೆಗೂ ಬಸವನಗುಡಿಯಲ್ಲಿ ಜನಜಾತ್ರೆ ಕಂಡು ಬಂದಿದೆ. ಬಸವನಗುಡಿಯಲ್ಲಿ ಸಂಜೆ ಮಾತ್ರವಲ್ಲದೆ ಬೆಳಗಿನ ಜಾವವೂ ಕಾಲಿಡಲು ಸಾಧ್ಯವಾಗದಷ್ಟು ಜನರು ಆಗಮಿಸಿ ಕಡಲೆಕಾಯಿ ಖರೀದಿ ನಡೆಸಿದರು.

ಈ ಬಾರಿ ಕಡಲೆ ಕಾಯಿ ಪರಿಷೆ ಹಿನ್ನೆಲೆಯಲ್ಲಿ ವಿಶೇಷ ದೀಪಾಲಂಕಾರ ಹಾಗೂ ಹೂವಿನ ಅಲಂಕಾರವನ್ನು ಮಾಡಲಾಗಿದ್ದು, ನಾರ್ತ್ ರೋಡ್, ಕೆ.ಆರ್. ರಸ್ತೆ, ಆಶ್ರಮ ವೃತ್ತ, ಡಿವಿಜಿ ರಸ್ತೆ, ಗಾಂಧಿ ಬಜಾರ್ ಮುಖ್ಯರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್ ರಸ್ತೆ, ಎನ್. ಆರ್. ಕಾಲೊನಿ ರಸ್ತೆಯಲ್ಲಿನ ದೀಪಾಲಂಕಾರ ವಿವಿಧ ವಯೋಮಾನದವರನ್ನೂ ಸೆಳೆಯಿತು. ಪರಿಷೆಯಲ್ಲಿ ಈ ಬಾರಿ 4,500ಕ್ಕೂ ಮಳಿಗೆಗಳಿದ್ದು, ಪ್ರತಿದಿನವೂ ಪಾಲಿಕೆ ವತಿಯಿಂದ ಸ್ವಚ್ಛತೆ ಕಾರ್ಯ ನಡೆಯುತ್ತಿದೆ. ಬೆಂಗಳೂರು ನಗರದ ನಿವಾಸಿಗಳಲ್ಲದೆ, ಬೆಂಗಳೂರು ದಕ್ಷಿಣ, ಬೆಂಗಳೂರು

800ಪೊಲೀಸರ ನಿಯೋಜನೆ: ಗ್ರಾಮಾಂತರ ಜಿಲ್ಲೆಯಿಂದಲೂ ಜನರು ಆಗಮಿಸುತ್ತಿದ್ದಾರೆ. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪ್ರತಿದಿನವೂ ಬಸವನಗುಡಿ ಪ್ರದೇಶಕ್ಕೆ ಭೇಟಿ ನೀಡಿ, ವ್ಯವಸ್ಥೆಗಳ ಮೇಲೆ ನಿಗಾವಹಿಸುತ್ತಿದ್ದಾರೆ. ಪರಿಷೆ ನಡೆಯುತ್ತಿರುವ ರಸ್ತೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭದ್ರತೆಗೆ ಆದ್ಯತೆ ನೀಡಿದ್ದು, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 800ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ.

ಸೇರು ಲೆಕ್ಕಾಚಾರದಲ್ಲಿ 50ರಿಂದ 80ರು: ರಸ್ತೆಯ ಎರಡೂ ಬದಿಯಲ್ಲಿ ಹಾಗೂ ಮಧ್ಯಭಾಗದಲ್ಲೂ ಕಡಲೆಕಾಯಿಯನ್ನು ರಾಶಿ ಹಾಕಿಕೊಂಡು ಮಾರಾಟ ಮಾಡಲಾಗುತ್ತಿದ್ದು, ಹಸಿ, ಒಣ, ಬೇಯಿಸಿದ, ಹುರಿದ ಕಡಲೆಕಾಯಿ ಸೇರು ಲೆಕ್ಕಾಚಾರದಲ್ಲಿ 50ರಿಂದ 80ರು. ರವರೆಗೂ ದರ ನಿಗದಿಯಾಗಿತ್ತು. ನಾಲ್ಕಾರು ಬಗೆಯ ಕಡಲೆಕಾಯಿಯ ಆಕರ್ಷಣೆಯ ಜತೆಗೆ ಬೇಲ್, ಬಜ್ಜಿ, ಮಸಾಲ ಹಪ್ಪಳ, ಆಲೂ ಟ್ವಿಸ್ಟರ್ ಸೇರಿದಂತೆ ವಿವಿಧ ಕರಿದ ತಿಂಡಿಗಳ ಅಂಗಡಿಗಳನ್ನೂ, ಆಟಿಕೆ, ಆಭರಣಗಳ ಅಂಗಡಿಗಳೂ ಇದ್ದವು.

ಬಸವನಗುಡಿ ಕಡಲೆಕಾಯಿ ಪರಿಷೆಗೆ ರಾತ್ರಿ ವೇಳೆ ಭೇಟಿ ನೀಡಿದ ಸಾವಿರಾರು ಜನ.

ಪ್ಲಾಸ್ಟಿಕ್ ಮುಕ್ತ ಪರಿಷೆ

'ಕಡಲೆಕಾಯಿ ಖರೀದಿಗೆ ಪ್ಲಾಸ್ಟಿಕ್ ಚೀಲ ಕೊಡುವುದಿಲ್ಲ' ಎಂದು ಮಾರಾಟಗಾರರು ಕಟ್ಟುನಿಟ್ಟಾಗಿ ಹೇಳುತ್ತಿದ್ದು, ಅಕ್ಕಪಕ್ಕದಲ್ಲಿ ಬಟ್ಟೆ ಚೀಲಗಳನ್ನೂ ಮಾರಾಟ ಮಾಡಲಾಗುತ್ತಿತ್ತು. 'ಪ್ಲಾಸ್ಟಿಕ್ ಮುಕ್ತ ಕಡಲೆಕಾಯಿ ಪರಿಷೆ' ಎಂಬ ಫಲಕಗಳೂ ಇದ್ದವು. ಕಡಲೆ ಕಾಯಿ ಖರೀದಿಸಿ ಕೊಂಡೊಯ್ಯಲು ಹಲವು ಮಂದಿ ಬಟ್ಟೆಯ ಚೀಲಗಳನ್ನು ತಂದಿದ್ದರು. ಬಸವನಗುಡಿಯ ಪರಿಷೆ ಯಲ್ಲಿ ಕಡಲೆಕಾಯಿ ಮಾರಾಟದ ವಹಿವಾಟು ಒಂದು ಕೋಟಿಗೂ ಹೆಚ್ಚಾಗಿದೆ ಎನ್ನಲಾಗಿದೆ. ಕಳೆದ ವರ್ಷಕ್ಕಿಂತ ದುಪ್ಪಟ್ಟು ಪ್ರಮಾ ಣದಲ್ಲಿ ಮಳಿಗೆಗಳಿದ್ದು ವ್ಯಾಪಾರವೂ ಚೆನ್ನಾಗಿ ಆಗಿದೆ. ಮಳಿಗೆಗೆ ಶುಲ್ಕ ಇಲ್ಲದ್ದರಿಂದ ಶುಕ್ರವಾರದಿಂದಲೇ ಸಾಕಷ್ಟು ಮಂದಿ ಮಳಿಗೆ ಪ್ರಾರಂಭಿಸಿದ್ದರು. ಕೋಲಾರ ಚಿಕ್ಕಬಳ್ಳಾಪುರ ತುಮಕೂರು ರಾಮನಗರ ಜಿಲ್ಲೆ ಸೇರಿದಂತೆ ತಮಿಳುನಾಡು ಆಂಧ್ರಪ್ರದೇ ಶದಿಂದ ಕಡಲೆಕಾಯಿ ತಂದು ಇಲ್ಲಿ ಮಾರಾಟ ಮಾಡಲಾಗುತ್ತಿದೆ.



ಬ್ಯಾಂಕ್ ದರೋಡೆ: ಇಬ್ಬರ ಸೆರೆ

← ಮೊದಲಪುಟದಿಂದ ನಾಲ್ವರ ಮೊಬೈಲ್ ವಶಕ್ಕೆ ಪಡೆದುಕೊಂಡಿರುವ ಪೊಲೀಸರು ಕರೆ ವಿವರ, ವಾಟ್ಸಾಪ್ ಸಂದೇಶಗಳ ಬಗ್ಗೆ ಪರಿಶೀಲಿಸುತ್ತಿದ್ದಾರೆ. ಇತ್ತೀಚೆಗೆ ಯಾರನ್ನು ಭೇಟಿ ಮಾಡಿದ್ದರು ಎಂಬುದರ ಬಗ್ಗೆ ಸಂಪೂರ್ಣ ವಿವರವನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ. ಪ್ರಕರಣ ಸಂಬಂಧ ಇದುವರೆಗೂ 20ಕ್ಕೂ ಹೆಚ್ಚು ಜನರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಬ್ಯಾಂಕ್ ಸಿಬ್ಬಂದಿ ಮತ್ತು ಸಿಎಂಎಸ್ ಸಿಬ್ಬಂದಿಗೆ ಡ್ರಿಲ್ ಮಾಡಲಾಗಿದ್ದು, ಘಟನೆಯ ಸಮಯ ಹೊಂದಾಣಿಕೆ ಮಾಡಿ ಪ್ರಶ್ನೆ ಕೇಳಲಾಗುತ್ತಿದೆ. ಹೀಗಿದ್ದರೂ ಆರೋಪಿಗಳ ಸುಳಿವು ಮಾತ್ರ ಪತ್ತೆಯಾಗಿಲ್ಲ. 50ಕ್ಕೂ ಹೆಚ್ಚು ಪೊಲೀಸರು ಈ ಕಾರ್ಯದಲ್ಲಿ ನಿರತರಾಗಿದ್ದಾರೆ.

> ದರೋಡೆ ಪ್ರಕರಣದಲ್ಲಿ ಸುಳಿವು ದೊರೆತಿದ್ದು, ಶೀಘ್ರವೇ ಆರೋಪಿಗಳನ್ನು ಬಂಧಿಸಲಾಗುವುದು. ಪೊಲೀಸರು ಎಲ್ಲಾ ರೀತಿಯ ಮಾಹಿತಿಗಳನ್ನು ಕಲೆಹಾಕಿದ್ದಾರೆ. ದರೋಡೆಕೋರರು ಸ್ಥಳೀಯರೇ ಅಥವಾ ಹೊರಗಿನವರೇ? ಎಂಬ ಮಾಹಿತಿ ಪರಿಶೀಲಿಸಲಾಗಿದೆ. ದುಷ್ಕರ್ಮಿಗಳು ಕಾರುಗಳಿಗೆ ನಕಲಿ ನಂಬರ್ ಅಳವಡಿಸಿದ್ದಾರೆ, ದರೋಡೆ ಮಾಡಿದ್ದಾರೆ. ತಪ್ಪಿತಸ್ಥರನ್ನು ಬಿಡುವ ಪ್ರಶ್ನೆಯೇ ಇಲ್ಲ.
>
> – ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಕುರಿ ಶೆಡ್ಡಿಗೆ ಬೆಂಕಿ: 40 ಕುರಿ ಭಸ್ಮ

ಕೋಲಾರ: ಶ್ರೀನಿವಾಸಪುರ ತಾಲೂಕಿನ ನಂಬಿಹಳ್ಳಿ ಪಂಚಾಯಿತಿ ವ್ಯಾಪ್ತಿಯ ವರ್ತನಹಳ್ಳಿಯಲ್ಲಿ ಕಿಡಿಗೇಡಿಗಳು ಮಧ್ಯರಾತ್ರಿ ಸಮಯದಲ್ಲಿ ಕುರಿ ಶೆಡ್ಡಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಪರಿಣಾಮ ನಲವತ್ತಕ್ಕೂ ಹೆಚ್ಚು ಕುರಿಗಳು ಸಜೀವ ದಹನ ಆಗಿವೆ.

ಕಿಡಿಗೇಡಿಗಳ ಕೃತ್ಯವೋ ಅಥವಾ ಬೇರೆ ಅನಾಹುತವೋ ಎಂಬ ಸಂಶಯವಿದೆ. ಕುರಿಗಳ ಮಾಲೀಕರು ಕುರಿ ಸಾಕಾಣಿಕೆಯಿಂದಲೇ ಜೀವನ ನಡೆಸುತ್ತಿದ್ದು ಅನಾಹುತದಿಂದಾಗಿ ಕುಟುಂಬಕ್ಕೆ ನಷ್ಟ ಆಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಪಶು ವೈದ್ಯಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಪರಿಹಾರವನ್ನುಶೀಘ್ರದಲ್ಲಿ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ.

ಅನುದಿನವೂ ವಿರಾಮಕ್ಕೆ ಒಂದು ನೆಪ
ವಿರಾಮ
ವಿಶ್ವವಾಣಿ @vishwavaninews 21-11-2025 ಶುಕ್ರವಾರ

ಕುಟುಂಬ ಭಾರತೀಯತೆಯ ತಾಯಿಬೇರು

ಪರಸ್ಪರ ರಕ್ತಸಂಬಂಧ ಹೊಂದಿರುವವರೆಲ್ಲರೂ ಒಂದೇ ಮನೆಯಲ್ಲಿ ಒಟ್ಟಾಗಿ, ಸಂತೋಷವಾಗಿ ವಾಸ ಮಾಡುವುದನ್ನೇ ಕುಟುಂಬ ಎನ್ನಬಹುದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅವನ ಕುಟುಂಬದಿಂದಲೇ ನಿರ್ಮಾಣಗೊಳ್ಳುತ್ತದೆ. ಕುಟುಂಬವೇ ಬದುಕಿನ ಆರಂಭ, ಅದು ಯಾವುದೇ ಕಲಿಕೆಯ ಮೂಲವೂ ಹೌದು.

● ಡಾ. ಮೈತ್ರಿ ಭಟ್, ವಿಟ್ಲ

ಭಾರತೀಯ ಸಾಮಾಜಿಕ ಪದ್ಧತಿಯ ಬೇರು ಈ ಕುಟುಂಬ ವ್ಯವಸ್ಥೆ. ಜಗತ್ತು ಆಧುನಿಕತೆಗೆ ತನ್ನನ್ನು ತಾನು ತೆರೆದುಕೊಳ್ಳುತ್ತಿರುವ ಈ ಸಂಕ್ರಮಣ ಕಾಲದಲ್ಲಿ ತಂತ್ರಜ್ಞಾನ ಮನುಷ್ಯನ ಜಾಗವನ್ನು ಆಕ್ರಮಿಸಿಕೊಳ್ಳುತ್ತಿದೆ. ಮೌಲ್ಯ, ಸಂಸ್ಕೃತಿ, ನೈತಿಕತೆ, ಸದಾಚಾರಗಳೆಲ್ಲವೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿರುವ ಈ ಸಂದರ್ಭದಲ್ಲಿ ಕೌಟುಂಬಿಕ ವ್ಯವಸ್ಥೆಗೆ ಹೆಚ್ಚಿನ ಪಾಶಸ್ತ್ಯ ನೀಡಬೇಕಾದ ಅನಿವಾರ್ಯತೆ ಇದೆ. ಮನುಷ್ಯ ಹುಟ್ಟಿದ ಕ್ಷಣದಿಂದಲೇ ಬೆಸೆದುಕೊಳ್ಳುವ ಈ ಬಾಂಧವ್ಯವೇ ಮಗುವಿನ ಏಳ್ಗೆಗೆ ಭದ್ರ ಬುನಾದಿ ಎನ್ನಬಹುದು. ಹೀಗಾಗಿ ಕುಟುಂಬ ವ್ಯವಸ್ಥೆಯ ಬಗ್ಗೆ ಅಷ್ಟೇನೂ ಆಸ್ಥೆ ಹೊಂದಿರದ ವಿದೇಶೀಯರಿಗೂ ಇತ್ತೀಚೆಗೆ ಈ ವ್ಯವಸ್ಥೆಯ ಮಹತ್ವದ ಬಗ್ಗೆ ಅವಲೋಕಿಸುತ್ತಿದ್ದಾರೆ.

ನಮ್ಮ ದೇಶ, ನಮ್ಮ ಸಂಸ್ಕೃತಿ, ನಮ್ಮ ಸಮಾಜ ಎಂಬ ನಮ್ಮೆಲ್ಲಾ ಭಾವನೆಗಳಿಗೂ ಅಡಿಪಾಯ ನಮ್ಮ ಕುಟುಂಬ, ಆದರೆ ಇಂದು ಹಣ, ಕೀರ್ತಿ, ಅಂತಸ್ತುಗಳ ಬೆನ್ನು ಹತ್ತಿ ಓಡುತ್ತಾ, ಪ್ರೀತಿ, ಮಮತೆ, ವಿಶ್ವಾಸ, ನಂಬಿಕೆಗಳಂಥ ಅಪೂರ್ವ ಸಂಪತ್ತಿನ ಬಗ್ಗೆ ಅದೇಕೋ ಎಚ್ಚರ ಮರೆತಂತಿದೆ. ಕ್ಷುಲ್ಲಕ ಕಾರಣ ಹಿಡಿದು, ಕ್ಷಣಿಕ ಸಂತೋಷ ಬಯಸಿ ಸಂಬಂಧಗಳು ಹಳಸುತ್ತಿವೆ. ವಸುಧೈವ ಕುಟುಂಬಕಂ ಎಂಬ ಸಂದೇಶವನ್ನು ಇಡೀ ವಿಶ್ವಕ್ಕೇ ಸಾರಿದ ನಾವಿಂದು ಕೌಟುಂಬಿಕ ಮೌಲ್ಯಗಳನ್ನು ಕಳೆದುಕೊಳ್ಳುವತ್ತ ಸಾಗುತ್ತಿದ್ದೇವೆ. ನಾನು, ನನ್ನ ಕುಟುಂಬ, ನನ್ನ ಬಂಧುಗಳು, ನನ್ನ ಊರು, ನನ್ನ ರಾಜ್ಯ, ನನ್ನ ದೇಶ ಇವೆಲ್ಲವುಗಳಿಗೂ ಮೀರಿ ನನ್ನ ವಿಶ್ವ.

ಇಂದು ನಮಗೆ ಬೇಕಾಗಿರುವುದು ಮಾನವಪ್ರೀತಿಯ ನೆಲೆಗಟ್ಟಿನ ಸಮಾಜ. ಯಾವುದೇ ಭೇದ-ಭಾವ, ಜಾತಿ ಸಿದ್ಧಾಂತಗಳ ಭಿನ್ನಾಭಿಪ್ರಾಯವಿಲ್ಲದ ಸಮಾಜ. ಹಲವಾರು ಸವಾಲುಗಳ ನಡುವೆಯೂ ನ್ಯಾಯ, ಸ್ವಾತಂತ್ರ್ಯ, ಸಮಾನತೆಗಳೇ ಬಂಧುತ್ವದ ಮೂಲಮಂತ್ರ. ವೈವಿಧ್ಯತೆ ನಮ್ಮ ವಿಶೇಷತೆಯಾದರೂ ಏಕತೆ ನಮ್ಮ ಆಧಾರಸ್ತಂಭ.

ಪರಸ್ಪರ ರಕ್ತಸಂಬಂಧ ಹೊಂದಿರುವವರೆಲ್ಲರೂ ಒಂದೇ ಮನೆಯಲ್ಲಿ ಒಟ್ಟಾಗಿ, ಸಂತೋಷವಾಗಿ ವಾಸ ಮಾಡುವುದನ್ನೇ ಕುಟುಂಬ ಎನ್ನಬಹುದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅವನ ಕುಟುಂಬದಿಂದಲೇ ನಿರ್ಮಾಣಗೊಳ್ಳುತ್ತದೆ. ಕುಟುಂಬವೇ ಬದುಕಿನ ಆರಂಭ, ಅದು ಯಾವುದೇ ಕಲಿಕೆಯ ಮೂಲವೂ ಹೌದು.

ಕುಟುಂಬ ಎನ್ನುವುದು ಕೇವಲ ಭಾವನಾತ್ಮಕವಾದ ಸಂಬಂಧ ಮಾತ್ರವಲ್ಲ. ಅದು ಮಾನಸಿಕ ಸಂಬಂಧವೂ ಹೌದು. ವ್ಯಕ್ತಿಯ ಪ್ರತಿಯೊಂದು ಸಂದರ್ಭದಲ್ಲೂ ಜತೆಯಾಗಿ ನಿಂತು ಕಷ್ಟ ಬಂದಾಗ ಹೆಗಲು ಕೊಟ್ಟು ಸುಖ ಬಂದಾಗ ನಗುವನ್ನು ಹಂಚಿಕೊಳ್ಳುವ ಏಕೈಕ

ತಾಣ.

ವ್ಯವಸಾಯ ಬದುಕಿನ ಭಾಗವಾಗಿದ್ದಾಗ ಕೂಡು ಕುಟುಂಬಗಳು ಅನಿವಾರ್ಯವೂ, ಅವಶ್ಯವೂ ಆಗಿದ್ದವು. ಸ್ಥಿತ್ಯಂತರಗೊಳ್ಳುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಕಾಲಘಟ್ಟದಲ್ಲಿ ಅದು ಸಾಧ್ಯವಿಲ್ಲ, ಹಾಗಾಗಿ ಕುಟುಂಬಗಳು ಹಂಚಿಹೋಗಿರುವುದು ಸಾಮಾನ್ಯ ಹಾಗೂ ಸಹಜ. ಆದರೆ ದೂರವಿದ್ದರೂ ಆಂತರಿಕ ಆರ್ದ್ರತೆಯನ್ನು ಕಾಪಾಡಿಕೊಂಡು ಬಾಳಬೇಕಿದೆ. ನಗರ ವ್ಯವಸ್ಥೆಯಲ್ಲಿ ಗಂಡ-ಹೆಂಡತಿ ಹಾಗೂ ಮಕ್ಕಳು ಹೀಗೆ ಎಲ್ಲರ ಮೇಲೂ ಒತ್ತಡದ ಕರಿನೆರಳು ಆವರಿಸಿರುವಾಗ ಸಂಬಂಧಗಳ ಹೊಳಹುಗಳನ್ನು ಮಕ್ಕಳ ಮನದಲ್ಲಿ ಮೂಡಿಸಲು ಯಶಸ್ವಿಯಾಗಿದ್ದೇವೆಯೇ ಎಂಬುದನ್ನು ಯೋಚಿಸಬೇಕಿದೆ.

ಬದಲಾವಣೆಗೆ ಹೊಂದಿ ನಡೆಯಬೇಕಿರುವುದು ಸಹಜ, ಆದರೆ ಆಧುನಿಕತೆ ಬೆಳೆದಷ್ಟು ಮನುಷ್ಯ ತನ್ನದೇ ಚಿಪ್ಪಿನಲ್ಲಿ ಹುದುಗುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಇದು ದೀರ್ಘಕಾಲದಲ್ಲಿ ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳಿಗೂ ಎಡೆ ಮಾಡಿಕೊಡುತ್ತದೆ. ಕುಟುಂಬ ವ್ಯವಸ್ಥೆಯು ಸಹಬಾಳ್ವೆ, ಸಾಹಚರ್ಯ, ಸಹಕಾರ, ಸಮರಸ, ಹಂಚಿಕೊಳ್ಳುವ ಗುಣಗಳನ್ನು ಬೆಳೆಸಿ, ಸಂಕುಚಿತ ಭಾವಗಳನ್ನು ಬಿಡಿಸಿ ಆರೋಗ್ಯಪೂರ್ಣ ಅನುಬಂಧ ಬೆಳೆಸಿಕೊಳ್ಳಲು ಸಹಕಾರಿ. ಅದರಲ್ಲೂ ಶಾಂತಿ, ಸೌಹಾರ್ದತೆಗಳು ಬಾಳ ಉಸಿರಾದಾಗ ಮನೆಗೆದ್ದು ಮಾರು ಗೆಲ್ಲುವ ಈ ಕಾರ್ಯದಿಂದ ಹೊಸ ದಿಗಂತದೆಡೆಗೆ ತೆರೆದುಕೊಳ್ಳಲು ಸಾಧ್ಯ.

ಇಡೀ ಜಗತ್ತಿಗೆ ಭಾರತವು ಸಾರಿದ ವಸುಧೈವ ಕುಟುಂಬಕಂ ಇಡೀ ವಿಶ್ವವೇ ನಮ್ಮ ಕುಟುಂಬ ಎಂದು ಭಾವಿಸುವ ವಿಶಾಲ ಮನೋಭಾವ ಒಂದು ಸುಮಧುರ ಹಾಗೂ ಅಮೂಲ್ಯ ಪರಿಕಲ್ಪನೆ. ವ್ಯಕ್ತಿ ಮತ್ತು ಸಮಾಜವನ್ನು ಒಂದೆಡೆ ಕೇಂದ್ರೀಕರಿಸುವ ಈ ವ್ಯವಸ್ಥೆ ಜಗತ್ತು ಶಾಂತಿ, ಸಂಯಮದ ಹಾದಿಯಲ್ಲಿ ಸಾಗಲು ಅನಿವಾರ್ಯವಾದುದು. ಜಗತ್ತಿನಾದ್ಯಂತ ಇರುವ ಜನರು ತಮ್ಮ ವಿಭಿನ್ನ ದೃಷ್ಟಿಕೋನಗಳ ಹೊರತಾಗಿಯೂ ಒಂದೇ ಎಂದು ತಿಳಿಯುವುದು ವಿಶಿಷ್ಟ ಚಿಂತನೆಯೇ ಸರಿ.

ಚಿತ್ತವಿಹಾರ

ನಗುವೆಂಬ ದಿವ್ಯಾಸ್ತ್ರ

● ಶಂಕರಾನಂದ ಹೆಬ್ಬಾಳ

ನಗು ಮತ್ತು ಅಳು ಒಂದು ನಾಣ್ಯದ ಎರಡು ಮುಖಗಳಂತೆ. ಪ್ರತಿಯೊಬ್ಬರ ಜೀವನದಲ್ಲಿ ನಗು, ಅಳು ಇದ್ದೇ ಇರುತ್ತದೆ. ಇವೆರಡೂ ಒಂದರ ಹಿಂದೆ ಮತ್ತೊಂದು ಎನ್ನುವಂತೆ ಜತೆಯಾಗಿ ಸಾಗುತ್ತಿರುತ್ತವೆ. ನಗುವೊಂದು ರಸಪಾಕ ಅಳುವೊಂದು ರಸಪಾಕ, ನಗುವಾತ್ಮ ಪರಿಮಳವ ಪಸರಿಸುವ ಕುಸುಮ ದುಗುಡವಾತ್ಮವ ಕಡೆದು ಸತ್ವವೆತ್ತುವ ಮಂತು ಬಗೆದೆರಡನುಂ ಭಜಿಸು ಮಂಕುತಿಮ್ಮ ಎಂದು ಡಿವಿಜಿಯವರೆ ಮಂಕುತಿಮ್ಮನ ಕಗ್ಗದಲ್ಲಿ ವಿವರಿಸಿದ್ದಾರೆ.

ರಾಜಶೇಖರನೆಂಬ ಮಿಮಾಂಸಕಕಾರ ತನ್ನ ನಾಟ್ಯಶಾಸ್ತ್ರ ಎಂಬ ಗ್ರಂಥದ ರಸಪ್ರಕರಣದಲ್ಲಿ ನಗುವಿಗಾಗಿ ಒಂದು ರಸವನ್ನು ಮೀಸಲಿಟ್ಟಿದ್ದಾನೆ. ಹೀಗಿದ್ದಾಗ ನಗುವಿನ ಪ್ರಾಮುಖ್ಯತೆ ಇನ್ನು ಇಮ್ಮಡಿಗೊಳ್ಳುತ್ತದೆ. ಮೊಗದಲ್ಲಿ ನಗುವಿದ್ದರೆ ಮೊಗವು ಹೂವಿನಂತೆ ಅರಳಿರುತ್ತದೆ. ಅದೇ ಅಳುವಿದ್ದರೆ ಅದು ಬಾಡಿದಂತಿರುತ್ತದೆ. ಮನಸು ಸಂತೋಷ, ಹರ್ಷ, ಆಮೋದದ ಕ್ಷಣಗಳಲ್ಲಿ ತೇಲುವಾಗ ನಗು ಸಹಜವಾಗಿ ಉಕ್ಕುತ್ತದೆ. ನಗುವಿಗೆ ಮೂಲಕಾರಣ ಇಂತದ್ದೇ ಎನ್ನುವಂತಿಲ್ಲ.

ನಗುವಿನಲ್ಲಿ ಹಲವಾರು ಬಗೆಗಳಿದ್ದು ಮುಗುಳು ನಗೆ, ಅರಳು ನಗೆ ,ಬಿರುನಗೆ, ತುಂಬು ನಗೆ,ಹುಚ್ಚುನಗೆ, ಹುಚ್ಚುಚ್ಚು ನಗೆ, ಕುಹಕನಗೆ ಈ ರೀತಿ ಇವೆ. ನಮ್ಮ ನಗು ಯಾವುದೇ ಇರಲಿ ಆ ನಗು ಇತರರಿಗೆ ಸಂತಸ ತರಿಸಬೇಕೇ ಹೊರತು ಮನಸ್ಸಿಗೆ ನೋವನ್ನುಂಟು ಮಾಡುವಂತೆ ಇರಬಾರದು. ಕೆಲವರು ಕೊಂಕುನುಡಿಯನ್ನಾಡಿ ನಗುವ ಜಾಯಮಾನ ಬೆಳಸಿಕೊಂಡಿದ್ದರೆ ಅದು ವ್ಯಕ್ತಿತ್ವಕ್ಕೆ ಪೂರಕವಾಗದೆ ಮಾರಕವಾಗುತ್ತದೆ.

ಇತ್ತೀಚಿಗಷ್ಟೆ ಯೋಗಭ್ಯಾಸದಲ್ಲಿ ನಗುವಿನ ಕುರಿತು ಒಂದು ಆಸನವನ್ನೆ ಸೇರಿಸಿದ್ದಾರೆ, ಅದರ ಹೆಸರೇ ಹಾಸ್ಯಾಸನ, ಇದರಲ್ಲಿ ಮನಸ್ಸು ತುಂಬಿ ನಗುವುದೇ ಇದರ ಮೂಲ ಉದ್ದೇಶ. ನಗುವುದರಿಂದ ಮುಖದಲ್ಲಿನ ಸುಮಾರು ನರಗಳಿಗೆ ಚೈತನ್ಯ ಬರುತ್ತದೆ ಎಂಬ ಮಾತು ಸುಳ್ಳಲ್ಲ. ನಗುವಿನಿಂದ ನಿರಾಳತೆಯ ಭಾವ ಮೂಡುತ್ತದೆ. ಸರ್ವರೋಗಕ್ಕೂ ನಗುವೆ ಮದ್ದು ಎಂಬ ಗಾದೆಮಾತು ಸಹ ಈ ಸಂದರ್ಭದಲ್ಲಿ ನೆನಪಾಗುತ್ತದೆ.

ನಕ್ಕರೆ ಅದೆ ಸ್ವರ್ಗವೆಂಬ ಹಿರಿಯರ ನುಡಿಯಂತೆ ನಾವೆಲ್ಲ ನಿತ್ಯ ಕಷ್ಟಗಳಲ್ಲಿ ತೊಳಲಾಡುತ್ತಿದ್ದರೂ ನಗುವಿನಿಂದ ಅವೆಲ್ಲವನ್ನು ತೊಲಗಿಸಬಹುದು. ಉದಿಸುವ ರೋಗಗಳು ನಗುವೆಂಬ ದಿವ್ಯೌಷಧವಿದ್ದರೆ ಬರಲಾರವು, ಅದ್ದರಿಂದ ನಿತ್ಯ ಜೀವನದಲ್ಲಿ ನಗುವನ್ನು ಅಳವಡಿಸಿಕೊಂಡು ನಗುವೆಂಬ ದಿವ್ಯಾಸ್ತ್ರವನ್ನು ಬಳಿಯಲ್ಲಿಟ್ಟುಕೊಂಡು ಬಾಳೋಣ.

ಮೋಡದ ಮರೆಯ ಬೆಳಕು

ರವಿಕಿರಣವದು ತಿಣುಕಾಡಿದೆ
ಮೋಡದ ಮರೆಯಿಂದ ಹೊರಬರಲು
ಬೆಳಕದು ಬಂಧನ ಬಿಡಿಸಿ ಬಂದಿದೆ
ಬುವಿಯ ಜೀವರಾಶಿಯ ಕಾಯಲು!
ಪ್ರತಿಭೆಯು ಪ್ರಭೆಯಂತೆ ಹೊಳೆಯಲು
ಅಹಮ್ಮಿನ ಮೋಡ ಸರಿಯಬೇಕು
ಟೀಕಿಸುವವರ ಬಿರುನುಡಿಯ ಎದುರಿಸಲು
ತಾಳ್ಮೆಯ ಗೋಡೆಯನೊಮ್ಮೆ ಮುರಿಯಬೇಕು!
ಬೆಳ್ಳಿಯ ಕಿರಣವು ಬೆಳ್ಮುಗಿಲ
ಮೋಡದಿಂದ ಜಾರಿ ಧರೆ ಬೆಳಗುವಂತೆ
ಮಾತಿನ ಸಿಹಿ ಮೌನದ ಕಹಿಯ ಮೀರಿ
ಮನದೊಳಗೆ ಲಹರಿ ಮಿಂಚುವಂತೆ!
ಕಾನನದ ಹಸಿರು ಚಿಗುರಲು
ಹೊಂಗಿರಣದ ಬೆಳಕು ಬೇಕು
ಬೆಳ್ಳಿಮೋಡದಂಚಲಿ ದಿನಪ ನಗುತಿರಲು
ಜೀವಸಂಕುಲವದು ನಿತ್ಯ ಬೆಳೆಯಬೇಕು!

● ಸುಮನಾ ರಮಾನಂದ
ಕೊಯಂಬುತ್ತೂರು

ದೇವರ ಚಿತ್ತ ಎಲ್ಲರತ್ತ

● ಬೇಲೂರು ರಾಮಮೂರ್ತಿ

ಒಂದು ಹಳ್ಳಿಯಲ್ಲಿ ಒಬ್ಬ ಸೋಮಾರಿ ಇದ್ದ, ಏನೂ ಕೆಲಸ ಮಾಡದೇ ಹೇಗೋ ತನ್ನ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಆಗಾಗ ಅಷ್ಟಿಷ್ಟು ಆಹಾರ ಸಿಗುತ್ತಿದ್ದಾಗ ನಾನೇಕೆ ಕೆಲಸ ಮಾಡಬೇಕು ಅಂತ ತನ್ನ ಸೋಮಾರಿತನವನ್ನು ಮುಂದುವರಿಸಿದ್ದ.

ಒಂದು ದಿನ ತೋಟದ ಬಳಿಯಲ್ಲಿ ಅವನು ಅಲೆದಾಡುತ್ತಿದ್ದಾಗ ಮರಗಳಲ್ಲಿ ಅರಳಿ ನಿಂತಿದ್ದ ಸೇಬು ಹಣ್ಣುಗಳನ್ನು ಕದಿಯಲು ನೋಡಿದ. ಆದರೆ ಆ ಸೋಮಾರಿ ಯಾವಾಗ ಸೇಬಿಗೆ ಕೈ ಹಾಕಿದನೋ, ಆಗ ತೋಟದ ಮಾಲೀಕ ಅವನ ಬಳಿ ಓಡಿ ಬಂದ. ಆ ಸೋಮಾರಿ ಹೆದರಿಕೆಯಿಂದ ಕಾಡಿನೊಳಗೆ ಓಡಿ ಹೋಗಿ ಒಂದು ಕಡೆ ಅವಿತುಕೊಂಡ. ಆಗ ಅವನು ಒಂದು ಅಚ್ಚರಿಯನ್ನು ಕಂಡ, ಏನೆಂದರೆ ಬರೀ ಎರಡೇ ಕಾಲಿರುವ ತೋಳವೊಂದು ಕುಂಟುತ್ತಾ ಓಡಾಡುವ ದೃಶ್ಯ. ಎರಡೇ ಕಾಲಿನ ತೋಳವನ್ನು ನೋಡಿ ಸೋಮಾರಿಗೆ ತನ್ನ ಆಹಾರವನ್ನು ಅದು ಹೇಗೆ ಹುಡುಕಿಕೊಳ್ಳುತ್ತದೆ ಎನ್ನುವ ಯೋಚನೆ ಬಂತು.

ತೋಳ ಬಹಳ ಕಷ್ಟಪಟ್ಟು ತೆವಳುತ್ತಿತ್ತು. ತೋಳವನ್ನೇ ಕುತೂಹಲದಿಂದ ನೋಡುತ್ತಿದ್ದ ಸೋಮಾರಿಗೆ ಒಂದು ಸಿಂಹ ತನ್ನ ಬಾಯಿಯಲ್ಲಿ ಮಾಂಸದ ದೊಡ್ಡ ತುಂಡನ್ನು ಕಚ್ಚಿಕೊಂಡು ಬರುತ್ತಿರುವುದು ಕಂಡು ಬಹಳ ಭಯವಾಗಿ ಹತ್ತಿರವಿದ್ದ ಮರ ಹತ್ತಿ ಕೂತುಬಿಟ್ಟ. ಅವನಿಗೆ ಅಚ್ಚರಿಯಾಗುವಂತೆ ಆ ಸಿಂಹ ತಾನು ಕಚ್ಚಿಕೊಂಡಿದ್ದ ಮಾಂಸದ ತುಂಡನ್ನು ತೋಳದ ಮುಂದೆ ಹಾಕಿ ಹೊರಟು ಹೋಯಿತು. ತೋಳ ಸಂತೃಪ್ತಿಯಿಂದ ಮಾಂಸದ ತುಂಡನ್ನು ತಿಂದಿತು. ದೇವರ ಆಟವನ್ನು ನೋಡಿ ಸೋಮಾರಿಗೆ ಅಚ್ಚರಿಯಾಯಿತು. ಹಾಗಾದರೆ ದೇವರು ಪ್ರತಿಯೊಬ್ಬರ ಹೊಟ್ಟೆ ತುಂಬಲೂ ಒಂದಲ್ಲ ಒಂದು ಆಟ ಆಡುತ್ತಿರುತ್ತಾನೆ. ಹಾಗೆ ನನ್ನ ಹೊಟ್ಟೆ ತುಂಬಿಸುವುದೂ ಅವನ ಆಟದ ಒಂದು ಭಾಗ ಎಂದುಕೊಂಡು ಯಾರಾದರೂ ನನಗೆ ಊಟ ತಿಂಡಿ ತಂದುಕೊಡಬಹುದು ಅಂತ ಕಾದ.

ಎರಡು ಮೂರು ದಿನ ಕಾದರೂ ಯಾರೂ ಏನೂ ತಂದುಕೊಡದೇ ಇದ್ದಾಗ ಅವನಿಗೆ ಹಸಿವಾಗುತ್ತಾ ಬಂತು, ಅಲ್ಲಿಂದ ಕಾಲು ತೆಗೆದ. ದಾರಿಯಲ್ಲಿ ಒಬ್ಬರು ಸನ್ಯಾಸಿ ಕಂಡರು. ಅವರಿಗೆ ಕೈ ಮುಗಿದ ಸೋಮಾರಿ ನಡೆದ ಎಲ್ಲವನ್ನೂ ತಿಳಿಸಿ, 'ದೇವರು ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ರೀತಿ ಹೊಟ್ಟೆ ತುಂಬಿಸುತ್ತಾನೆ ಎನ್ನುತ್ತಾರೆ. ಅವನು ಕಾಲಿಲ್ಲದ ತೋಳಕ್ಕೆ ಸಿಂಹದ ಮುಖಾಂತರ ಹೊಟ್ಟೆ ತುಂಬಿಸಿದ. ಆದರೆ ಹಸಿದುಕೊಂಡೇ ಇರುವ ನನ್ನನ್ನು ಕಂಡು ಅವನಿಗೆ ಕನಿಕರ ಬರಲಿಲ್ಲ. ದೇವರಲ್ಲಿ ಈ ಬೇಧಭಾವ ಯಾಕೆ?' ಅಂತ ಕೇಳಿದ. ಸನ್ಯಾಸಿಗಳು



ನಕ್ಕು, 'ನೀನು ಹೇಳುವುದು ಸರಿ, ದೇವರು ಪ್ರತಿಯೊಬ್ಬರ ಹೊಟ್ಟೆ ತುಂಬಲೂ ಒಂದಲ್ಲಾ ಒಂದು ದಾರಿ ಹಾಕಿಕೊಟ್ಟಿರುತ್ತಾನೆ. ಆದರೆ ಆ ದಾರಿಯನ್ನು ನಾವು ಸರಿಯಾಗಿ ಗುರುತಿಸಬೇಕು. ದೇವರು ನಿನಗೆ ಹಾಕಿಕೊಟ್ಟಿರುವ ದಾರಿ ಯಾವುದೆಂದರೆ ನೀನು ಕಾಲಿಲ್ಲದ ತೋಳನ ಹಾಗೆ ಅವರಿವರಲ್ಲಿ ಬೇಡಿ ತಿನ್ನುವಂತಾಗಬಾರದು, ಬದಲಿಗೆ ಸಿಂಹದ ಬದಲಿಗೆ ತನ್ನ ಆಹಾರವನ್ನು ತಾನೇ ಸಂಪಾದಿಸಿ ಅದರಲ್ಲಿ ಅರ್ಹರಿಗೂ ಪಾಲು ಕೊಡುವಂತಿರಬೇಕು. ಅದಕ್ಕೇ ಅವನು ನಿನಗೆ ಆಹಾರ ಒದಗಿಸಿಲ್ಲ. ದೇವರ ಆಟದ ಅರ್ಥ ಏನೆಂದರೆ ಹುಟ್ಟಿರುವ ಪ್ರತಿಯೊಬ್ಬ ಮನುಷ್ಯನೂ ತಾನು ಕಷ್ಟಪಟ್ಟು ದುಡಿದು ತನ್ನ ಮತ್ತು ತನ್ನ ಕುಟುಂಬದ ಆಹಾರ ಸಂಪಾದನೆ ಮಾಡಿಕೊಳ್ಳುವುದರ ಜತೆಗೆ ಸಮಾಜದಲ್ಲಿ ಇರುವ ಅನಾಥರಿಗೆ, ಕೈಕಾಲು ಇಲ್ಲದವರಿಗೆ, ದುಡಿಯಲಾರದ ಅಶಕ್ತರಿಗೆ, ವಯಸ್ಸಾದವರಿಗೆ, ಸಹಾಯ ಮಾಡಲಿ ಎಂಬುದಾಗಿದೆ. ಈಗ ನಿನಗೆ ದೇವರ ಆಟದ ಅರ್ಥ ಆಗಿದ್ದರೆ ನಿನ್ನ ಸೋಮಾರಿತನವನ್ನು ಬಿಟ್ಟು ಇಂದಿನಿಂದಲೇ ದುಡಿಮೆ ಆರಂಭಿಸು' ಎಂದರು.

ಆಗ ಸೋಮಾರಿಗೆ ತನ್ನ ದುರ್ಗುಣ ಅರ್ಥವಾಗಿ ಅಂದಿನಿಂದಲೇ ತನಗೆ ಸಾಧ್ಯವಾದ ಕೆಲಸವನ್ನು ಮಾಡುತ್ತಾ ಸಂಪಾದನೆ ಶುರುಮಾಡಿದ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಉದಯಕಾಲದಲ್ಲಿ ಕಂಡಿತು ನೀರು (3)
3. ಯಯಾತಿಯ ತಂದೆಯ ಹೆಸರು (3)
7. ಅರದ ನಡುವೆ ವಿಶ್ವವೇ ಸಿಲುಕಿದಾಗ ಬಂದಿತು ಹೆಬ್ಬಾವು (4)
8. ವಿನಯದಿಂದ ಕೂಡಿದ್ದು ಕೊನೆಗೆ ದೀರ್ಘವಾಗಿ, ದಿಕ್ಕು ತಪ್ಪಿಸಿ ಬಂದಿತು (4)
10. ನಡೆ ಅಥವಾ ಹೋಗು ಎಂದರ್ಥ (3)
12. ಕತ್ತಲೆ ಹಾಗೂ ಅಜ್ಞಾನ ಕೂಡ (3)
14. ಹಂತಕನಂತೆ ಬಂದನೇ ಯಮ (3)
16. ಲಿಖಿತವಾಗಿ ಸಲ್ಲಿಸಿದ ಅರಿಕೆ (3)
18. ಚುನಾವಣೆಯ ದಿನ ಮಾಡಲೇಬೇಕಾದ ಕರ್ತವ್ಯ (4)
19. ಅರಸಿಯ ಅಂತಃಪುರ (4)
21. ಕಣ್ಣಿಗೆ ಹಚ್ಚುವ ಕಾಡಿಗೆ (3)
22. ಕೈ ಹಿಡಿದು ಬಂದಿರುವ ಮೊಸಳೆ (3)

ಮೇಲಿಂದ ಕೆಳಕ್ಕೆ

2. ದಾನವ, ರಾಕ್ಷಸ (3)
4. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ (4)
5. ಮನೆ ಅಥವಾ ವಾಸಸ್ಥಾನ (3)
6. ಮೈಮೇಲೆ ಚುಕ್ಕಿಗಳಿರುವ ಒಂದು ಕಾಡುಮೃಗ (3)
7. ದೇವತೆಗಳ ತಾಯಿ (3)
9. ವಿಧಿ, ಬ್ರಹ್ಮ (3)
11. ಸ್ವಾದ ತಿಳಿಸುವ ನಾಲಗೆ (3)
13. ಸ್ಪಂದನ, ತುಡಿತ (3)
15. ಪೂಜೆ ಮಾಡುವಾಗ ನೀರು ತುಂಬಿಡುವ ಕೊಡ (3)
16. ಮಜಾ ಮಾಡಲು ಬಂದಿರುವ ಮನ್ಮಥ (4)
17. ರಾಮು ತೆಗೆದುಕೊಂಡ ಬಿಡುವು (3)
18. ಎರಡು ಮನುಷ್ಯರನ್ನು ಮಾತ್ರವಲ್ಲ, ಪರಿವಾರಗಳನ್ನೂ ಬೆಸೆಯುವ ಪರಿಣಯ (3)
20. ವಾದ್ಯವನ್ನು ಬಾರಿಸುವವನು (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಉದಕ 3. ನಹುಷ 7. ಅಜಗರ
8. ಯಾನವಿಸ 10. ತೆರಳು
12. ತಿಮಿರ 14. ಅಂತಕ
16. ಮನವಿ 18. ಮತದಾನ
19. ರಾಣಿವಾಸ 21. ಅಂಜನ
22. ಮಕರ

ಮೇಲಿಂದ ಕೆಳಕ್ಕೆ
2. ದನುಜ 4. ಹುರಿಯಾಳು
5. ನಿವಾಸ 6. ಚಿರತೆ 7. ಅದಿತಿ
9. ವಿಧಾತ 11. ರಸನ 13. ಮಿಡಿತ
15. ಕಳಸ 16. ಮನಸಿಜ
17. ವಿರಾಮ 18. ಮದುವೆ
20. ವಾದಕ

ಅಂದುಕೊಂಡದ್ದನ್ನೆಲ್ಲಾ ನೆರವೇರಿಸುವ ಅಶ್ವಿನಿ ದೇವತೆಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಶ್ವಿನಿ ದೇವತೆಗಳು ಸೂರ್ಯದೇವ ಹಾಗೂ ಸಂಧ್ಯಾ ದೇವಿಯ ಮಕ್ಕಳು. ಅಶ್ವಿನಿ ದೇವತೆಗಳು ಅಶ್ವ ಹಾಗೂ ಮಾನವ ರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ. ಸೂರ್ಯನ ಪತ್ನಿ ಸಂಧ್ಯಾದೇವಿ (ವಿಶ್ವಕರ್ಮನ ಮಗಳು) ಸೂರ್ಯನ ತಾಪ ತಾಳಲಾರದೆ ಸ್ವಲ್ಪ ದಿನಗಳ ಮಟ್ಟಿಗೆ ವಿಶ್ರಾಂತಿಗಾಗಿ ಹಿಮಾಲಯ ಪರ್ವತಕ್ಕೆ ಹೋಗುತ್ತಾಳೆ. ಅಲ್ಲಿ ಅವಳ ಗುರುತು ಯಾರಿಗೂ ತಿಳಿಯಬಾರದೆಂದು ಹೆಣ್ಣು ಕುದುರೆಯ ರೂಪ ಪಡೆದು ವಿಹರಿಸುತ್ತಾಳೆ. ಸಂಚರಿಸುತ್ತಿದ್ದ ಸೂರ್ಯನಿಗೆ ಅವಳ ಗುರುತು ಸಿಕ್ಕಿತು. ಅವನು ಗಂಡು ಕುದುರೆ ರೂಪದಲ್ಲಿ ಹೋಗಿ ಅವಳ ಜೊತೆ ವಿಹರಿಸುತ್ತಾನೆ. ಅವರಿಬ್ಬರ ಸಂಯೋಗದಿಂದ ಕುದುರೆಮುಖ- ಮಾನವ ಶರೀರ ಹೊಂದಿರುವ ಅವಳಿ ಮಕ್ಕಳು ಜನಿಸಿದರು, ಅವರ ಹೆಸರು ಅಶ್ವಿನಿ ಕುಮಾರರು. ಅಪ್ರತಿಮ ಸುಂದರರು, ಇಬ್ಬರೂ ಸದಾ ಕಾಲ ಜೊತೆಯಲ್ಲೇ ಇರುವವರು. ಅವರು ವಾಸವಿರುವುದು ದೇವ ಲೋಕದಲ್ಲಾದರೂ, ಪ್ರತಿನಿತ್ಯ ಚಿನ್ನದ ರಥದಲ್ಲಿ ಭೂಮಿಗಿಳಿದು ಭೂ ಸಂಚಾರ ಮಾಡುತ್ತಾ ಬಂದು ನೇಗಿಲು ಹಿಡಿದು ಹೊಲ ಉಳುತ್ತಾರೆ. ಉಳುವಾಗ ಒಂದು ಸಲ ಹಂಸಗಳನ್ನು ಹೂಡುತ್ತಾರೆ, ಮತ್ತೊಂದು ಸಲ ಗರುಡನನ್ನು, ಮತ್ತೊಮ್ಮೆ ಕತ್ತೆಗಳನ್ನು ನೇಗಿಲಿಗೆ ಹೊಡುತ್ತಾರೆ. ಭೂಲೋಕದಲ್ಲಿ ಹೆಚ್ಚಾಗಿ ಯಜ್ಞ ಯಾಗಾದಿಗಳು ಮಾಡುವ ಜಾಗದಲ್ಲಿ ಸಂಚರಿಸುತ್ತಾರೆ ಎಂದು ಹೇಳಲಾಗುತ್ತದೆ.

ಅಶ್ವಿನಿ ಕುಮಾರರು ದೇವತೆಗಳಿಗೆ ವೈದ್ಯರು. ಒಮ್ಮೆ ರಾಕ್ಷಸರು ರೇಭನೆಂಬ ಋಷಿಯ ಕೈಕಾಲುಗಳನ್ನು ಮುರಿದು ಹಾಳು ಬಾವಿಯಲ್ಲಿ ಹಾಕಿದರು. ಆ ಋಷಿಗಳು ಅಶ್ವಿನಿ ಕುಮಾರರ ಸ್ಮರಣೆ ಮಾಡುತ್ತಾ ಹತ್ತು ದಿನಗಳ ಕಾಲ ಬಾವಿಯಲ್ಲಿ ಕಳೆದ. ಇದನ್ನರಿತ ಅಶ್ವಿನಿ ಕುಮಾರರು ಆ ಋಷಿಯನ್ನು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಬಾವಿಯಿಂದ ಮೇಲೆ ತೆಗೆದು ಆರೈಕೆ ಮಾಡಿದರು. ಪತಿ ಪಾರಾಯಣಿ ಸತಿ ಸುಕನ್ಯಾಳ ಗಂಡ ಚ್ಯವನ ಮಹರ್ಷಿಗಳಿಗೆ ಯೌವ್ವನ ಮತ್ತು ಸೌಂದರ್ಯವನ್ನು ಕೊಟ್ಟವರು ಅಶ್ವಿನಿ ಕುಮಾರರು.

ಹಿಂದೆ ದೌಮ್ಯ ಮಹರ್ಷಿಗಳ ಶಿಷ್ಯ ಉಪಮನ್ಯು ಗುರುಗಳ ಆಣತಿಯಂತೆ ಕಾಡಿನಲ್ಲಿ ಹಸುಗಳನ್ನು ಮೇಯಿಸುವಾಗ ಹಸಿವಾಗಿ ಗುರುಗಳ ಅನುಮತಿ ಇಲ್ಲದೆ ಭಿಕ್ಷೆ ಬೇಡಿ ಅದನ್ನು ತಿಂದನು. ಅದಕ್ಕಾಗಿ ಗುರುಗಳು ಅವನಿಗೆ ಐದು ಮನೆ ಮಾತ್ರ ಭಿಕ್ಷೆ ಮಾಡಬೇಕೆಂದು ತಂದ ಭಿಕ್ಷೆಗಳನ್ನೆಲ್ಲ ಅವರಿಗೆ ಕೊಡುವಂತೆ ಹೇಳಿ ತರಿಸಿಕೊಳ್ಳುತ್ತಿದ್ದರು. ಒಂದು ದಿನ ಹಸಿವು ತಾಳಲಾರದೆ ಎಕ್ಕದ ಗಿಡದ ಹಾಲನ್ನು ಸೇವಿಸಲು ಹೋಗಿ ಕಣ್ಣಿಗೆ ಬಿದ್ದು ಕಣ್ಣು ಕಾಣದಾಯಿತು. ಕತ್ತಲಲ್ಲಿ ತಡಕಾಡುತ್ತಾ ಹೋಗಿ ಪಾಳು ಬಾವಿಯಲ್ಲಿ ಬಿದ್ದನು. ಶಿಷ್ಯನನ್ನು ಹುಡುಕಿಕೊಂಡು ಬಂದ ಗುರುಗಳು ಉಪಮನ್ಯುವಿನ ಸ್ಥಿತಿಗೆ ಮರುಗಿ ಅಶ್ವಿನಿ ದೇವತೆಗಳನ್ನು ಪ್ರಾರ್ಥಿಸಲು ಹೇಳಿದರು. ಅಶ್ವಿನಿ ದೇವತೆ ಗಳನ್ನು ಪ್ರಾರ್ಥಿಸಿದಾಗ ಉಪಮನ್ಯುವಿಗೆ ಅಶ್ವಿನಿಕುಮಾರರ ಅನುಗ್ರಹದಿಂದ ಆರೋಗ ಕಣ್ಣಿನ ದೃಷ್ಟಿ ಗುರುಗಳಿಂದ ಸಕಲ ವಿದ್ಯೆಯ ಆಶೀರ್ವಾದ ಎಲ್ಲವೂ ದೊರೆಯಿತು.

ಅಶ್ವಿನಿ ಕುಮಾರರು ಒಮ್ಮೆ ನಾರಾಯಣನ ದರ್ಶನ ಮಾಡಲು ವೈಕುಂಠಕ್ಕೆ ಬಂದರು. ಆ ಸಮಯದಲ್ಲಿ ನಾರಾಯಣನು ಲಕ್ಷ್ಮಿಯೊಡನೆ ಏಕಾಂತದಲ್ಲಿದ್ದನು. ವೈಕುಂಠದ ದ್ವಾರಪಾಲಕರಾಗಿದ್ದ ಜಯ-ವಿಜಯರು ಅಶ್ವಿನಿ ಕುಮಾರರನ್ನು ಒಳಗೆ ಬಿಡಲಿಲ್ಲ. ಪರಿಸ್ಥಿತಿಯನ್ನು ಅರಿತ ಅಶ್ವಿನಿ ಕುಮಾರರು ತಾಳ್ಮೆಯಿಂದ ನಾವು ವಿಷ್ಣು ದರ್ಶನಕ್ಕೆ ಬಂದಿದ್ದೇವೆ ಎಂದು ಇಲ್ಲಿಂದಲೇ ಮೂರು ಸಲ ಹೇಳಿ ಎಂದರು. ಆದರೆ ಜಯ-ವಿಜಯರು ಏನೂ ಹೇಳದೆ ಮೌನವಾಗಿದ್ದರು. ಇದರಿಂದ ಕೋಪಗೊಂಡ ಅಶ್ವಿನಿ ಕುಮಾರರು, ಜಯ -ವಿಜಯರಿಗೆ 'ನಾವು ಹೇಳಿದಂತೆ ಹೇಳಿ ಎಂದರೂ ಹೇಳಲಿಲ್ಲ ಅಲ್ಲವೇ? ಆದುದರಿಂದ ನೀವು ಮೂರು ಸಲ ಭೂಮಿಯಲ್ಲಿ ಜನಿಸಿರಿ' ಎಂದು ಶಾಪ ಕೊಟ್ಟರು. ಇದರಿಂದ ಸುಮ್ಮನಿರದ ಜಯ-ವಿಜಯರೂ ಸಹ ಅಶ್ವಿನಿ ಕುಮಾರರಿಗೆ, 'ನೀವು ಸಹ ಒಂದು ಸಾರಿ ಭೂಮಿಯಲ್ಲಿ ಜನಿಸಿರಿ' ಎಂದು ಶಾಪ ಕೊಟ್ಟರು.

ಜಯ-ವಿಜಯರ ಶಾಪದಂತೆ ಅಶ್ವಿನಿ ಕುಮಾರರು ದ್ವಾಪರ ಯುಗದಲ್ಲಿ ಮಾದ್ರಿಗೆ ಅವಳಿ ಮಕ್ಕಳಾಗಿ ಜನಿಸಿ ಮಾದ್ರಿಯ ಮಡಿಲನ್ನು ಬೆಳಗಿದ ಪಾಂಡು ನಂದನರು ಹಾಗೂ ಪಂಚ ಪಾಂಡವರ ನಕುಲ-ಸಹದೇವರು. ಅಶ್ವಿನಿ ದೇವತೆಗಳು ಯಾವಾಗಲೂ ಅಸ್ತು-ತಥಾಸ್ತು ಎಂದು ಹೇಳುತ್ತಿರುತ್ತಾರೆ, ಅವರ ಅನುಗ್ರಹದಿಂದ ಆರೋಗ್ಯ-ಸಂಪತ್ತು-ಶಾಂತಿ ಮತ್ತು ಜ್ಞಾನ ಲಭಿಸುತ್ತದೆ.

ಆದ್ದರಿಂದಲೇ ಹಿರಿಯರು ಒಳ್ಳೆಯ ಮಾತನಾಡಿ ಒಳ್ಳೆಯ ಯೋಚನೆಗಳನ್ನು ಮಾಡಿ ತಥಾಸ್ತು ದೇವತೆಗಳು ಅಂದರೆ ಅಶ್ವಿನಿ ಕುಮಾರರು ಅದನ್ನು ನೆರವೇರಿಸುತ್ತಾರೆ ಎಂದು ಹೇಳುತ್ತಾರೆ, ಇದು ನಿಮ್ಮ ಅನುಭವಕ್ಕೂ ಬಂದಿರಬಹುದು.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ವಿರಾಮ
ಪ್ರತಿ ಭಾನುವಾರ

ಚಂದನವನದಲ್ಲಿ ಮಾರುತ

ಮಾರುತ ಸದ್ದು ಜೋರಾಗಿದೆ. ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರದಲ್ಲಿ ಬೃಂದಾ ಆಚಾರ್ಯ ನಾಯಕಿಯಾಗಿ ನಟಿಸಿದ್ದಾರೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರ ಹೊಂದಿರುವ ಈ ಚಿತ್ರ ರಾಜ್ಯಾದ್ಯಂತ ಸದ್ದು ಮಾಡುತ್ತಿದೆ. ಮಾರುತ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಆ್ಯಕ್ಷನ್ ಕಥೆಯನ್ನು ಹೊತ್ತು ಬಂದಿದೆ. ಇದು ಎಸ್.ನಾರಾಯಣ್ ನಿರ್ದೇಶನದ ನೂರ ಐವತ್ತೊಂದನೇ ಸಿನಿಮಾ ಎಂಬುದು ವಿಶೇಷ. ಕಳೆದ ಒಂದು ವರ್ಷದ ಹಿಂದೆ ಶುರುವಾದ ಚಿತ್ರವಿದು. ಚಿತ್ರದಲ್ಲಿ ಎಲ್ಲರ ಗಮನ ಸೆಳೆಯುವ ಪ್ರಮುಖ ಪಾತ್ರಕ್ಕೆ ನಟರೊಬ್ಬರು ಬೇಕಿತ್ತು. ಆಗ ನಮಗೆ ದುನಿಯಾ ವಿಜಯ್ ನೆನಪಾದರು. ವಿಜಯ್ ಅವರು ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ತೆರೆ ಯಲ್ಲಿ ಅವರ ಪಾತ್ರ ನೋಡುತ್ತಿದ್ದರೆ ರೋಮಾಂಚನ ಅನ್ನಿಸುತ್ತದೆ ಎಂದು ಎಸ್.ನಾರಾಯಣ್ ಹೇಳುತ್ತಾರೆ. ಮನುಷ್ಯನಿಗೆ ಎಲ್ಲದಕ್ಕಿಂತ ಶಿಸ್ತು ಹಾಗೂ ಸಮಯ ಪರಿಪಾಲನೆ ಮುಖ್ಯ. ನಾನು ಅದನ್ನು ಕಲಿತದ್ದು ಎಸ್.ನಾರಾಯಣ್ ಅವರಿಂದ ಕಲಿತೆ. ಈ ಚಿತ್ರದಲ್ಲಿ ನನ್ನದು ವಿಭಿನ್ನವಾದ ಪಾತ್ರ. ಈ ಸಿನಿಮಾದಲ್ಲಿ ಎಲ್ಲರೂ ಮೆಚ್ಚುವ ಅಭಿನಯ ತೋರಿದ್ದಾರೆ. ಎಸ್.ನಾರಾಯಣ್ ಅವರಂತಹ ಅನುಭವಿ ನಿರ್ದೇಶಕರ ಬಳಿ ಕೆಲಸ ಮಾಡಿ ಸಾಕಷ್ಟು ಕಲಿತಿದ್ದೇನೆ. ಇನ್ನೂ, ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ನಮ್ಮ ಚಿತ್ರದಲ್ಲಿದ್ದು, ಅವರೊಟ್ಟಿಗೆ ಅಭಿನಯಿಸಿದ್ದು, ಬಹಳ ಖುಷಿಯಿದೆ ಎಂದು ಶ್ರೇಯಸ್ ಸಂತಸದಿಂದ ನುಡಿಯುತ್ತಾರೆ. ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕೆ.ಮಂಜು, ರಮೇಶ್ ಯಾದವ್ ಚಿತ್ರ ನಿರ್ಮಾಣವಾಗಿದ್ದಾರೆ.

ಮಾರುತ ಮೆಚ್ಚಿದ ಆರಕ್ಷಕರು

ಎಲ್ಲೆಡೆ ಮಾರುತದ ಸದ್ದು ಜೋರಾಗಿದೆ. ಚಿತ್ರದಲ್ಲಿ ಒಳ್ಳೆಯ ಸಾಮಾಜಿಕ ಸಂದೇಶವೂ ಅಡಕವಾಗಿದೆ. ಪೊಲೀಸ್ ಇಲಾಖೆಯವರಿಗಾಗಿಯೇ ಮಾರುತ ಚಿತ್ರದ ವಿಶೇಷ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ಸಿನಿಮಾ ವೀಕ್ಷಿಸಿದ ಹಲವು ಪೊಲೀಸ್ ಅಧಿಕಾರಿಗಳು ಸಿನಿಮಾವನ್ನು ಮೆಚ್ಚಿಕೊಂಡಾಡಿದರು. ಇಂದು ಸಮಾಜಕ್ಕೆ ಅಗತ್ಯವಾದ ಸಂದೇಶವನ್ನು ನೀಡುವ ಇಂತಹ ಸಿನಿಮಾಗಳು ಹೆಚ್ಚಾಗಿ ತೆರೆಗೆ ಬರಬೇಕು. ಇಂತಹ ಉತ್ತಮ ಚಿತ್ರವನ್ನು ನಿರ್ಮಾಣ ಮಾಡಿದ ನಿರ್ಮಾಪಕರನ್ನು ಶ್ಲಾಘಿಸಬೇಕು. ನಿರ್ದೇಶಕ ಎಸ್.ನಾರಾಯಣ್ ಅವರು ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ವಿಷಯವನ್ನಿಟ್ಟುಕೊಂಡು ಅದ್ಭುತವಾದ ಸಿನಿಮಾ ಕಟ್ಟಿಕೊಟ್ಟಿದ್ದಾರೆ. ಚಿತ್ರದಲ್ಲಿ ನಟಿಸಿರುವ ಎಲ್ಲಾ ಕಲಾವಿದರು ಚೆನ್ನಾಗಿ ಅಭಿನಯಿಸಿದ್ದಾರೆ. ದುನಿಯಾ ವಿಜಯ್ ಅವರದಂತೂ ಅದ್ಭುತ ಅಭಿನಯ ತೋರಿದ್ದಾರೆ. ಸಾಮಾಜಿಕ ಜಾಲತಾಣಗಳಿಂದ ಎಷ್ಟು ಅನುಕೂಲ ಇದೆಯೊ, ಅಷ್ಟೇ ತೊಂದರೆ ಕೂಡ ಇದೆ, ಅನ್ನುವುದನ್ನು ಸಿನಿಮಾದಲ್ಲಿ ತೋರಿಸಿದ್ದಾರೆ. ಇದು ಹಿರಿಯರು, ಕಿರಿಯರು ಎಂಬ ಭೇದಭಾವವಿಲ್ಲದೆ ಎಲ್ಲಾ ವಯಸ್ಸಿನವರು ಅವಶ್ಯವಾಗಿ ನೋಡುವ ಸಿನಿಮಾವಾಗಿದೆ. ಅದರಲ್ಲೂ ಹೆಣ್ಣುಮಕ್ಕಳಿಗೆ ಎಚ್ಚರಿಕೆಯ ಗಂಟೆ. ಈಗಿನ ಯುವಪೀಳಿಗೆ ಈ ಚಿತ್ರ ನೋಡಿ ತಿಳಿದುಕೊಳ್ಳುವುದು ಬಹಳಷ್ಟಿದೆ ಎಂದು ಆರಕ್ಷಕರು ಮೆಚ್ಚಿಕೊಂಡಾಡಿದ್ದಾರೆ.

ಆಂಧ್ರದಲ್ಲೂ ಉಪ್ಪಿ ಹವಾ

ರಿಯಲ್ ಸ್ಟಾರ್ ಉಪೇಂದ್ರ ಅವರಿಗೆ ಕನ್ನಡ ಮಾತ್ರವಲ್ಲ, ಪರ ಭಾಷೆಯಲ್ಲಿಯೂ ಭರ್ಜರಿ ಡಿಮ್ಯಾಂಡ್ ಇದೆ. ಯುಐನಲ್ಲಿ ಮ್ಯಾಜಿಕ್ ಮಾಡಿದ ಉಪ್ಪಿ, ರಜನಿಕಾಂತ್ ಜತೆಗೆ ಕೂಲಿಯಲ್ಲೂ ಕಮಾಲ್ ಮಾಡಿದರು. ಈಗ ಆಂಧ್ರದಲ್ಲಿಯೂ ಕಿಂಗ್ ಆಗಿ ಅಬ್ಬರಿ ಸಲು ಸಿದ್ಧವಾಗಿದ್ದಾರೆ. ಉಪೇಂದ್ರ ಆಂಧ್ರ ಕಿಂಗ್ ತಾಲ್ಲೂಕ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಿನಿ ಪ್ರಿಯರನ್ನು ಸೆಳೆದಿದೆ. ಉಪೇಂದ್ರ ಈ ಚಿತ್ರದಲ್ಲಿ ಸ್ಟಾರ್ ಹೀರೊ ಸೂರ್ಯ ಕುಮಾರ್ ಪಾತ್ರದಲ್ಲಿ ನಟಿಸಿದ್ದಾರೆ. ತೆಲುಗಿನಲ್ಲಿ ಅವರು ಆಂಧ್ರ ಕಿಂಗ್ ಎಂದೇ ಪ್ರಸಿದ್ಧಿ ಪಡೆದಿರುತ್ತಾರೆ. ರಾಮ್ ಪೋತಿನೇನಿ ಒಂದು ಹಳ್ಳಿಯ ಯುವಕನಾಗಿದ್ದು, ಆಂಧ್ರ ಕಿಂಗ್ ಅಭಿಮಾನಿಯಾಗಿರುತ್ತಾನೆ. ಸಿನಿಮಾ ಸ್ಟಾರ್‌ಗಳ ಅಭಿಮಾನಿ ಎಂದ ಮೇಲೆ, ಅವರ ಸಿನಿಮಾಗಳು ತೆರೆಗೆ ಬರುವಾಗ ಸಂಭ್ರಮಿಸುವುದು, ಸಿನಿಮಾ ನೋಡಿ ಖುಷಿಪಡುವುದು. ತನ್ನ ನೆಚ್ಚಿನ ನಟನ ವಿರುದ್ಧ ಮಾತನಾಡಿದಾಗ ಅವರ ವಿರುದ್ಧ ಸಿಡಿದೇಳುವುದು ಇದೆಲ್ಲವೂ ಚಿತ್ರದಲ್ಲಿದೆ. ಆದರೆ ತನ್ನ ಮೆಚ್ಚಿನ ನಟನನ್ನು ಭೇಟಿಯಾಗಲು ಚಡಪಿ ಸುವ ನಾಯಕ ಹೇಗೆಲ್ಲಾ ಪಾಡುಪಡುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಬಹುತೇಕ ಸಿನಿಮಾ ಸೆಂಟಿಮೆಂಟ್‌ನಲ್ಲಿ ಸಾಗುತ್ತದೆ. ಅದರ ಜತೆಗೆ ಲವ್ ಸ್ಟೋರಿಯೂ ಬೆರೆತಿದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಉಪೇಂದ್ರ ಅವರ ಪಾತ್ರ ಪವರ್ ಫುಲ್ ಆಗಿದ್ದು, ಕಥೆಗೆ ಹೊಸ ತಿರುವು ನೀಡಲಿದೆ. ಉಪೇಂದ್ರ ಅವರಿಗೆ ಟಾಲಿವುಡ್‌ನಲ್ಲಿಯೂ ಅಪಾರ ಅಭಿಮಾನಿಗಳಿದ್ದಾರೆ. ಹಾಗಾಗಿ ಈ ಸಿನಿಮಾ ದೊಡ್ಡ ಮಟ್ಟದಲ್ಲಿ ಸದ್ದು ಮಾಡಲಿದೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಪಿ.ಮಹೇಶ್ ಬಾಬು ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಆಂಧ್ರ ಕಿಂಗ್ ತಾಲ್ಲೂಕ ಮುಂದಿನ ವಾರ ತೆರೆಗೆ ಬರಲಿದೆ.

ಡ್ರೀಮ್ ಥಿಯೇಟರ್‌ನಲ್ಲಿ ಪ್ರಿಯಾಂಕಾ ಮೋಹನ್

ರೆಟ್ರೋ ಲುಕ್‌ನಲ್ಲಿ ಮೂಡಿಬರುತ್ತಿರುವ 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾ ಪೋಸ್ಟರ್ ಹಾಗೂ ಫಸ್ಟ್ ಲುಕ್ ಮೂಲಕವೇ ಗಮನಸೆಳೆಯುತ್ತಿದೆ. 666 ಆಪರೇಷನ್ ಡ್ರೀಮ್ ಥಿಯೇಟರ್ ಸೆಟ್, ಶೂಟಿಂಗ್ ವಿಚಾರವಾಗಿಯೂ ಕುತೂಹಲ ಹೆಚ್ಚಿಸಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಧನಂಜಯ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ರೆಟ್ರೋ ಅವತಾರದಲ್ಲಿ ಮಿಂಚುತ್ತಿದ್ದಾರೆ. ಇನ್ನೂ ಈ ಸಿನಿಮಾ ಸೆಟ್ಟೇರಿದಾಗಿನಿಂದಲೂ ಈ ಸಿನಿಮಾದಲ್ಲಿ ನಾಯಕಿಯಾಗಿ ಯಾರು ಅಭಿನಯಿಸಲಿದ್ದಾರೆ ಎಂಬ ಕುತೂಹಲ ಎಲ್ಲರಲ್ಲಿಯೂ ಇತ್ತು. ಈಗ ಆ ಕ್ಯೂರಿಯಾಸಿಟಿಗೆ ತೆರೆ ಬಿದ್ದಿದೆ. ಬಹುಭಾಷಾ ನಟಿ ಪ್ರಿಯಾಂಕಾ ಮೋಹನ್ ಚಿತ್ರದ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ತಮ್ಮ ಅಭಿನಯದ ಮೂಲಕ ದಕ್ಷಿಣ ಚಿತ್ರರಂಗದಲ್ಲಿ ಖ್ಯಾತಿ ಗಳಿಸಿರುವ ಪ್ರಿಯಾಂಕಾ ಮೋಹನ್ ಈಗ 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾದ ಭಾಗವಾಗಿದ್ದಾರೆ. ತೆಲುಗಿನ ಗ್ಯಾಂಗ್‌ಲೀಡರ್, ಸರಿಪೋದ ಶನಿವಾರಂ, ತಮಿಳಿನ ಡಾಕ್ಟರ್, ಟಿಕ್‌ಟಾಕ್, ಕ್ಯಾಪ್ಟನ್ ಮಿಲ್ಲರ್, ಬ್ರದರ್ ಸಿನಿಮಾಗಳಲ್ಲಿಯೂ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ. ನಾನು ಡಾ.ಶಿವರಾಜ್ ಕುಮಾರ್ ಸರ್ ಅವರ ಸಿನಿಮಾಗಳನ್ನು ನೋಡುತ್ತಾ ಬೆಳೆದಿದ್ದೇನೆ. ಅವರೊಂದಿಗೆ ನಟಿಸುವುದು ನನ್ನ ಕನಸಾಗಿತ್ತು. 666 ಆಪರೇಷನ್ ಡ್ರೀಮ್ ಥಿಯೇಟರ್‌ನ ಮೂಲಕ ಆ ಕನಸು ನನಸಾಗಿದೆ. ಚಿತ್ರದಲ್ಲಿ ದೊಡ್ಡ ಕಲಾವಿದರ ತಂಡವೇ ಇದೆ, ಅವರೊಂದಿಗೆ ನಟಿಸುತ್ತಿರುವುದು ಖುಷಿಕೊಟ್ಟಿದೆ ಎಂದು ಪ್ರಿಯಾಂಕಾ ಸಂತಸ ಹಂಚಿಕೊಳ್ಳುತ್ತಾರೆ. ಹೇಮಂತ್.ಎಂ.ರಾವ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ ಈ ಚಿತ್ರವನ್ನು ವೈಶಾಕ್ ಫಿಲಂಸ್ ಬ್ಯಾನರ್‌ನಲ್ಲಿ ಡಾ.ವೈಶಾಕ್.ಜೆ.ಗೌಡ ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಎರಡು ಹಂತದ ಚಿತ್ರೀಕರಣ ಮುಗಿಸಿರುವ ಚಿತ್ರತಂಡ, ಡಿಸೆಂಬರ್ ಮೊದಲ ವಾರದಲ್ಲಿ ಮೂರನೇ ಹಂತದ ಶೂಟಿಂಗ್ ನಡೆಸಲು ಯೋಜನೆ ಹಾಕಿಕೊಂಡಿದೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ್ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಕೊರಗಜ್ಜನ ಗುಳಿಗ ಘೋರ್ಗರೆತ

ಶ್ರೀ ವಿಕ್ರಮ ಸಿನಿಮಾಸ್ ಮತ್ತು ಸಕ್ಸಸ್ ಫಿಲಂ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಕೊರಗಜ್ಜ ಭಾರತೀಯ ಚಿತ್ರರಂಗದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದೆ. ಕೊರಗಜ್ಜ ಚಿತ್ರವನ್ನು ಸುಧೀರ್ ಅತ್ತಾವರ್ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ಮೂಡಿಬರುವ ಕರಾವಳಿಯ ಉಗ್ರಭಯಂಕರ ದೈವ ಗುಳಿಗನ ಕುರಿತಾದ ಹಾಡು ಪ್ರೇಕ್ಷಕರ ಮನಸೂರೆಗೊಂಡಿದೆ. ನಿರ್ದೇಶಕ ಸುಧೀರ್ ಅತ್ತಾವರ್ ಅವರೇ ಬರೆದಿರುವ ಗುಳಿಗ.,.ಗುಳಿಗ...ಗುಳಿಗ...ಗುಳಿಗ...ಗುಳಿಗ...ಗುಳಿಗ...ಘೋರ ಗುಳಿಗಾ...ಈ ಹಾಡು ಸಖತ್ ಸದ್ದು ಮಾಡುತ್ತಿದೆ.

ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಗೋಪಿಸುಂದರ್ ಸಂಗೀತ ಸಂಯೋಜನೆಯಲ್ಲಿ ಈ ಹಾಡು ಮೂಡಿಬಂದಿದೆ. ಖ್ಯಾತ ಬಾಲಿವುಡ್ ಗಾಯಕ ಜಾವೆದ್ ಆಲಿ ಜತೆ ಸುಧೀರ್ ಅತ್ತಾವರ್ ಹಾಡಿಗೆ ದನಿಯಾಗಿದ್ದಾರೆ. ನೆಲವುಲ್ಲ ಸಂಕೆಯ ಇಪ್ಪತ್ತ ನಾಲ್ಕನೆಯು ಮಗನಾಗಿ ಹುಟ್ಟಿದ ಗುಳಿಗ ಹುಟ್ಟುವಾಗಲೇ ಭಯಂಕರ ಹಸಿವಿನಿಂದಾಗಿ ಸಾವಿರ ಕೋಳಿ, ಸಾವಿರ ಕುದುರೆಯ ರಕ್ತ ಹೀರಿದರೂ ಹಸಿವು ನಿಲ್ಲದಿದ್ದಾಗ, ಶ್ರೀಮನ್ನಾರಾಯಣ ದೇವರ ಕಿರು ಬೆರಳಿನಿಂದ ಅವರ ರಕ್ತವನ್ನೆಲ್ಲ ಹೀರಿದ...ಎನ್ನುವ ಜನಪದ ಕಥೆ ಗುಳಿಗನ ಹುಟ್ಟಿನ ಕುರಿತಾಗಿದೆ.

ಇಂತಹ ಘೋರ ಗುಳಿಗನ ಕೋಲ ಸೇವೆಯೂ ಘನ ಘೋರ ರೂಪದಲ್ಲಿ ತುಳುನಾಡಿನಾದ್ಯಂತ ಆಚರಿಸಲ್ಪಡುತ್ತಿದೆ. ರುದ್ರಭಯಂಕರ ಗುಳಿಗ ದೈವ ಪಂಜುರ್ಲಿ ಜತೆ ಸೇರಿ ಕೊರಗಜ್ಜನನ್ನು ಭೇಟಿಯಾಗುವ ಸನ್ನಿವೇಶವು ಚಿತ್ರದಲ್ಲಿ ಮೂಡಿಬರಲಿದೆ. ಗುಳಿಗ ದೈವದ ರಣ ಭಯಂಕರ ನರ್ತನವನ್ನು ಹಾಲಿವುಡ್-ಬಾಲಿವುಡ್‌ನ ಕೊರಿಯೋಗ್ರಾಫರ್ ಸಂದೀಪ್ ಸೋಪರ್ಕರ್ ನಿರ್ವಹಿಸಿದ್ದು, ಪಂಜುರ್ಲಿಯಾಗಿ ಸರ್ದಾರ್ ಸತ್ಯ ಕಾಣಿಸಿಕೊಂಡಿದ್ದಾರೆ. ಈ ಸನ್ನಿವೇಶವನ್ನು ಮಂಗಳೂರಿನ ಸೋಮೇಶ್ವರ ಕಡಲ ಕಿನಾರೆಯಲ್ಲಿ ಸೆರೆಹಿಡಿಯಲಾಗಿದೆ.

ಅನುಪಮ ANUPAMA - DTS (10-30, 1-30, 4-30, 7-30)
VEERESH CINEMAS

ರಾಜಾಜಿನಗರ : ನವರಂಗ್
ಜೆ.ಪಿ.ನಗರ : ಸಿದ್ದೇಶ್ವರ
ಸಿದ್ದಲಿಂಗೇಶ್ವರ
ಆವಲಹಳ್ಳಿ : ವೆಂಕಟೇಶ್ವರ
ಪೀಣ್ಯ : ಭಾರತಿ
ಕಮಲಾನಗರ : ವೀರಭದ್ರೇಶ್ವರ
ಸುಂಕದಕಟ್ಟೆ : ಮೋಹನ್
ರಾಜ್‌ಗೋಪಾಲನಗರ: ಮಾರುತಿ
ಗೊಲ್ಲರಹಟ್ಟಿ : ವೆಂಕಟೇಶ್ವರ
ಬನಶಂಕರಿ : ಕಾಮಾಕ್ಯ
ಕೆಂಗೇರಿ : ರಾಬಿನ್
ಗೌಡನಪಾಳ್ಯ : ಶ್ರೀನಿವಾಸ
ಗೊಟ್ಟಿಗೆರೆ : ಲಕ್ಷ್ಮೀ
ಸಂಜಯನಗರ : ವೈಭವ್
ಆರ್.ಟಿ.ನಗರ : ರಾಧಾಕೃಷ್ಣ
ಉಲ್ಲಾಳ : ವಜ್ರೇಶ್ವರಿ
ಅಗರ : ತಿರುಮಲ
ಕಾಡುಗೋಡಿ : ಶ್ರೀನಿವಾಸ
ಉತ್ತರಹಳ್ಳಿ : ವೈಷ್ಣವಿ ವೈಭವಿ

ಚಿಕ್ಕಲಸಂದ್ರ : Balaji Cinemas : Multiplex
ಯಲಹಂಕ : ಪ್ರಕಾಶ್
ಕೊಡಿಗೆಹಳ್ಳಿ : ರಾಜ್‌ಮುರಳಿ
ಹರಿನಗರ : ವಿನಾಯಕ
ವಿದ್ಯಾಪೀಠ : ಚಂದ್ರೋದಯ
ಮಲ್ಲತ್ತಹಳ್ಳಿ : ವಿ.ಆರ್ ಸಿನಿಮಾಸ್
ಬೊಮ್ಮಸಂದ್ರ : ಬಾಲಾಜಿ
ನೆಲಮಂಗಲ : ರೂಪ
ಅತ್ತಿಬೆಲೆ : ಗೌರಿಶಂಕರ
ಹೆಸರಘಟ್ಟ : ಎಸ್.ಎಲ್.ಎನ್
ಬೇಗೂರ್‌ಮೇನ್‌ರೋಡ್: ಗ್ಯಾಲಕ್ಸಿಪ್ಯಾರಡೈಸ್
ಹೊಸೂರು : ರಾಘವೇಂದ್ರ
ಟಿ.ಸಿ.ಪಾಳ್ಯ : V CINEMAS
PVR INOX: MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD | VEGACITY
cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | GRAND | INNOVATION | INNOVATION BTM | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MULTIPLEX MARATHALLI
KINO CINEMAS SEEGEHALLI
MOVIETIME RR NAGAR

ತುಮಕೂರು : ಮಾರುತಿ, PVR INOX
ತಿಪಟೂರು : ತ್ರಿಮೂರ್ತಿ
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ : ಬಾಲಾಜಿ
ಮಾಲೂರು : ಬಾಲಾಜಿ
ರಾಮನಗರ : ಶಾನ್
ಬಿಡದಿ : ದೀಪಕ್
ಸಿರಾ : ಭಾಗ್ಯಲಕ್ಷ್ಮೀ
ಪಾವಗಡ : ಅಲಂಕಾರ್
ಚನ್ನಪಟ್ಟಣ : ಶಿವಾನಂದ
ಕನಕಪುರ : ವಾಣಿ
ಆನೇಕಲ್ : ಅನ್ನಪೂರ್ಣೇಶ್ವರಿ
ಮಾಗಡಿ : ಬಾಲಾಜಿ
ಕುಣಿಗಲ್ : ಪದ್ಮ
ಕೋಲಾರ : ನಾರಾಯಣಿ
ವಿಜಯಪುರ : ಗೌರಿಶಂಕರ
ಮಧುಗಿರಿ : ಶಾಂತಲಾ
ಕೊರಟಗೆರೆ : ಶಿವಗಂಗಾ
ತುರುವೆಕೆರೆ : ಪೂರ್ಣಿಮಾ
ಬಂಗಾರಪೇಟೆ : ಬಾಲಚಂದರ್
ಮುಳಬಾಗಿಲು : ನಟರಾಜ

ಹೆಬ್.ಕ್ರಾಸ್ : ವೆಂಕಟೇಶ್ವರ
ಮೈಸೂರು : ವುಡ್‌ಲ್ಯಾಂಡ್ಸ್, DRC CINEMAS, PVR INOX GARUDA|FORUM SATYAM|CENTRO, VISION CINEMAS
ಮಂಡ್ಯ : ಮಹಾವೀರ್
ಹಾಸನ : ಎಸ್.ಬಿ.ಜಿ
ಕೊಳ್ಳೆಗಾಲ : ಶಾಂತಿ
ಚಾಮರಾಜನಗರ: ಬಸವೇಶ್ವರ
ಕೆ.ಎಂ.ದೊಡ್ಡಿ : ಮಾರುತಿ
ಮದ್ದೂರು : ಸಂಜಯ
ಹೊಳೆನರಸೀಪುರ: ಚನ್ನಾಂಬಿಕಾ
ಚನ್ನರಾಯಪಟ್ಟಣ: ಗಾಯತ್ರಿ
ಬೆಳ್ಳೂರುಕ್ರಾಸ್: ಮಾರುತಿ
ಮಳವಳ್ಳಿ : ಮಹಾಲಕ್ಷ್ಮೀ
ಟಿ.ನರಸೀಪುರ : ವಿಜಯಭಗವಾನ್
ಬನ್ನೂರು : ಸೋಮೇಶ್ವರ
ಪಾಂಡವಪುರ : ಕೋಕಿಲ
ಕೆ.ಆರ್.ಪೇಟೆ : ಬಸವೇಶ್ವರ
ಪಿರಿಯಾಪಟ್ಟಣ: ಮಹದೇಶ್ವರ

ಕೆ.ಆರ್.ನಗರ : ಗೌರಿಶಂಕರ
ನಂಜನಗೂಡು : ಭಾರ್ಗವಿ
ಗುಂಡ್ಲುಪೇಟೆ : ಸೂರ್ಯ
ಹಲಗೂರು : ರವಿ
ಯಳಂದೂರು : ಮಹದೇಶ್ವರ
ನಾಗಮಂಗಲ : ವೆಂಕಟೇಶ್ವರ
ಅರಸೀಕೆರೆ : ರತ್ನ
ಸಾಲಿಗ್ರಾಮ : ಪದ್ಮಾಂಬ
ಬಾಬುರಾಯನಕೊಪ್ಪಲು: ಭಾರತಿ
ಬೆಳಕವಾಡಿ : ಬೀರೇಶ್ವರ
ಹುಲ್ಲಹಳ್ಳಿ : ಯಜಮಾನ
ಸಾತನೂರು : ವೆಂಕಟೇಶ್ವರ
ಬೇಲೂರು : ರೇಣುಕಾ
ದಾವಣಗೆರೆ : ಅಶೋಕ, MOVIETIME
ಚಿತ್ರದುರ್ಗ : ಬಸವೇಶ್ವರ, MOVIETIME
ಹರಿಹರ : ಜಯಶ್ರೀ
ಬಳ್ಳಾರಿ : ನಟರಾಜಕಾಂಪ್ಲೆಕ್ಸ್, MOVIETIME
ಹೊಸಪೇಟೆ : ಸರಸ್ವತಿ
ಹಿರಿಯೂರು : ನಂಜುಂಡೇಶ್ವರ
ಸಿರುಗುಪ್ಪ : ರಾಮಕೃಷ್ಣ

ಚಳ್ಳಕೆರೆ : ರಾಮಕೃಷ್ಣ
ಜಗಳೂರು : ನಟರಾಜ
ಹಗರಿಬೊಮ್ಮನಹಳ್ಳಿ: ಕೃಷ್ಣ
ಹೊಸದುರ್ಗ : ಜ್ಯೋತಿ
ಮೊಳಕಾಲ್ಮೂರು: ಭಾಗ್ಯಲಕ್ಷ್ಮೀ
ಪರಶುರಾಂಪುರ: ಸಾಗರ್
ಕಂಪ್ಲಿ : ಚಂದ್ರಕಲಾ
ಸಂಡೂರು : ಶ್ರೀನಿವಾಸ
ತೋರಣಗಲ್ಲು : ವಿಜಯಲಕ್ಷ್ಮೀ
ಹೂವಿನಹಡಗಲಿ: ಶಂಕರ್
ಕುರುಗೋಡು : ಎಸ್.ಎಲ್.ವಿ
ಹುಬ್ಬಳ್ಳಿ : ಅಪ್ಸರಾ, LAXMI CITY PRIDE MULTIPLEX, cinépolis
ಬಿಜಾಪುರ : ಲಕ್ಷ್ಮೀ
ಬೆಳಗಾವಿ : ಚಿತ್ರಾ, PVR INOX, KAPEEL CINEMA
ಧಾರವಾಡ : ಪದ್ಮ, PVR INOX
ಗದಗ : ಮಹಾಲಕ್ಷ್ಮೀ
ರಾಣೇಬೆನ್ನೂರು: ಶಂಕರ್

ಬಾಗಲಕೋಟೆ : ವಾಸವಿ
ಇಳಕಲ್ : ಶ್ರೀನಿವಾಸ
ಅಂಕಲಿ : ಮಯೂರ
ಲಕ್ಷ್ಮೇಶ್ವರ : ರವಿ
ಸಿಂಧಗಿ : ವಿನಾಯಕ
ತಾಳಿಕೋಟೆ : ಅಮೀರ್
ರಬಕವಿ : ಶ್ರೀನಿವಾಸ
ಮಹಾಲಿಂಗಪುರ: ಮಾರುತಿ
ರಾಮದುರ್ಗ : ವೆಂಕಟೇಶ್
ಇಂಡಿ : ಮಹಾವೀರ್
ಮುದ್ದೇಬಿಹಾಳ : ಗಿರಿಜಾಶಂಕರ
ಬಸವನಬಾಗೇವಾಡಿ: ಸತ್ಯನಾರಾಯಣ
ಜಮಖಂಡಿ : ಶ್ರೀನಿವಾಸ
ಮುಧೋಳ : ಸುಭಾಶಿನಿ
ಹಾವೇರಿ : ಮಾಗವಿ
ರೋಣ : ಮಲ್ಲಿಕಾರ್ಜುನ
ನಿಡಗುಂದಿ : ಯಲಗೂರೇಶ್ವರ
ಯಾದವಾಡ: ಬಸವೇಶ್ವರ
ಅಣ್ಣಿಗೇರಿ : ಜನತಾ
ಅಥಣಿ : ದುರ್ಗಾಲಕ್ಷ್ಮೀ
ಬಾದಾಮಿ : ಮಹಾಕೂಟೇಶ್ವರ
ಸಂಕೇಶ್ವರ : ಸಾಯಿನಾಥ್
ಬೈಲಹೊಂಗಲ : ಸಂಗಮ್

ಗಜೇಂದ್ರಗಡ : ಅಲಂಕಾರ್
ಶಿಗ್ಗಾಂವ್ : ರಾಜರಾಜೇಶ್ವರಿ
ಬ್ಯಾಡಗಿ : ಶೋಭಾ
ಕಲಬುರ್ಗಿ: ಸಂಗಮ್, PVR INOX, MIRAJ, SHETTY CINEMAS
ಗಂಗಾವತಿ : ಕನಕದುರ್ಗ
ಬೀದರ್ : ಸಪ್ನ
ರಾಯಚೂರು : ಪೂರ್ಣಿಮ, MIRAJ
ಕುಷ್ಟಗಿ : ಬಸವರಾಜ್
ಶಹಪುರ : ಜಯಶ್ರೀ
ದೇವದುರ್ಗ : ಆನಂದ್
ಕೊಪ್ಪಳ : ಶಾರದ
ಕರಟಗಿ : ಪದ್ಮಾವತಿ
ಕನಕಗಿರಿ : ನಂದಿ
ಸಿರವಾರ : ಶಿವಮಾತಾ
ಲಿಂಗಸೂರು : ಎಂಪೈರ್
ಸಿಂಧನೂರು : ಶರಣಬಸವೇಶ್ವರ
ಶಿವಮೊಗ್ಗ : ಮಲ್ಲಿಕಾರ್ಜುನ, Bharath Cinemas
ಚಿಕ್ಕಮಗಳೂರು: ನಾಗಲಕ್ಷ್ಮೀ

ಭದ್ರಾವತಿ : ಸತ್ಯ
ಕಡೂರು: ಅನ್ನಪೂರ್ಣ
ಆನವೇರಿ : ಶ್ರೀದೇವಿ
ಶಿಕಾರಿಪುರ : ಕಿರಣ್
ತೀರ್ಥಹಳ್ಳಿ : ವಿನಾಯಕ
ಕೊಪ್ಪ : ಜೆ.ಎಂ.ಜೆ
ತರೀಕೆರೆ : ವಿನಾಯಕ
ಬಾಳೆಹೊನ್ನೂರು: ಸುದರ್ಶನ್
ಮಂಗಳೂರು : ರಮಾಕಾಂತಿ, PVR INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ : ಅಲಂಕಾರ್, Bharath Cinemas
ಮಣಿಪಾಲ : PVR INOX
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಪುತ್ತೂರು : Bharath Cinemas
ದೇರಳಕಟ್ಟೆ : Bharath Cinemas
ಕಾರ್ಕಳ : ಪ್ಲಾನೆಟ್
ಬೈಂದೂರು : ಶಂಕರ್
ಶಿರಾಳಿ : ವೆಂಕಟೇಶ್ವರ
ಹಾಗೂ ರಾಜ್ಯಾದ್ಯಂತ